ಸಂಪುಟ: 22, ಸಂಚಿಕೆ: 263, ಪುಟಗಳು: 8, ಬುಧವಾರ, 2 ಜುಲೈ 2025 RNI NO. KARKAN/2002/08054
epaper: www.sanjemugilu.com

ಸುದ್ದಿಗಳ ಹೊನಲು
# ಸಂಜೆ ಮುಗಿಲು
ಕನ್ನಡ ಪ್ರಾದೇಶಿಕ ಸಂಜೆ ದಿನಪತ್ರಿಕೆ
ಬೆಂಗಳೂರು। ಬೆಂಗಳೂರು ಗ್ರಾಮಾಂತರ। ಕೋಲಾರ। ಚಿಕ್ಕಬಳ್ಳಾಪುರ। ರಾಮನಗರ। ಮಂಡ್ಯ। ಮೈಸೂರು। ಚಾಮರಾಜನಗರ
₹3


ನೇಣು ಸಾರಥ್ಯದಲ್ಲಿ...


# ದಶಪ್ರಮತಿ ಮುದ್ರಣಾಲಯ
dashapramathi mudranalaya
PRE-PRESS PRINTERS
Contact: +91 9483589085 | e-mail: dashapramathimudranalaya@gmail.com
We Undertake Printing of Newspapers | Tabloids | Magazines


**ಸುಭಾಷಿತ**

ಇಂದು ನೀನು ಜಗತ್ತಿಗೆ ಏನನ್ನು ಕೊಡುತ್ತಿದ್ದೀಯೋ ಮುಂದೊಂದು ದಿನ ಅದು ನಿನಗೆ ಮರಳಿ ಸಿಗಲಿದೆ ಒಳ್ಳೆಯದಾಗಿದ್ದರೆ ಒಳ್ಳೆಯದು, ಕೆಟ್ಟದಾಗಿದ್ದರೆ ಕೆಟ್ಟದ್ದು.

**ಪಂಚಾಂಗ**

(ಬುಧವಾರ 2 ಜುಲೈ-2025)

- ಶ್ರೀ ವಿಶ್ವಾವಸು ನಾಮ ಸಂವತ್ಸರ
- ಉತ್ತರಾಯಣ, ಗ್ರೀಷ್ಮ ಋತು
- ಆಷಾಡ ಮಾಸ, ಶುಕ್ಲ ಪಕ್ಷ
- ತಿಥಿ: ಸಪ್ತಮಿ • ನಕ್ಷತ್ರ: ಉತ್ತರ
- ರಾಹುಕಾಲ: 12:27 ರಿಂದ 2:03
- ಗುಳಿಕಕಾಲ: 10:51 ರಿಂದ 12:27
- ಯಮಗಂಡಕಾಲ: 7:39 ರಿಂದ 9:15

## ಸಂಕ್ಷಿಪ್ತ ಸುದ್ದಿ

### ಅಡ್ವಾಣಿ ಮೇಲೆ ಬಾಂಬ್ ದಾಳಿ ನಡೆಸಲು ಸಂಚು ರೂಪಿಸಿದ್ದ ಉಗ್ರ ಅಬೂಬಕರ್ ಅರೆಸ್ಟ್

**ನವದೆಹಲಿ:** ಭಾರತದ ಮಾಜಿ ಉಪ ಪ್ರಧಾನಿ, ಬಿಜೆಪಿಯ ಹಿರಿಯ ನಾಯಕ ಎಲ್ ಕೆ ಅಡ್ವಾಣಿ ಮೇಲೆ ಬಾಂಬ್ ದಾಳಿ ಸಂಚು ರೂಪಿಸಿದ್ದ ಉಗ್ರ, ಅಬೂಬಕರ್ ನನ್ನು ಭಯೋತ್ಪಾದನಾ ನಿಗ್ರಹ ದಳ ಬಂಧಿಸಿದೆ. 2011ರಲ್ಲಿ ತಮಿಳುನಾಡಿನ ಮಧುರೈನಲ್ಲಿ ನಡೆದ ರಥಯಾತ್ರೆ ಸಂದರ್ಭದಲ್ಲಿ ಅಡ್ವಾಣಿಯವರನ್ನು ಗುರಿಯಾಗಿಸಿಕೊಂಡು ಪೈಪ್ ಬಾಂಬ್ ಇಡಲು ಪ್ರಯತ್ನಿಸಲಾಗಿತ್ತು. ಈ ಪಿತೂರಿಯಲ್ಲಿ ಭಾಗಿಯಾಗಿರುವ ಭಯೋತ್ಪಾದಕನನ್ನು ಸುಮಾರು 30 ವರ್ಷಗಳ ನಂತರ ಆಂಧ್ರಪ್ರದೇಶದಲ್ಲಿ ಬಂಧಿಸಲಾಗಿದೆ. ಎಲ್.ಕೆ. ಅಡ್ವಾಣಿ ಅವರನ್ನು ಗುರಿಯಾಗಿಸಿಕೊಂಡು ಪೈಪ್ ಬಾಂಬ್ ಇಡುವ ಸಂಚಿನಲ್ಲಿ ಭಾಗಿಯಾಗಿದ್ದ ಭಯೋತ್ಪಾದಕನನ್ನು ಅಬೂಬಕರ್ ಸಿದ್ದಿಕಿ ಎಂದು ಗುರುತಿಸಲಾಗಿದೆ.



ಪುಟ 2

### ಆರ್ ಬಿಐನ ನೂತನ ಎಕ್ಸಿಕ್ಯೂಟಿವ್ ಡೈರೆಕ್ಟರ್ ಆಗಿ ಕೇಶವನ್ ರಾಮಚಂದ್ರನ್ ನೇಮಕ




**ನವದೆಹಲಿ:** ಭಾರತೀಯ ರಿಸರ್ವ್ ಬ್ಯಾಂಕ್‌ನ ಎಕ್ಸಿಕ್ಯೂಟಿವ್ ಡೈರೆಕ್ಟರ್‌ಗಳ ಸಾಲಿಗೆ ಮತ್ತೊಬ್ಬರು ಸೇರ್ಪಡೆಯಾಗಿದ್ದಾರೆ. ಆರ್ ಬಿಐನಲ್ಲೇ ಪ್ರಧಾನ ಮುಖ್ಯ ಜನರಲ್ ಮ್ಯಾನೇಜರ್ ಆಗಿದ್ದ ಕೇಶವನ್ ರಾಮಚಂದ್ರನ್ ಅವರನ್ನು ಕಾರ್ಯನಿರ್ವಾಹಕ ನಿರ್ದೇಶಕರಾಗಿ ನೇಮಕ ಮಾಡಲಾಗಿದೆ. ಕೆ ರಾಮಚಂದ್ರನ್ ಅವರು ನಿನ್ನೆಯಿಂದ (ಜುಲೈ 1) ಅಧಿಕಾರ ಪಡೆದಿದ್ದಾರೆ. ಆರ್ ಬಿಐನ ನಿಯಮಾವಳಿ ನೋಡಿಕೊಳ್ಳುವ ರೆಗ್ಯುಲೇಶನ್ ವಿಭಾಗದ ಜವಾಬ್ದಾರಿ ಅವರ ಮೇಲಿದೆ. ಕೇಶವನ್ ರಾಮಚಂದ್ರನ್ ಅವರು ಮೂರು ದಶಕಗಳ ಅನುಭವ ಹೊಂದಿದ್ದಾರೆ. ಬ್ಯಾಂಕಿಂಗ್ ಮತ್ತು ಹಣಕಾಸು ವಿಷಯಗಳಲ್ಲಿ ವಿವಿಧ ಉನ್ನತ ವ್ಯಾಸಂಗ ಮತ್ತು ಸರ್ಟಿಫಿಕೇಟ್‌ಗಳನ್ನು ಹೊಂದಿದ್ದಾರೆ.

ಪುಟ 2

ಬಯಲು ಸೀಮೆ ಜಿಲ್ಲೆಗಳಿಗೆ ಸಿಗುತ್ತಾ ಭರಪೂರ ಕೊಡುಗೆ?

# ನಂದಿಬೆಟ್ಟದಲ್ಲಿಂದು ಸಚಿವ ಸಂಪುಟ ಸಭೆ

**ಬೆಂಗಳೂರು:** ರಾಜ್ಯ ಸರ್ಕಾರದ 14ನೇ ಸಚಿವ ಸಂಪುಟ ಸಭೆ ಇಂದು ಚಿಕ್ಕಬಳ್ಳಾಪುರ ತಾಲೂಕಿನ ವಿಶ್ವವಿಖ್ಯಾತ ನಂದಿಗಿರಿ ಧಾಮದಲ್ಲಿ ನಡೆಯಲಿದೆ. ನಂದಿಬೆಟ್ಟದಲ್ಲಿ ಸಚಿವ ಸಂಪುಟ ಸಭೆಗಾಗಿ ಅಂತಿಮ ಹಂತದ ಸಕಲ ಸಿದ್ಧತೆಗಳು ಭರದಿಂದ ಸಾಗಿವೆ.

ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವ ಡಾ ಎಂಸಿ ಸುಧಾಕರ್ ಅಧಿಕಾರಿಗಳೊಂದಿಗೆ ಮಂಗಳವಾರ ಸಿದ್ಧತೆ ಪರಿಶೀಲನೆ ನಡೆಸಿದ್ದಾರೆ. ನಂದಿಗಿರಿಧಾಮ ಮಧುವಣಗಿತ್ತಿಯಂತೆ ಸಿಂಗಾರಗೊಂಡಿದೆ. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಸೇರಿದಂತೆ ಸಂಪುಟ ಸಹೋದ್ಯೋಗಿಗಳು ಬೆಳಗ್ಗೆ 11:40ಕ್ಕೆ ಚಿಕ್ಕಬಳ್ಳಾಪುರ ತಾಲೂಕಿನ ನಂದಿಗ್ರಾಮಕ್ಕೆ ಆಗಮಿಸಲಿದ್ದಾರೆ.

ಪುಟ 2



# ರೈಲ್ವೆ ಟಿಕೆಟ್ ದರ ಏರಿಕೆಯನ್ನು ತಕ್ಷಣವೇ ಹಿಂಪಡೆಯಬೇಕು

**ಬೆಂಗಳೂರು:** ರೈಲ್ವೇ ಟಿಕೆಟ್ ದರ ಏರಿಕೆಯನ್ನು ತಕ್ಷಣವೇ ಹಿಂಪಡೆಯಬೇಕು. ಕೇಂದ್ರ ಸರ್ಕಾರದ ಬೆಲೆಯೇರಿಕೆಗೆ ರಾಜ್ಯದ ಬಿಜೆಪಿ ನಾಯಕರ ಮೌನ ಖಂಡನೀಯ ಎಂದು ಸಿಎಂ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.



ರೈಲ್ವೆ ಟಿಕೆಟ್ ದರ ಏರಿಕೆ ಕುರಿತು ಮಾಧ್ಯಮ ಪ್ರಕಟಣೆ ಹೊರಡಿಸಿದ ಅವರು, ಸಾಮಾನ್ಯ ಜನರ ಸಾರಿಗೆಯಾಗಿಯೇ ಜನಪ್ರಿಯವಾಗಿರುವ ರೈಲುಗಳ ಪ್ರಯಾಣ ದರವನ್ನು ಹೆಚ್ಚಿಸುವ ಮೂಲಕ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ ದೇಶದ ಕೋಟ್ಯಂತರ ಮಧ್ಯಮ ಮತ್ತು ಬಡವರ್ಗದ ಬದುಕಿನ ಮೇಲೆ ಬರೆ ಎಳೆದಿದೆ. ಈ ಬೆಲೆ ಏರಿಕೆಯನ್ನು ತಕ್ಷಣ ಹಿಂತೆಗೆದುಕೊಳ್ಳಬೇಕೆಂದು ಪ್ರಧಾನಿ ನರೇಂದ್ರ ಮೋದಿಯವರನ್ನು ಒತ್ತಾಯಿಸಿದರು.

ಏರುತ್ತಲೇ ಇರುವ ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲದ ದರಗಳ ಭಾರದಿಂದ ಜನರು ಈಗಾಗಲೇ ತತ್ತರಿಸಿಹೋಗಿದ್ದಾರೆ.

ಪುಟ 2

# ಪ್ರಜ್ವಲ್ ರೇವಣ್ಣಗೆ ಕೋರ್ಟ್ ಡ್ರಿಲ್
# 2 ದಿನದಲ್ಲಿ 240 ಪ್ರಶ್ನೆ!

**ಬೆಂಗಳೂರು:** ಅತ್ಯಾಚಾರ, ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಜೈಲು ಸೇರಿ 1 ವರ್ಷವೇ ಕಳೆದು ಹೋಗಿದೆ. ಮಾಜಿ ಸಂಸದನ ಮೇಲಿನ ಆರೋಪಗಳು ರಾಜ್ಯದಲ್ಲಿ ಕೋಲಾಹಲವನ್ನೇ ಸೃಷ್ಟಿಸಿತ್ತು. ಜೆಡಿಎಸ್ ವರಿಷ್ಠರು ತಲೆ ಎಗ್ಗಿಸುವಂತೆ ಮಾಡಿತ್ತು. ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆ ನಡೆಯುತ್ತಲಿದೆ. ಬೇಲ್ ಪಡೆದು ಹೊರ ಬರುವ ದಿನಕ್ಕಾಗಿ ಪ್ರಜ್ವಲ್ ಕಾಯ್ತಿದ್ದಾರೆ. ಆರೋಪಿ ಹೇಳಿಕೆ ದಾಖಲಿಸುವ ಪ್ರಕ್ರಿಯೆ ನಡೆಸುತ್ತಿರುವ ಕೋರ್ಟ್, ಪ್ರಜ್ವಲ್‌ಗೆ ಆರೋಪಗಳ ಸುರಿಮಳೆಗೈದಿದೆ.

**ಪ್ರಜ್ವಲ್ ರೇವಣ್ಣನಿಗೆ ಪ್ರಶ್ನೆಗಳ ಸುರಿಮಳೆ:** ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಅತ್ಯಾಚಾರ ಪ್ರಕರಣ ಇರುವ ಹಿನ್ನೆಲೆ ಜಾಮೀನು ದೂರದ ಬೆಟ್ಟವಾಗಿದೆ. ಕಳೆದೆರಡು ದಿನಗಳಿಂದ ಕೋರ್ಟ್‌ನಲ್ಲಿ ಆರೋಪಿ ಹೇಳಿಕೆ ದಾಖಲಿಸುವ ಪ್ರಕ್ರಿಯೆಯನ್ನು ಮುಂದುವರಿಸುತ್ತಿದೆ. ಎರಡನೇ ದಿನವೂ ಆರೋಪಿ ಪ್ರಜ್ವಲ್ ರೇವಣ್ಣನಿಗೆ ಪ್ರಶ್ನೆಗಳ ಸುರಿಮಳೆ ಮುಂದುವರಿಯುತ್ತಿದೆ.

**2 ದಿನದಲ್ಲಿ 240 ಪ್ರಶ್ನೆ:** ನಿನ್ನೆ ಕೋರ್ಟ್ ಪ್ರಜ್ವಲ್ ರೇವಣ್ಣನಿಗೆ 155 ಪ್ರಶ್ನೆಗಳನ್ನು ಕೇಳಿದ್ದು, ಅವುಗಳಿಗೆ ಆರೋಪಿ ಉತ್ತರ ಕೊಟ್ಟಿದ್ದಾರೆ. ಕಳೆದ ಎರಡು ದಿನಗಳಿಂದ ಆರೋಪಿ ಹೇಳಿಕೆಗಳನ್ನ ದಾಖಲಿಸುತ್ತಿರುವ ಕೋರ್ಟ್, ಎರಡು ದಿನಗಳಲ್ಲಿ 240 ಪ್ರಶ್ನೆಗಳಿಗೆ ಪ್ರಜ್ವಲ್ ರೇವಣ್ಣ ಅವರಿಂದ ಉತ್ತರ ಪಡೆದಿದೆ. ಇಂದು ಕೂಡ ವಿಚಾರಣೆ ಮುಂದುವರಿಯಲಿದೆ. ವಿಚಾರಣೆಗಾಗಿ ಪ್ರಜ್ವಲ್ ರೇವಣ್ಣ ಹಾಜರಾಗಲಿದ್ದಾರೆ.



**ಪ್ರಜ್ವಲ್‌ಗೆ ಸಹಿ ಹಾಕಲು ಕೋರ್ಟ್ ಅನುಮತಿ:** ಕೆಲವು ದಾಖಲೆಗಳಿಗೆ ಸಹಿ ಪಡೆಯಲು ಪ್ರಜ್ವಲ್ ಪರ ವಕೀಲರಿಂದ ಅರ್ಜಿ ಸಲ್ಲಿಸಲಾಗಿದೆ. ವಕೀಲರ ಮನವಿಯನ್ನು ಪುರಸ್ಕರಿಸಿದ ಕೋರ್ಟ್, ಆದಾಯ ತೆರಿಗೆ, ಚೆಕ್ ಗಳಿಗೆ ಸಹಿ ಸೇರಿ ಕೆಲವು ದಾಖಲೆಗಳಿಗೆ ಪ್ರಜ್ವಲ್ ಸಹಿ ಹಾಕಲು ಅನುಮತಿ ನೀಡಿದೆ. ಜನಪ್ರತಿನಿಧಿಗಳ ವಿಶೇಷ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ.

**ಕೆಲಸದಾಕೆಯ ಮೇಲೆ ನಿರಂತರ ಅತ್ಯಾಚಾರ:** ಮಾಜಿ ಸಚಿವ ರೇವಣ್ಣ ಕುಟುಂಬಕ್ಕೆ ಸೇರಿದ ಫಾರ್ಮ್‌ಹೌಸ್‌ನಲ್ಲಿ ಕೆಲಸ ಮಾಡುತ್ತಿದ್ದ ಕೆಲಸದಾಕೆಯ ಮೇಲೆ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಪದೇ ಪದೇ ಅತ್ಯಾಚಾರ ಎಸಗಿದ್ದಾನೆ ಎಂಬ ಆರೋಪ ಕೇಳಿ ಬಂದಿದೆ. 2021ರ ಸುಮಾರಿಗೆ ಕೋವಿಡ್-ಲಾಕ್ ಡೌನ್ ಮಧ್ಯೆ ಇಂತಹ ಮೊದಲ ಘಟನೆ ನಡೆದಿತ್ತು ಎಂದು ವರದಿ ಆಗಿದೆ.

ಪುಟ 2

### 2,900ಕ್ಕೂ ಹೆಚ್ಚು ವಿಡಿಯೋ ವೈರಲ್?

**2024ರ ಏಪ್ರಿಲ್ ತಿಂಗಳಲ್ಲಿ ಲೋಕಸಭಾ ಚುನಾವಣೆ ಆರಂಭವಾಗುತ್ತಿದ್ದಂತೆ ಹಾಸನ ಜಿಲ್ಲೆಯಲ್ಲಿ ಪ್ರಜ್ವಲ್ ರೇವಣ್ಣ ವಿರುದ್ಧದ ಅಶ್ಲೀಲ ವಿಡಿಯೋಗಳ ಪೆನ್‌ಡ್ರೈವ್ ವೈರಲ್ ಆಗಿದ್ದವು. ಹಲವಾರು ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯವನ್ನು ಚಿತ್ರಿಸುವ 2,900 ಕ್ಕೂ ಹೆಚ್ಚು ವಿಡಿಯೊಗಳು ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿತ್ತು. ಪ್ರಜ್ವಲ್ ರೇವಣ್ಣ ಬಗ್ಗೆ ಮನೆಗೆಲಸದಾಕೆ ದೂರು ನೀಡಿರಲಿಲ್ಲ. ಕೆಲಸ ತೊರೆದ ಬಳಿಕ ಲೈಂಗಿಕ ದೌರ್ಜನ್ಯದ ದೃಶ್ಯಗಳು ಲೀಕ್ ಆದ ಮೇಲೆ ಕಳೆದ ವರ್ಷ ದೂರು ದಾಖಲಿಸಿದರು. ಅಂತಿಮವಾಗಿ ರೇವಣ್ಣ ವಿರುದ್ಧ ನಾಲ್ಕು ಪ್ರಕರಣಗಳು ದಾಖಲಾಗಿದ್ದವು.**

ಸಿಎಂ ಗರಂ ಆಗ್ತಿದ್ದಂತೆ

# ಉಲ್ಟಾ ಹೊಡೆದ ಬಿಆರ್ ಪಾಟೀಲ್?!

**ಬೆಂಗಳೂರು:** ಕಾಂಗ್ರೆಸ್ ಪಕ್ಷದಲ್ಲಿ ಅಸಮಾಧಾನದ ಹೊಗೆಯಾಡ್ತಿದ್ದು, ಕಿಚ್ಚು ಹೆಚ್ಚುವ ಮುನ್ನವೇ ಸುರ್ಜೇವಾಲಾ ತಣ್ಣಾಗಿಸುವ ಕೆಲಸ ಮಾಡ್ತಿದ್ದಾರೆ. ಮುನಿಸಿಕೊಂಡವರನ್ನ ಕರೆದು ಸಭೆ ಮಾಡಿದ್ದಾರೆ. ಸರ್ಕಾರದ ಮೇಲೆ ಗಂಭೀರ ಆರೋಪ ಮಾಡಿದ್ದ ಬಿಆರ್ ಪಾಟೀಲ್ ಜೊತೆ ಕೂಡ ಸಭೆ ನಡೆಸಿ ಸಮಸ್ಯೆ ಆಲಿಸಿದ್ರು. ಇದಾದ ಕೆಲ ಗಂಟೆಗಳಲ್ಲಿ ಬಿಆರ್ ಪಾಟೀಲ್, ಸಿದ್ದರಾಮಯ್ಯ ಲಕ್ಕಿ, ಸಿಎಂ ಆಗಿಬಿಟ್ಟ ಎನ್ನುವ ಶಾಕಿಂಗ್ ವಿಡಿಯೋ ಭಾರೀ ಚರ್ಚೆಗೆ ಕಾರಣವಾಯ್ತು. ವಿವಾದ ಜೋರಾಗ್ತಿದ್ದಾರೆ ವಿಡಿಯೋದಲ್ಲಿ ಆಡಿದ ಮಾತಿನ ವಿಚಾರಕ್ಕೆ ಬಿಆರ್ ಪಾಟೀಲ್ ಉಲ್ಟಾ ಹೊಡೆದಿದ್ದಾರೆ.



**ಬಿಆರ್ ಪಾಟೀಲ್ ಯೂ ಟರ್ನ್:** ಮಾಧ್ಯಮಗಳಲ್ಲಿ ಆಪ್ತರ ಜೊತೆ ಬಿಆರ್ ಪಾಟೀಲ್ ಬೇಸರ ಹೊರ ಹಾಕಿದ ವಿಡಿಯೋ ಪ್ರಸಾರವಾಗ್ತಿದ್ದಂತೆ ವಿವಾದಕ್ಕೆ ತೇಪೆ ಹಚ್ಚುವ ಕೆಲಸ ಮಾಡ್ತಿದ್ದಾರೆ. ನನ್ನ ಹೇಳಿಕೆಯನ್ನು ತಿರುಚಲಾಗಿದೆ ಎಂದು ಬಿಆರ್ ಪಾಟೀಲ್ ಯೂ ಟರ್ನ್ ಹೊಡೆದಿದ್ದಾರೆ.

**ನಮ್ಮ ಸಂಬಂಧ ಹಾಳು ಮಾಡುವ ಯತ್ನ:** ನನ್ನ ಹೇಳಿಕೆಯನ್ನ ತಿರುಚಲಾಗಿದೆ. ಸೋನಿಯಾ ಗಾಂಧಿಯವರನ್ನ ಭೇಟಿ ಮಾಡಲ್ಲ ಎಂದಾಗ ಭೇಟಿ ಮಾಡೋಣ ಎಂದು ಹೇಳಿದ್ದೆ ಅಷ್ಟೇ. ನಮ್ಮ ಸಂಬಂಧ ಹಾಳು ಮಾಡುವ ಯತ್ನ ನಡೀತಿದೆ. ಸಿದ್ದರಾಮಯ್ಯಗೆ ಸಾಥ್ ಕೊಟ್ಟು ನಾನು ಜೆಡಿಎಸ್ ತೊರೆದೆ ಎಂದು ವಿಡಿಯೋದಲ್ಲಿ ಬಿಆರ್ ಪಾಟೀಲ್ ಸ್ಪಷ್ಟೀಕರಣ ನೀಡಿದ್ದಾರೆ.

**ವಿಡಿಯೋದಲ್ಲಿ ಬಿಆರ್ ಪಾಟೀಲ್ ಹೇಳಿದ್ದೇನು?:** ಫೋನ್‌ನಲ್ಲಿ ಆಪ್ತರ ಜೊತೆ ಮಾತಾಡ್ತಿದ್ದ ಶಾಸಕ ಬಿಆರ್ ಪಾಟೀಲ್ ಅವರು, ಸಿದ್ದರಾಮಯ್ಯ ಲಕ್ಕಿ ಲಾಟರಿ ಹೊಡೆದುಬಿಟ್ಟ. ಮುಖ್ಯಮಂತ್ರಿಯೂ ಆಗಿಬಿಟ್ಟ ಎಂದಿದ್ದಾರೆ. ಅಲ್ಲದೇ ಸಿದ್ದರಾಮಯ್ಯಗೆ ಸೋನಿಯಾ ಗಾಂಧಿ ಅವರನ್ನ ಮೊದಲು ಭೇಟಿ ಮಾಡಿಸಿದವನು ನಾನೇ. ಅವನ ಗ್ರಹಚಾರ ಚೆನ್ನಾಗಿತ್ತು ಸಿಎಂ ಆದ. ಇದು ನನ್ನ ಗ್ರಹಚಾರ ಎಂದು ಪರೋಕ್ಷವಾಗಿ ಬಿಆರ್ ಪಾಟೀಲ್ ಬೇಸರ ಹೊರಹಾಕಿದ್ದಾರೆ.

# ಮೆಟ್ರೋ ಯೆಲ್ಲೋ ಲೈನ್ ವಿಳಂಬದಿಂದ ಬಿಎಂಟಿಸಿಗೆ ಲಾಭ!

**ಬೆಂಗಳೂರು:** ಮೆಟ್ರೋ ಯೆಲ್ಲೋ ಮಾರ್ಗ ಉದ್ಘಾಟನೆ ಯಾವಾಗ ಎಂಬ ಸ್ಪಷ್ಟತೆ ಇನ್ನೂ ಇದ್ದ ಹಾಗೇ ಕಾಣಿಸುತ್ತಿಲ್ಲ. ಜನ ಕೂಡ ಈ ಬಗ್ಗೆ ನಂಬಿಕೆ ಬಿಟ್ಟಿದ್ದಾರೆ. ಆದರೆ, ಬಿಎಂಟಿಸಿ ಇದರ ಉಪಯೋಗ ಪಡೆಯಲು ಮುಂದಾಗಿದೆ. ಅದು ಕೂಡ ಹೊಸ ರೀತಿಯ ಬಸ್ ಮಾರ್ಗ ಪರಿಚಯಿಸುವ ಮೂಲಕ. ಹನ್ನೆರಡು ದಿನದ ಹಿಂದಷ್ಟೇ ಬಿಎಂಟಿಸಿ ಬೆಂಗಳೂರಿಗರ ಸಮಯ ಉಳಿತಾಯದ ಕಾರಣ ಹೊಸ ವೇಗದೂತ ಬಸ್‌ಗಳನ್ನು ಪರಿಚಯ ಮಾಡಿತ್ತು. ಸಾಮಾನ್ಯ ಬಸ್ ದರದಲ್ಲಿ ನಗರದ ಆಯ್ದ ಪ್ರದೇಶಗಳಿಗೆ ವೇಗದೂತ ಬಸ್‌ಗಳ ಸಂಪರ್ಕ ಒದಗಿಸಲು ಮುಂದಾಗಿತ್ತು. ಅಂದರೆ, ಒಂದು ಕಡೆಯಿಂದ ತಲುಪಬೇಕಿರುವ ಮತ್ತೊಂದು ಸ್ಥಳಕ್ಕೆ ಕೇವಲ ಎರಡ್ಮೂರು ಸ್ಟಾಪ್ ಮಾತ್ರ ಕೊಟ್ಟು, ಎರಡೂವರೆ ಗಂಟೆ ಸಮಯದ ಪ್ರಯಾಣವನ್ನು ಕೇವಲ 40 ನಿಮಿಷಕ್ಕೆ ಇಳಿಸುವ ಮೂಲಕ ವೇಗದ ಪ್ರಯಾಣಕ್ಕೆ ಅನುವು ಮಾಡಿಕೊಟ್ಟಿತ್ತು.



ಅದರಲ್ಲಿ ಯಾವಾಗಲೂ ಟ್ರಾಫಿಕ್, ಹೆಚ್ಚು ಜನಸಂದಣಿ ಇರುವ ಪ್ರದೇಶಗಳಾದ ನಮ್ಮ ಮೆಟ್ರೋದ ಉದ್ದೇಶಿತ ಯೆಲ್ಲೋ ಮಾರ್ಗ ಕೂಡ ಒಂದು. ಈ ಮಾರ್ಗದಲ್ಲಿ ಮೆಜೆಸ್ಟಿಕ್ ಟು ಅತ್ತಿಬೆಲೆ, ಬನಶಂಕರಿ ಟು ಅತ್ತಿಬೆಲೆ ಮಾರ್ಗಕ್ಕೆ ನಿತ್ಯ ನಾನ್ ಸ್ಟಾಪ್ 343 ಟ್ರಿಪ್ ಸೇವೆ ಒದಗಿಸುವ ಮೂಲಕ ಬಿಎಂಟಿಸಿ ಜನರಿಗೆ ನೆರವಾಗಿದೆ.

ಪುಟ 2

ಮಂಗಳೂರಿನ ಸಹಕಾರಿ ಬ್ಯಾಂಕ್‌ನಲ್ಲಿ 'ಗೋಲ್ಡ್' ಗೋಲ್‌ಮಾಲ್

# ಗ್ರಾಹಕರು ಅಡವಿಟ್ಟ ಚಿನ್ನವನ್ನೇ ಎಗರಿಸಿದ ಕ್ಯಾಷಿಯರ್

**ಮಂಗಳೂರು:** ಮಂಗಳೂರು ಸಹಕಾರಿ ಬ್ಯಾಂಕ್ ಒಂದರಲ್ಲಿ ಭಾರಿ ಗೋಲ್ಡ್ ಗೋಲ್ಮಾಲ್ ನಡೆದಿದೆ. ಗ್ರಾಹಕರು ತಮ್ಮ ಕಷ್ಟಕ್ಕೆ ಅಡವಿಟ್ಟ ಚಿನ್ನಕ್ಕೆ ಅದೇ ಬ್ಯಾಂಕ್‌ನ ಕ್ಯಾಷಿಯರ್ ಕನ್ನ ಹಾಕಿ ಎಗರಿಸಿದ್ದಾನೆ. ಕದ್ದ ಬಂಗಾರವನ್ನು ಬೇರೊಂದು ಬ್ಯಾಂಕ್‌ನಲ್ಲಿ ಅಡವಿಟ್ಟು ಕೋಟ್ಯಂತರ ರೂಪಾಯಿ ಹಣ ಸಾಲ ಪಡೆದು ಮಜಾ ಮಾಡಿ, ಈಗ ಸಿಕ್ಕಿಬಿದ್ದಿದ್ದಾನೆ.



ಮಂಗಳೂರಿನ ಶಕ್ತಿನಗರದ ಪದುವ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್‌ನಲ್ಲಿ ಅದೇ ಬ್ಯಾಂಕ್‌ನ ಕ್ಯಾಷಿಯರ್ ಗ್ರಾಹಕರು ಅಡವಿಟ್ಟ ಚಿನ್ನಕ್ಕೆ ಕನ್ನ ಹಾಕಿದ್ದಾನೆ. ಪ್ರೀತೇಶ್ ಕಳೆದ ಕೆಲ ವರ್ಷಗಳಿಂದ ಈ ಬ್ಯಾಂಕ್ ನಲ್ಲಿ ಕ್ಯಾಷಿಯರ್ ಆಗಿ ಕೆಲಸ ನಿರ್ವಹಿಸುತ್ತಿದ್ದ. ಅದರ ಜೊತೆಗೆ ಗ್ರಾಹಕರು ಸಾಲಕ್ಕಾಗಿ ಚಿನ್ನವನ್ನು ಅಡವಿಟ್ಟಾಗ ಅದರ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಿದ್ದ. ಇತ್ತ ಗ್ರಾಹಕರು ಬ್ಯಾಂಕ್‌ನ ಖಜಾನೆಗೆ ಚಿನ್ನ ಒಪ್ಪಿಸುತ್ತಿದ್ದಂತೆಯೇ ಪ್ರೀತೇಶ್‌ಗೆ ಚಿನ್ನದ ಮೇಲಿನ ವ್ಯಾಮೋಹ ಹೆಚ್ಚಾಗಿದೆ. ಎರಡು ಸಾವಿರಕ್ಕೂ ಅಧಿಕ ಗ್ರಾಹಕರು ಇರುವ ಬ್ಯಾಂಕ್‌ನ ಇಪ್ಪತ್ತಾರು ಗ್ರಾಹಕರ ಚಿನ್ನಕ್ಕೆ ಪ್ರೀತೇಶ್ ಕನ್ನ ಹಾಕಿದ್ದಾನೆ.

ಪುಟ 2

ಬೆಳಗಾವಿ ಮೇಯರ್, ಬಿಜೆಪಿ ಸದಸ್ಯನ ಸದಸ್ಯತ್ವ ರದ್ದು

# ಆದೇಶಕ್ಕೆ ಹೈಕೋರ್ಟ್ ತಡೆ!

**ಬೆಳಗಾವಿ:** ಅಧಿಕಾರ ದುರ್ಬಳಕೆ ಮಾಡಿಕೊಂಡು ತಿನಿಸು ಕಟ್ಟೆಯಲ್ಲಿ ಮಳಿಗೆ ಪಡೆದ ಆರೋಪ ವಿಚಾರಕ್ಕೆ ಸಂಬಂಧಪಟ್ಟಂತೆ ದೊಡ್ಡ ಬೆಳವಣಿಗೆಯಾಗಿದೆ. ದೂರಿನ ಆಧಾರದ ಮೇಲೆ ಪ್ರಾದೇಶಿಕ ಆಯುಕ್ತ ಎಸ್‌ಬಿ ಶೆಟ್ಟೆಣ್ಣವರ್ ಅವರು ಬೆಳಗಾವಿ ಮೇಯರ್, ಪಾಲಿಕೆ ಬಿಜೆಪಿ ಸದಸ್ಯನ ಸದಸ್ಯತ್ವ ರದ್ದು ಮಾಡಿ ಆದೇಶ ಹೊರಡಿಸಿದ್ದರು. ಇದೀಗ ರಾಜ್ಯ ಸರ್ಕಾರಕ್ಕೆ ಮತ್ತೊಂದು ಮುಖಭಂಗವಾಗಿದೆ. ಬೆಳಗಾವಿ ಮೇಯರ್, ಪಾಲಿಕೆ ಬಿಜೆಪಿ ಸದಸ್ಯನ ಸದಸ್ಯತ್ವ ರದ್ದು ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ.

**ಸರ್ಕಾರದ ಆದೇಶಕ್ಕೆ ಹೈಕೋರ್ಟ್ ತಡೆಯಾಜ್ಞೆ:** ಮಂಗೇಶ ಪವಾರ್ ಮತ್ತು ಜಯಂತ ಜಾಧವ್ ಅವರ ಸದಸ್ಯತ್ವವನ್ನು ರದ್ದು ಮಾಡಲು ನಗರಾಭಿವೃದ್ಧಿ ಇಲಾಖೆ ಪ್ರಧಾನ ಕಾರ್ಯದರ್ಶಿ ದೀಪಾ ಚೋಳನ್ ಆದೇಶಿಸಿದ್ದರು. ಈ ಆದೇಶವನ್ನು ಪ್ರಶ್ನಿಸಿ, ಇಬ್ಬರು ಸದಸ್ಯರು ಹೈಕೋರ್ಟ್ ಮೊರೆ ಹೋಗಿದ್ದರು. ಹೈಕೋರ್ಟ್ ಈ ಸರ್ಕಾರದ ಆದೇಶಕ್ಕೆ ತಡೆಯಾಜ್ಞೆ ನೀಡಿದ್ದು, ವಿಚಾರಣೆಯನ್ನು ಮುಂದೂಡಿದೆ.

**ಪತ್ನಿಯರ ಹೆಸರಿನ ಮೇಲೆ ಮಳಿಗೆ:** ನಗರದ ತಿನಿಸು ಕಟ್ಟೆಯಲ್ಲಿ ಪತ್ನಿಯರ ಹೆಸರಿನ ಮೇಲೆ ಮಳಿಗೆ ಪಡೆದ ಆರೋಪವನ್ನು ಇಬ್ಬರು ಮಹಾನಗರ ಪಾಲಿಕೆ ಸದಸ್ಯರು ಎದುರಿಸುತ್ತಿದ್ದಾರೆ. ಈ ಸದಸ್ಯರು, ಈಗ ಹೈಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದಾರೆ.



**ಸಾಮಾಜಿಕ ಹೋರಾಟಗಾರನಿಂದ ದೂರು:** ಬೆಳಗಾವಿ ದಕ್ಷಿಣ ಕ್ಷೇತ್ರದ ಮಹಾನಗರ ಪಾಲಿಕೆಯ ಇಬ್ಬರು ಸದಸ್ಯರುಗಳಾದ ವಾರ್ಡ್ ನಂ 41 ರ ಸದಸ್ಯ, ಮೇಯರ್ ಮಂಗೇಶ ಪವಾರ್ ಹಾಗೂ 23 ರ ಸದಸ್ಯ ಜಯಂತ್ ಜಾಧವ್ ಮೇಲೆ ಆರೋಪ ಕೇಳಿಬಂದಿತ್ತು. ಅಧಿಕಾರ ದುರುಪಯೋಗ ಮಾಡಿಕೊಂಡ ಕುರಿತು ಸಾಮಾಜಿಕ ಹೋರಾಟಗಾರ ಸುಜೀತ್ ಮುಳುಗುಂದ ದೂರು ಸಲ್ಲಿಸಿದ್ದರು.

ಪುಟ 2

ಲಾರಿ, ಕಾರಿನ ಮಧ್ಯೆ ಭೀಕರ ಅಪಘಾತ

# ಓರ್ವ ಸಾವು

**ಶಿವಮೊಗ್ಗ:** ಲಾರಿ ಹಾಗೂ ಕಾರಿನ ಮಧ್ಯೆ ಭೀಕರ ಅಪಘಾತ ಸಂಭವಿಸಿದ ಪರಿಣಾಮ ಕಾರಿನಲ್ಲಿದ್ದ ಓರ್ವ ಸಾವನ್ನಪ್ಪಿದ್ದು, ಮತ್ತೋರ್ವ ಗಂಭೀರ ಗಾಯಗೊಂಡಿರುವ ಘಟನೆ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ತೂದೂರು ಸಮೀಪದ ಬೇಗುವಳ್ಳಿಯಲ್ಲಿ ನಡೆದಿದೆ.

ಪುಟ 2



ಬೈಕ್ ಟ್ಯಾಕ್ಸಿಗೆ ಕೇಂದ್ರದಿಂದ ಅಸ್ತು

# ಮಾರ್ಗಸೂಚಿ ಬಿಡುಗಡೆ

**ನವದೆಹಲಿ:** ರಾಜ್ಯ ಸರ್ಕಾರ ನಿಷೇಧ ಹೇರಿದ ಹಿನ್ನೆಲೆ ಭಾರೀ ಪ್ರತಿಭಟನೆ ನಡೆಯುತ್ತಿರುವ ಹೊತ್ತಲ್ಲೇ ಬೈಕ್ ಟ್ಯಾಕ್ಸಿಗೆ ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಮಾರ್ಗಸೂಚಿಯನ್ನೂ ಬಿಡುಗಡೆ ಮಾಡಿದೆ.

ಕಳದ ಜೂ.16ರಿಂದ ಕರ್ನಾಟಕ ಸರ್ಕಾರ ರಾಜ್ಯದಲ್ಲಿ ಬೈಕ್ ಟ್ಯಾಕ್ಸಿ ಸೇವೆಯನ್ನು ಬ್ಯಾನ್ ಗೊಳಿಸಿತ್ತು. ಈ ಹಿನ್ನೆಲೆ ಇದರ ವಿರುದ್ಧ ಭಾರಿ ಪ್ರತಿಭಟನೆ ನಡೆಯುತ್ತಿದೆ. ಇದೇ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಬೈಕ್ ಟ್ಯಾಕ್ಸಿಗೆ ಅನುಮತಿ ನೀಡಿದೆ.




ಈ ಸಂಬಂಧ ಕೇಂದ್ರ ಸರ್ಕಾರ ಮಾರ್ಗಸೂಚಿಯನ್ನು ಹೊರಡಿಸಿದ್ದು, ನಿಮ್ಮ ಖಾಸಗಿ ಬೈಕ್‌ಗಳನ್ನು ಬಳಸಿಕೊಂಡು ಅಗ್ರಿಗೇಟರ್ ಸೇವೆಗಳನ್ನು ಒದಗಿಸಬಹುದು. ಆದರೆ ಆಯಾ ರಾಜ್ಯ ಸರ್ಕಾರದ ಅನುಮತಿ ಕಡ್ಡಾಯ ಎಂದು ತಿಳಿಸಿದೆ.

ಪುಟ 2

### ಮಾರ್ಗಸೂಚಿಯಲ್ಲಿ ಏನಿದೆ?

- **ರಾಜ್ಯ ಸರ್ಕಾರಗಳು ಖಾಸಗಿ ಬೈಕ್ ಗಳನ್ನು ಪ್ರಯಾಣಿಕರ ಸಂಚಾರಕ್ಕೆ ಬಳಸಲು ಅಗ್ರಿಗೇಟರ್‌ಗಳಿಗೆ ಅನುಮತಿ ಕೊಡಬಹುದು.**
- **ಇದರಿಂದ ಸಂಚಾರ ದಟ್ಟಣೆ, ಮಾಲಿನ್ಯ ನಿಯಂತ್ರಣ, ಕೈಗೆಟುಕುವ ದರದ ಪ್ರಯಾಣ, ಸ್ಥಳೀಯ ಸಾರಿಗೆ ಅಭಿವೃದ್ಧಿ ಮತ್ತು ಜೀವನವನ್ನ ರೂಪಿಸಲು ಅವಕಾಶ ಮಾಡಿಕೊಡಬಹುದು.**
- **ರಾಜ್ಯ ಸರ್ಕಾರಗಳು ಮೋಟಾರು ವಾಹನ ಕಾಯ್ದೆಯ ಸೆಕ್ಷನ್ 67ರ ಸಬ್ ಸೆಕ್ಷನ್ (3) ರ ಅಡಿಯಲ್ಲಿ ಅಗ್ರಿಗೇಟರ್‌ಗಳಿಗೆ ಖಾಸಗಿ ವಾಹನಗಳನ್ನ ಪ್ರಯಾಣಿಕರ ಸಂಚಾರಕ್ಕೆ ಬಳಸಲು ಅನುಮತಿ ಕೊಡಬಹುದು**
- **ಇದರಡಿ ಅಗ್ರಿಗೇಟರ್‌ಗಳಿಗೆ ದೈನಂದಿನ, ವಾರದ, ಹದಿನೈದು ದಿನದ ಅನುಮತಿಗಾಗಿ ಸರ್ಕಾರ ಶುಲ್ಕ ವಿಧಿಸಬಹುದು.**

## ಪ್ರಧಾನಿ ಬದಲಾವಣೆ ಮಾಡಬೇಕೆಂದು ಕೇಳ್ತಿದ್ದಾರೆ: ಸಂತೋಷ್ ಲಾಡ್

**ಹುಬ್ಬಳ್ಳಿ:** ರಾಜ್ಯದ ಸಿಎಂ ಬದಲಾವಣೆ ಮಾತು ಅಷ್ಟೇ ಅಲ್ಲಾ, ದೇಶದ ಪ್ರಧಾನಿ ಬದಲಾವಣೆ ಮಾಡಬೇಕೆಂದು ಕೆಲ ಬಿಜೆಪಿಯವರು ಕೇಳ್ತಿದ್ದಾರೆ ಎಂಬ ನನಗೆ ಮಾಹಿತಿ ಇದೆ ಎಂದು ಸಚಿವ ಸಂತೋಷ್ ಲಾಡ್ ತಿರುಗೇಟು ನೀಡಿದ್ದಾರೆ. ಈ ಬಗ್ಗೆ ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಶಾಸಕರ ಅಸಮಾಧಾನ ವಿಚಾರಕ್ಕೆ ಸಂಬಂಧಿಸಿದಂತೆ, 140 ಶಾಸಕರು ಇರುವ ಪಕ್ಷ. ಹೀಗಾಗಿ ಅಸಮಾಧಾನ ಸಹಜ, ಅವರ ಅಸಮಾಧಾನ ಪಕ್ಷದ ವಿರುದ್ಧ ಅಲ್ಲ. ಸುರ್ಜೇವಾಲ ಅವರು ಅವರ ಜೊತೆ ಮಾತನಾಡುತ್ತಿದ್ದಾರೆ. ಅವರ ಅಸಮಾಧಾನ ಬಗೆಹರಿಸುವ ಕೆಲಸ ಮಾಡುತ್ತಿದ್ದಾರೆ ಎಂದಿದ್ದಾರೆ. ಕಲ್ಲಿದ್ದಲು ಇಲಾಖೆಯಲ್ಲಿ ಭ್ರಷ್ಟಾಚಾರ ಆಗಿಲ್ಲಾ ಅಂತ ಬಿಜೆಪಿ ಸರ್ಕಾರವೇ ಹೇಳಿದೆ. ಯುಪಿಎ ಸರ್ಕಾರದಲ್ಲಿ ಯಾವುದೇ ಹಗರಣ ಆಗಿಲ್ಲ ಎಂದು ಇದೇ ಬಿಜೆಪಿ ಸರ್ಕಾರ ರಿಪೋರ್ಟ್ ಹೇಳಿದೆ. ಇವರ 11 ವರ್ಷದ ಅವಧಿಯಲ್ಲಿ ಯಾರಿಗೆಲ್ಲಾ ಟೆಂಡರ್ ಕೊಟ್ಟಿದ್ದಾರೆ ಅಂತ ಬಿಜೆಪಿ ಹೇಳಲಿ ಎಂದು ಸವಾಲ್ ಹಾಕಿದ್ದಾರೆ. ವಿಶ್ವಗುರು ಪವರಫುಲ್ ಅಂತ ಬರೀ ಹೇಳಿಕೊಂಡು ಅಡ್ಡಾಡಿದ್ರೆ ಸಾಲದು. ಪೆಹಲ್ಗಾಮ್ ಘಟನೆ ಬಗ್ಗೆ ಕೇಳಬಾರದಾ? ಸಮಸ್ಯೆಗಳ ಬಗ್ಗೆ ಮೊದಲು ಚರ್ಚೆ ಮಾಡಬೇಕು. ಚೀನಾ ಮತ್ತು ಭಾರತವನ್ನು ಹೋಲಿಸಿಕೊಂಡು ಮಾತನಾಡಿದರೆ, ಚೀನಾದ ವಸ್ತುಗಳನ್ನು ಬಳಸಬೇಡಿ ಅಂತ ಮೋದಿ ಹೇಳ್ತಾರೆ. ಆದರೆ ಅಲ್ಲಿನ ವಸ್ತುಗಳನ್ನು ಆಮದು ಮಾಡ್ತಿರೋದು ಯಾರು? ದೇಶದ ವಿಚಾರದಲ್ಲಿ ಪ್ರಶ್ನೆ ಕೇಳುವ ಅಧಿಕಾರವಿದೆ. ಬಿಜೆಪಿಯವರ ಫಾರಿನ್ ಪಾಲಿಸಿ ಫೇಲ್ ಆಗಿದೆ ಎಂದು ಕಿಡಿಕಾರಿದ್ದಾರೆ. ಪೆಟ್ರೋಲ್, ಡೀಸೆಲ್, ಸಿನಿಮಾ ಟಿಕೆಟ್ ಮೇಲೆ ಸೆಸ್ ಹಾಕೋ ವಿಚಾರವನ್ನು ಸರ್ಕಾರಕ್ಕೆ ತಿಳಿಸಿದ್ದೇವೆ. ಸ್ವಲ್ಪ ಪ್ರಮಾಣದಲ್ಲಿ ಸೆಸ್ ಹೆಚ್ಚು ಮಾಡುವುದರಿಂದ ಜನರಿಗೆ ಹೆಚ್ಚಿನ ಹೊರೆ ಆಗುವುದಿಲ್ಲ ಎಂದಿದ್ದಾರೆ.

## ಹೆಚ್ಚುತ್ತಿರುವ ಹೃದಯಾಘಾತ ಮೈಸೂರಿನ ಜಯದೇವ ಆಸ್ಪತ್ರೆಗೆ ಜನಸಾಗರ

**ಮೈಸೂರು:** ಹಾಸನದಲ್ಲಿ ಹೃದಯಾಘಾತ ಪ್ರಕರಣಗಳು ಹೆಚ್ಚಾದ ಹಿನ್ನೆಲೆ, ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಗೆ ಜನ ಲಗ್ಗೆ ಇಡುತ್ತಿದ್ದಾರೆ. ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಜಿಲ್ಲೆಗಳಿಂದ ಅಧಿಕ ಸಂಖ್ಯೆಯ ಜನ ಬಂದು ಹೃದಯ ತಪಾಸಣೆ ಮಾಡಿಸಿಕೊಳ್ಳುತ್ತಿದ್ದಾರೆ. ಮುಂಜಾನೆಯೆಯಿಂದಲೇ ಆಸ್ಪತ್ರೆಯ ಓಪಿಡಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರುತ್ತಿದ್ದಾರೆ. ನಿತ್ಯ 150 – 200 ಜನ ಬರುತ್ತಿದ್ದ ರೋಗಿಗಳು ಸಂಖ್ಯೆ ಈಗ ದಿಢೀರನೆ 500 ರಿಂದ 1000ಕ್ಕೆ ಏರಿಕೆಯಾಗಿದೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ವೈದ್ಯ ಸದಾನಂದ್, ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಗೆ ದಿಢೀರನೆ ಹೊರ ರೋಗಿಗಳ ಸಂಖ್ಯೆ ಹೆಚ್ಚಾಗಿದೆ. ಹೀಗೆ ಹೆಚ್ಚಾದ ಹೊರ ರೋಗಿಗಳಲ್ಲಿ ಹಾಸನದ ಭಾಗದ ಜನರ ಸಂಖ್ಯೆಯೆ ಹೆಚ್ಚಾಗಿದೆ ಎಂದು ತಿಳಿಸಿದ್ದಾರೆ. ಹಾಸನದ ಜನ ಹೆಚ್ಚಿನ ಸಂಖ್ಯೆಯಲ್ಲಿ ಹೃದಯದ ತಪಾಸಣೆಗೆ ಬರುತ್ತಿದ್ದಾರೆ. ಇದರಲ್ಲಿ 90%ರಷ್ಟು ಜನಕ್ಕೆ ಯಾವುದೇ ಸಮಸ್ಯೆ ಇಲ್ಲ. ಕೇವಲ ಆತಂಕದಿಂದ ಬಂದಿದ್ದಾರೆ ಎಂದು ಮಾಹಿತಿ ಹಂಚಿಕೊಂಡಿದ್ದಾರೆ.



# ಮುಖ್ಯಮಂತ್ರಿ ಬದಲಾವಣೆ ಊಹಾಪೋಹಗಳಿಗೆ ತೆರೆ ಎಳೆದ ಡಿಕೆಶಿ!



**ಬೆಂಗಳೂರು:** ರಾಜ್ಯ ರಾಜಕಾರಣದಲ್ಲಿ ಕೆಲ ದಿನಗಳಿಂದ ಭಾರೀ ಚರ್ಚೆಯಲ್ಲಿರುವ ವಿಷಯ ಅಂದ್ರೆ ಅದು ಮುಖ್ಯಮಂತ್ರಿ ಬದಲಾವಣೆ. ಪ್ರಸ್ತುತ ಸಿದ್ದರಾಮಯ್ಯನವರು ಸಿಎಂ ಆಗಿದ್ದು, ಕೆಲವೇ ತಿಂಗಳುಗಳಲ್ಲಿ ಅವರು ಅಧಿಕಾರದಿಂದ ಕೆಳಗಿಳಿದು ಡಿಕೆಶಿ ಮುಖ್ಯಮಂತ್ರಿಯಾಗಲಿದ್ದಾರೆ ಎಂಬ ಊಹಾಪೋಹಾಗಳ ಹರಿದಾಡುತ್ತಲೇ ಇದೆ. ಆದ್ರೆ ಈ ಎಲ್ಲಾ ಹೇಳಿಕೆಗಳಿಗೆ ಇದೀಗ ಸ್ವತಃ ಡಿಸಿಎಂ ಡಿಕೆ ಶಿವಕುಮಾರ್ ಅವರೇ ತೆರೆ ಎಳೆದಿದ್ದಾರೆ. ಕರ್ನಾಟಕದ ರಾಜಕೀಯ ವಲಯದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಮ್ಮ ಹೇಳಿಕೆಯ ಮೂಲಕ ಮತ್ತೊಮ್ಮೆ ಎಲ್ಲರ ಗಮನ ಸೆಳೆದಿದ್ದಾರೆ. ಕಾಂಗ್ರೆಸ್ ಪಕ್ಷದೊಳಗಿನ ನಾಯಕತ್ವ ಬದಲಾವಣೆಯ ಊಹಾಪೋಹಗಳಿಗೆ ತೆರೆ ಎಳೆಯುವ ಪ್ರಯತ್ನದಲ್ಲಿ, ಶಿವಕುಮಾರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕೈ ಬಲಪಡಿಸುವ ಜೊತೆಗೆ, ಪಕ್ಷದ ಶಾಸಕರಿಗೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದ್ದಾರೆ. ಅಲ್ಲದೆ, ಎಐಸಿಸಿ ನಾಯಕರ ಸಭೆಯ ಕುರಿತು ಸ್ಪಷ್ಟನೆ ನೀಡಿದ್ದಾರೆ.

**ನಾಯಕತ್ವ ಬದಲಾವಣೆಗೆ ತೆರೆ: ಸಿದ್ದರಾಮಯ್ಯಗೆ ಬೆಂಬಲ:** ಡಿ.ಕೆ. ಶಿವಕುಮಾರ್ ಅವರು ನಾಯಕತ್ವ ಬದಲಾವಣೆ ಬಗ್ಗೆ ಸ್ಪಷ್ಟನೆ ನೀಡಿದ್ದು, ಯಾವುದೇ ನಾಯಕತ್ವ ಬದಲಾವಣೆ ಇಲ್ಲ. ನಾವೆಲ್ಲರೂ ಒಗ್ಗಟ್ಟಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕೈ ಬಲಪಡಿಸುತ್ತೇವೆ. ಈ ಹೇಳಿಕೆಯ ಮೂಲಕ, ಕಾಂಗ್ರೆಸ್ ಸರ್ಕಾರದಲ್ಲಿ ಯಾವುದೇ ಒಳಗೊಳಗಿನ ಭಿನ್ನಾಭಿಪ್ರಾಯ ಇಲ್ಲ ಎಂಬ ಸಂದೇಶವನ್ನು ರವಾನಿಸಿದ್ದಾರೆ. ಇತ್ತೀಚೆಗೆ, ಕೆಲವು ಶಾಸಕರಿಂದ ಸಿಎಂ ಬದಲಾವಣೆಯ ಕುರಿತಾದ ಚರ್ಚೆಗಳು ರಾಜಕೀಯ ವಲಯದಲ್ಲಿ ಕೇಳಿಬಂದಿದ್ದವು. ಈ ಹಿನ್ನೆಲೆಯಲ್ಲಿ, ಶಿವಕುಮಾರ್ ಅವರ ಈ ಹೇಳಿಕೆಗಳಿಗೆ ಸ್ಪಷ್ಟನೆ ನೀಡಿದ್ದಾರೆ.

**ಶಾಸಕ ಇಕ್ಬಾಲ್ ಹುಸೇನ್‌ಗೆ ನೋಟೀಸ್:** ರಾಮನಗರ ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಅವರು ಇತ್ತೀಚೆಗೆ, ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗುವುದು ಖಚಿತ ಎಂದು ಹೇಳಿಕೆ ನೀಡಿದ್ದರು, ಇದು ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿತ್ತು. ಈ ಹೇಳಿಕೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ಡಿಕೆ ಶಿವಕುಮಾರ್, ಇಕ್ಬಾಲ್ ಹುಸೇನ್‌ಗೆ ನಾನು ನೋಟೀಸ್ ಇಶ್ಯೂ ಮಾಡುತ್ತೇನೆ. ಇನ್ಮುಂದೆ ಯಾರೂ ಕೂಡ ಮಾಧ್ಯಮಗಳ ಮುಂದೆ ಇಂತಹ ಹೇಳಿಕೆಗಳನ್ನು ನೀಡಬಾರದು ಎಂದು ಖಡಕ್ ಎಚ್ಚರಿಕೆ ನೀಡಿದ್ದಾರೆ.

ಅಲ್ಲದೆ, ಇಕ್ಬಾಲ್ ಹುಸೇನ್‌ರಂತೆಯೇ ಬಿ.ಆರ್. ಪಾಟೀಲ್, ಬಾಲಕೃಷ್ಣ ಮುಂತಾದ ಶಾಸಕರಿಗೂ ಶಿವಕುಮಾರ್ ಎಚ್ಚರಿಕೆ ನೀಡಿದ್ದಾರೆ. ಯಾರೇ ಆಗಿರಲಿ, ಪಕ್ಷದ ಒಗ್ಗಟ್ಟಿಗೆ ಧಕ್ಕೆ ತರುವಂತಹ ಹೇಳಿಕೆಗಳನ್ನು ನೀಡಿದರೆ ಸಹಿಸಲಾಗುವುದಿಲ್ಲ ಎಂದು ಹೇಳಿದ್ದಾರೆ. ಈ ಮೂಲಕ, ಶಾಸಕರಿಗೆ ಮಾಧ್ಯಮಗಳ ಮೂಲಕ ಬಹಿರಂಗವಾಗಿ ಚರ್ಚೆ ನಡೆಸದಂತೆ ಸೂಚನೆ ನೀಡಲಾಗಿದೆ.

**ಎಐಸಿಸಿ ಸಭೆ: ಪಕ್ಷ ಸಂಘಟನೆಗೆ ಒತ್ತು:** ಕಾಂಗ್ರೆಸ್‌ನ ರಾಷ್ಟ್ರೀಯ ನಾಯಕ, ರಾಜ್ಯದ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಶಾಸಕರ ಜೊತೆ ಒನ್–ಟು–ಒನ ಸಭೆ ನಡೆಸುತ್ತಿರುವ ಕುರಿತು ಊಹಾಪೋಹಗಳು ಹರಡಿದ್ದವು. ಈ ಬಗ್ಗೆ ಸ್ಪಷ್ಟನೆ ನೀಡಿರುವ ಡಿಕೆ ಶಿವಕುಮಾರ್, ಯಾರಿಗೂ ಗಾಬರಿಯಾಗುವ ಅಗತ್ಯವಿಲ್ಲ. ಈ ಸಭೆಯು ಕಾಂಗ್ರೆಸ್ ಪಕ್ಷದ ಸಂಘಟನೆಗೆ ಸಂಬಂಧಿಸಿದ್ದಾಗಿದೆ. ಇಡೀ ದೇಶದಾದ್ಯಂತ ಬ್ಲಾಕ್ ಕಾಂಗ್ರೆಸ್ ಮತ್ತು ಜಿಲ್ಲಾ ಕಾಂಗ್ರೆಸ್‌ನಲ್ಲಿ ಬದಲಾವಣೆ ತರುವ ಕೆಲಸ ನಡೆಯುತ್ತಿದೆ ಎಂದು ತಿಳಿಸಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬೆಳಗಾವಿಯಲ್ಲಿ ಈ ವರ್ಷವನ್ನು ಸಂಘಟನೆಯ ವರ್ಷ ಎಂದು ಘೋಷಿಸಿದ್ದಾರೆ. ಇದರ ಭಾಗವಾಗಿ, ದೆಹಲಿಯಲ್ಲಿ ಎಐಸಿಸಿ ನಾಯಕರು ಸಭೆ ನಡೆಸಿ, ಪಕ್ಷದ ಸಂಘಟನೆಗೆ ಸಂಬಂಧಿಸಿದಂತೆ ಯಾವ ಬದಲಾವಣೆಗಳು ಅಗತ್ಯ, ಎಲ್ಲಿ ಯಾವ ಕಟ್ಟಡಗಳನ್ನು ಕಟ್ಟಬೇಕು ಎಂಬಿತ್ಯಾದಿ ವಿಷಯಗಳ ಬಗ್ಗೆ ಚರ್ಚೆ ನಡೆಸಿದ್ದಾರೆ. ಇದು ಕೇವಲ ಪಕ್ಷದ ಸಂಘಟನೆಗೆ ಸಂಬಂಧಿಸಿದ ಸಭೆಯಾಗಿದ್ದು, ಇದರಲ್ಲಿ ಯಾವುದೇ ರಾಜಕೀಯ ಒಳಸಂಚು ಇಲ್ಲ ಎಂದು ಡಿಕೆಶಿ ಸ್ಪಷ್ಟಪಡಿಸಿದ್ದಾರೆ.

## ಕಾಂಗ್ರೆಸ್ ಸರ್ಕಾರಕ್ಕೆ ಮತ್ತೊಂದು ಹಿನ್ನಡೆ! ವಾಲ್ಮೀಕಿ ಹಗರಣ ಸಿಬಿಐ ತನಿಖೆಗೆ

**ಬೆಂಗಳೂರು:** ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ 187 ಕೋಟಿ ರೂಪಾಯಿ ಅವ್ಯವಹಾರ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಹೈಕೋರ್ಟ್ ಮಾಜಿ ಸಚಿವ ಬಿ ನಾಗೇಂದ್ರ ಹಾಗೂ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಬಿಗ್ ಶಾಕ್ ನೀಡಿದೆ. ಅಂದಹಾಗೆ ಈ ಪ್ರಕರಣದ ತನಿಖೆಯನ್ನು ಸದ್ಯ ಸಿಬಿಐಗೆ ವಹಿಸಿ ಹೈಕೋರ್ಟ್ ಆದೇಶ ಹೊರಡಿಸಿದೆ.

ಸದ್ಯ, ಮಹರ್ಷಿ ವಾಲ್ಮೀಕಿ ನಿಗಮದಲ್ಲಿ ನಡೆದಿದೆ ಎನ್ನಲಾದ 187 ಕೋಟಿ ರೂಪಾಯಿ ಅವ್ಯವಹಾರ ಹಗರಣಕ್ಕೆ ಸಂಬಂಧಿಸಿದಂತೆ ಸಿಬಿಐ ತನಿಖೆ ಕೋರಿದ್ದ ರಾಜ್ಯ ಬಿಜೆಪಿ ನಾಯಕರು ಸಲ್ಲಿಸಿದ್ದ ಅರ್ಜಿಯನ್ನು ಪುರಸ್ಕರಿಸಿದೆ. ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಬಿಜೆಪಿ ಶಾಸಕ ಅರವಿಂದ ಲಿಂಬಾವಳಿ ಸೇರಿ ಮತ್ತಿತರರು ಸಲ್ಲಿಸಿದ ಅರ್ಜಿಯನ್ನು ಹೈಕೋರ್ಟ್ ಮಾನ್ಯ ಮಾಡಿದೆ.




**ಏನಿದು ಮಹರ್ಷಿ ವಾಲ್ಮೀಕಿ ಬಹುಕೋಟಿ ಹಗರಣ?:** ರಾಜ್ಯ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧೀಕ್ಷಕ ಚಂದ್ರಶೇಖರನ್.ಪಿ (52) ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವ ಬಿ ನಾಗೇಂದ್ರ ಅವರು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ಕೂಡ ನೀಡಿದ್ದರು. ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಮುಖ್ಯ ಖಾತೆಯಲ್ಲಿ ಹಿಂದಿನ ಸಾಲಿನ ಹಾಗೂ 2024–25 ನೇ ಸಾಲಿನ ಯೋಜನೆಗಳಿಗೆ ಮೀಸಲಿಟ್ಟ 187 ಕೋಟಿ ಮೊತ್ತದಲ್ಲಿ 88 ಕೋಟಿ ಹಣವನ್ನು ನಿಗಮದ ಅಧ್ಯಕ್ಷರ ಗಮನಕ್ಕೂ ಬಾರದೇ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಎಂ.ಜಿ ರಸ್ತೆಯ ಶಾಖೆಯ ಅನಧಿಕೃತ ಖಾತೆಗೆ ವರ್ಗಾವಣೆ ಮಾಡಲಾಗಿದೆ ಎಂದು ಆರೋಪಿಸಲಾಗಿತ್ತು.

ಬ್ಯಾಂಕ್‌ನವರು ಫೆ. 26ರಂದು ನಿಗಮದ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಲೆಕ್ಕಾಧಿಕಾರಿಗಳ ಸಹಿ ಪಡೆದು ನಿಗಮದ ಖಾತೆಯಿಂದ ಬೇರೆ ಬೇರೆ ಖಾತೆಗಳಿಗೆ ಹಂತ–ಹಂತವಾಗಿ 187.33 ಕೋಟಿ ರೂ. ವರ್ಗಾವಣೆ ಮಾಡಿದ್ದರು. ಮಾರ್ಚ್ 4ರಂದು 25 ಕೋಟಿ ರೂಪಾಯಿ, ಮಾ. 6ರಂದು 25 ಕೋಟಿ ರೂಪಾಯಿ, ಮಾ. 21ರಂದು 44 ಕೋಟಿ ರೂಪಾಯಿ, ಮಾರ್ಚ್ 22ರಂದು 43.33 ಕೋಟಿ ರೂ. ಹಾಗೂ ಮೇ 21ರಂದು 50 ಕೋಟಿ ರೂ. ವರ್ಗಾವಣೆಯಾಗಿತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ ವಾಲ್ಮೀಕಿ ನಿಗಮದ ಎಂಡಿ ಜೆ.ಜೆ ಪದ್ಮನಾಭ ಹಾಗೂ ಲೆಕ್ಕಾಧಿಕಾರಿ ಪರಶುರಾಮ್ ರನ್ನು ರಾಜ್ಯ ಸರ್ಕಾರ ಅಮಾನತುಗೊಳಿಸಿತ್ತು. ಸರ್ಕಾರದ ಪೂರ್ವ ಅನುಮತಿ ಪಡೆದು ಬ್ಯಾಂಕ್ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ಮಾಡಲಾಗಿತ್ತು. ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಬ್ಯಾಂಕ್ ಎಂಡಿ ಹಾಗೂ ಸಿಇಓ ಹಾಗೂ ಎಲ್ಲಾ ನಿರ್ದೇಶಕರ ಮೇಲೆ ಎಫ್ ಐಆರ್ ದಾಖಲಾಗಿತ್ತು. 6 ಜನ ಬ್ಯಾಂಕ್ ಅಧಿಕಾರಿಗಳ ಮೇಲೆ ಪ್ರಕರಣ ದಾಖಲಾಗಿತ್ತು.

## ಸಿಎಟಿ ಆದೇಶಕ್ಕೆ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ: ಸಿಎಂ

**ಬೆಂಗಳೂರು:** ಚಿನ್ನಸ್ವಾಮಿ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಐಪಿಎಸ್ ಅಧಿಕಾರಿಗಳ ಅಮಾನತು ಆದೇಶವನ್ನು ರದ್ದು ಮಾಡಿರುವ ಸಿಎಟಿಗೆ (ಕೇಂದ್ರೀಯ ಆಡಳಿತ ನ್ಯಾಯಮಂಡಳಿ) ಮೇಲ್ಮನವಿ ಸಲ್ಲಿಸುವ ಅವಕಾಶವಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕೇಂದ್ರ ಕಚೇರಿ ವಾರ್ತಾ ಸೌಧದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಐಪಿಎಸ್ ಅಧಿಕಾರಿಗಳ ಅಮಾನತು ಆದೇಶವನ್ನು ರದ್ದು ಮಾಡಿರುವ ಕೇಂದ್ರೀಯ ಆಡಳಿತ ನ್ಯಾಯಮಂಡಳಿಗೆ ಮೇಲ್ಮನವಿ ಸಲ್ಲಿಸುವ ಅವಕಾಶವಿದ್ದು, ಈ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಶಾಸಕ ಬಿ.ಆರ್.ಪಾಟೀಲ್ ಅವರ ಸಿದ್ದರಾಮಯ್ಯನವರು ಅದೃಷ್ಟದಿಂದ ಮುಖ್ಯಮಂತ್ರಿಯಾಗಿದ್ದಾರೆ ಎಂಬ ಹೇಳಿಕೆಗೆ ಪ್ರತಿಕ್ರಿಯೆ ನೀಡುತ್ತಾ, ಅವರ ಹೇಳಿಕೆ ಬಗ್ಗೆ ಮಾಹಿತಿಯಿಲ್ಲ. ಬಿ.ಆರ್.ಪಾಟೀಲ್ ಹಾಗೂ ನಾನು ಒಟ್ಟಿಗೆ ಶಾಸಕರಾಗಿದ್ದರಿಂದ ಹಾಗೂ ನನಗೆ ಮುಖ್ಯಮಂತ್ರಿಯಾಗಲು ಅವಕಾಶ ದೊರೆತಿದ್ದರಿಂದ, ಬಿ.ಆರ್.ಪಾಟೀಲ್‌ರವರು ಈ ರೀತಿ ಹೇಳಿಕೆ ನೀಡಿರಬಹುದು ಎಂದರು. ಇದೇ ವೇಳೆ ಜಾತಿಗಣತಿ ನಡೆಸಲಾಗಿದೆ ಎಂಬ ಪೋಸ್ಟರ್ ಗಳನ್ನು ಮನೆಗಳಿಗೆ ಭೇಟಿ ನೀಡದೇ, ಮನೆಯ ಮುಂದೆ ಅಂಟಿಸುತ್ತಿರುವ ಬಗ್ಗೆ ಪ್ರತಿಕ್ರಿಯಿಸುವ ಬಗ್ಗೆ, ಜಾತಿಗಣತಿ ನಡೆಸಲು ಹಲವು ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಆನ್‌ಲೈನ್ ಮೂಲಕವೂ ಜಾತಿವಿವರಗಳನ್ನು ನೀಡಬಹುದು ಎಂದರು.

## ವಿದ್ಯಾರ್ಥಿಗಳಿಗೆ 500 ಶಾಲಾ ಬ್ಯಾಗ್ ವಿತರಣೆ

**ಮೈಸೂರು:** ಶಿಕ್ಷಣವನ್ನು ಬೆಂಬಲಿಸುವ ಹೃದಯ ಸ್ಪರ್ಶಿ ಪ್ರಯತ್ನವಾಗಿ, ಯೂತ್ ಫಾರ್ ಸೇವಾ (ವೈಎಫ್‌ಎಸ್) ಮೈಸೂರು ವಿಭಾಗವು ಟೆಕ್ಸಾಸ್ ಇನ್ಸ್ಟ್ರುಮೆಂಟ್ಸ್ ಸಹಯೋಗದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸಿದ್ದರಾಮನಹುಂಡಿಯಲ್ಲಿ ಶಾಲಾ ಕಿಟ್ ಡ್ರೈವ್ ಅನ್ನು ಯಶಸ್ವಿಯಾಗಿ ಆಯೋಜಿಸಿತು.



ಈ ಕಾರ್ಯಕ್ರಮದಲ್ಲಿ ಟೆಕ್ಸಾಸ್ ಇನ್ಸ್ಟ್ರುಮೆಂಟ್ಸ್ ಸಂಸ್ಥೆಯನ್ನು ಪ್ರತಿನಿಧಿಸಿದ ಸ್ವಯಂಸೇವಕರಾದ ತ್ರಿಷಾ, ಸುನಿತಾ, ಅಕ್ಷಯ್ ಮತ್ತು ನಿತ್ಯಾ ಉತ್ಸಾಹದಿಂದ ಭಾಗವಹಿಸಿದರು. ವೈಎಫ್‌ಎಸ್ ಸ್ವಯಂಸೇವಕರಾದ ದೀಪಕ್, ಪ್ರೀತಿ, ಪ್ರತಿಕ್, ವೈಷ್ಣವಿ ಮತ್ತು ಪ್ರೇಮ್ ಕುಮಾರ್ ಅವರೊಂದಿಗೆ ಸೇರಿ, ಆರ್ಥಿಕವಾಗಿ ಹಿಂದುಳಿದ ಹಿನ್ನೆಲೆಯ ವಿದ್ಯಾರ್ಥಿಗಳಿಗೆ 500 ಶಾಲಾ ಬ್ಯಾಗ್ ಗಳನ್ನು ವಿತರಿಸಿದರು, ಶಿಕ್ಷಣದಲ್ಲಿ ಅವರು ಮುಂದೆ ಹೋಗಲು ಪ್ರೇರಣೆ ನೀಡುವ ಉದ್ದೇಶವನ್ನು ಹೊಂದಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ವೈಎಫ್‌ಎಸ್ ಮೈಸೂರು ವಿಭಾಗದ ವಿಎಮ್ ಸಂಯೋಜಕರಾದ ದೀಪಕ್, ಶಿಕ್ಷಣ ಕ್ಷೇತ್ರವನ್ನು ಬೆಳೆಸಲು ಸ್ವಯಂಸೇವಾ ಚಟುವಟಿಕೆಗಳ ಮೂಲಕ ತೋರಿಸಿದ ದುಡಿಮೆ ಮತ್ತು ಬೆಂಬಲಕ್ಕಾಗಿ ಟೆಕ್ಸಾಸ್ ಇನ್ಸ್ಟ್ರುಮೆಂಟ್ಸ್ ಗೆ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಿದರು.

ಶಾಲಾ ಕಿಟ್ ಡ್ರೈವ್ ಯೂತ್ ಫಾರ್ ಸೇವಾ ಮತ್ತು ಟೆಕ್ಸಾಸ್ ಇನ್ಸ್ಟ್ರುಮೆಂಟ್ಸ್ ಎರಡೂ ಸಂಸ್ಥೆಗಳ ಯುವ ಮನಸ್ಸುಗಳನ್ನು ಪೋಷಿಸಿ, ಸಮುದಾಯ ಸೇವೆಯ ಮೂಲಕ ಬೆಳಕಿನ ಭವಿಷ್ಯ ನಿರ್ಮಿಸಲು ಹೊಂದಿರುವ ಸಂಕಲ್ಪವನ್ನು ಪ್ರತಿಬಿಂಬಿಸುತ್ತದೆ.

# ಐಪಿಎಸ್ ವಿಕಾಸ್ ಕುಮಾರ್ ಅಮಾನತು ರದ್ದು ಪ್ರಶ್ನಿಸಿ ಹೈಕೋರ್ಟ್ ಮೊರೆಹೋದ ಸರ್ಕಾರ

**ಬೆಂಗಳೂರು:** ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಸಂಭವಿಸಿದ್ದ ಕಾಲ್ತುಳಿತ ಪ್ರಕರಣ ಸಂಬಂಧ ಐಪಿಎಸ್ ಅಧಿಕಾರಿ ವಿಕಾಸ್ ಕುಮಾರ್ ಅವರ ಅಮಾನತು ಆದೇಶವನ್ನು ರದ್ದುಗೊಳಿಸಿದ ಕೇಂದ್ರ ಆಡಳಿತಾತ್ಮಕ ನ್ಯಾಯಮಂಡಳಿ ಕ್ರಮದ ವಿರುದ್ಧ ಕರ್ನಾಟಕ ಸರ್ಕಾರ ಹೈಕೋರ್ಟ್ ಮೆಟ್ಟಿಲೇರಿದೆ. ತುರ್ತು ವಿಚಾರಣೆ ಕೋರಿ ಹೈಕೋರ್ಟ್ ವಿಭಾಗೀಯ ಪೀಠಕ್ಕೆ ಸರ್ಕಾರದ ಪರ ಎಜಿ ಶಶಿಕಿರಣ್ ಶೆಟ್ಟಿ ಅರ್ಜಿ ಸಲ್ಲಿಸಿದ್ದಾರೆ.

ಕರ್ನಾಟಕ ಸರ್ಕಾರದ ಅರ್ಜಿಯನ್ನು ಕೈಗೆತ್ತಿಕೊಂಡ ಹೈಕೋರ್ಟ್ ವಿಭಾಗೀಯ ಪೀಠ, ಇಂದೇ ವಿಚಾರಣೆಯಾಗಬೇಕೆಂಬ ತರಾತುರಿ ಯಾಕೆ ಎಂದು ಪ್ರಶ್ನಿಸಿದೆ. ಇದಕ್ಕೆ ಉತ್ತರಿಸಿದ ಎಜಿ ಶಶಿಕಿರಣ್ ಶೆಟ್ಟಿ, ಸಿಎಟಿ ಆದೇಶದ ಕಾರಣ ಅಧಿಕಾರ ವಹಿಸಿಕೊಳ್ಳಲು ಅಧಿಕಾರಿ ಮುಂದಾಗಿದ್ದಾರೆ. ಹೀಗಾಗಿ ತುರ್ತು ವಿಚಾರಣೆ ನಡೆಸಬೇಕು ಎಂದು ಮನವಿ ಮಾಡಿದರು. ಕೊನೆಯದಾಗಿ, ಬುಧವಾರ ವಿಚಾರಣೆ ನಡೆಸಲಾಗುವುದು ಎಂದು ವಿಭಾಗೀಯ ಪೀಠ ತಿಳಿಸಿತು.




ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಸಂಭವಿಸಿದ್ದ ಕಾಲ್ತುಳಿತದ ನಂತರ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡಿದ್ದ ಸರ್ಕಾರ, ಆಗಿನ ಪೊಲೀಸ್ ಆಯುಕ್ತ ಬಿ ದಯಾನಂದ್, ಐಪಿಎಸ್ ಅಧಿಕಾರಿ ವಿಕಾಸ್ ಕುಮಾರ್ ಸೇರಿದಂತೆ ಹಲವರನ್ನು ಅಮಾನತುಗೊಳಿಸಿ ಆದೇಶ ಹೊರಡಿಸಿತ್ತು. ಇದರ ವಿರುದ್ಧ ವಿಕಾಸ್ ಕುಮಾರ್ ಕೇಂದ್ರ ಆಡಳಿತಾತ್ಮಕ ನ್ಯಾಯಮಂಡಳಿ ಮೊರೆ ಹೋಗಿದ್ದರು.

ವಿಕಾಸ್ ಕುಮಾರ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ್ದ ಕೇಂದ್ರ ಆಡಳಿತಾತ್ಮಕ ನ್ಯಾಯಮಂಡಳಿ, ರಾಜ್ಯ ಸರ್ಕಾರಕ್ಕೆ ನೋಟಿಸ್ ನೀಡಿ ವಿವರಣೆ ಕೋರಿತ್ತು. ನಂತರ, ನ್ಯಾಯಮೂರ್ತಿ ಬಿಕೆ ಶ್ರೀವಾತ್ಸವ ಮತ್ತು ಸಂತೋಷ್ ಮೆಹ್ರಾ ಅವರಿದ್ದ ಪೀಠ ಅರ್ಜಿಯ ವಿಚಾರಣೆ ನಡೆಸಿತ್ತು. ಮಂಗಳವಾರ ತೀರ್ಪು ಪ್ರಕಟಿಸಿ, ಕರ್ನಾಟಕ ಸರ್ಕಾರದ ನಿರ್ಧಾರವನ್ನು ರದ್ದುಪಡಿಸಿ ಆದೇಶ ನೀಡಿತ್ತು. ಇದರಿಂದಾಗಿ ರಾಜ್ಯ ಸರ್ಕಾರಕ್ಕೆ ತೀವ್ರ ಮುಖಭಂಗವಾಗಿತ್ತು. ಹೀಗಾಗಿ ಇದೀಗ ಸಿಎಟಿ ಆದೇಶದ ವಿರುದ್ಧ ಹೈಕೋರ್ಟ್ ಗೆ ಅರ್ಜಿ ಸಲ್ಲಿಸಿದೆ.

ಜೂನ್ 3 ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರ್ ಸಿಬಿಯ ಐಪಿಎಲ್ ವಿಜಯೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದ್ದು, ಆ ಸಂದರ್ಭ ಸಂಭವಿಸಿದ್ದ ಕಾಲ್ತುಳಿತದಲ್ಲಿ 11 ಮಂದಿ ಮೃತಪಟ್ಟು, ಸುಮಾರು 40 ಮಂದಿ ಗಾಯಗೊಂಡಿದ್ದರು.

# ನಡೆದುಕೊಂಡು ಆಸ್ಪತ್ರೆಗೆ ಬಂದ ವ್ಯಕ್ತಿಗೆ ಕೆಲವೇ ಕ್ಷಣಗಳಲ್ಲಿ ಮೆದುಳು ನಿಷ್ಕ್ರಿಯ!

**ದೇವನಹಳ್ಳಿ:** ಆಸ್ಪತ್ರೆಗೆ ನಡೆದುಕೊಂಡು ಬಂದ ವ್ಯಕ್ತಿಯ ಮೆದುಳು ಕೆಲವೆ ನಿಮಿಷಗಳಲ್ಲಿ ನಿಷ್ಕ್ರಿಯವಾಗಿರುವಂತಹ ಅಚ್ಚರಿ ಘಟನೆಯೊಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ನಗರದ ಸಿಲಿಕಾನ್ ಸಿಟಿ ಆಸ್ಪತ್ರೆಯಲ್ಲಿ ನಡೆದಿದೆ. ಹೊಸಕೋಟೆಯ ನಿವಾಸಿ ಕೋನಪ್ಪ (52) ಬ್ರೈನ್ ಡೆಡ್ ಆದ ವ್ಯಕ್ತಿ. ಇತ್ತ ಬ್ರೈನ್ ಡೆಡ್ ವಿಷಯ ತಿಳಿದ ಕುಟುಂಬಸ್ಥರು ಕಂಗಾಲಾಗಿದ್ದಾರೆ.



**ನಡೆದದ್ದೇನು?:** ಬೆಳಗ್ಗೆಯಿಂದ ಕೂಡ ಲವಲವಿಕೆಯಿಂದಲ್ಲೇ ಇದ್ದ ಕೋನಪ್ಪ, ಏಕಾಏಕಿ ಎದೆ ನೋವು ಅಂತ ನಡೆದುಕೊಂಡು ಸಿಲಿಕಾನ್ ಸಿಟಿ ಆಸ್ಪತ್ರೆಗೆ ಬಂದಿದ್ದಾರೆ. ಈ ವೇಳೆ ವೈದ್ಯರು ಚಿಕಿತ್ಸೆ ನೀಡಲು ಮುಂದಾಗುತ್ತಿದ್ದಂತೆ ಕಾರ್ಡಿಯಾಕ್ ಅರೆಸ್ಟ್ ನಿಂದ ಕುಸಿದು ಬಿದಿದ್ದಾರೆ. ತಕ್ಷಣ ಮತ್ತೊಂದು ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ರವಾನಿಸಲು ಮುಂದಾಗುತ್ತಿದ್ದಂತೆ ಕೆಲವೇ ನಿಮಿಷಗಳಲ್ಲಿ ಮೆದುಳು ನಿಷ್ಕ್ರಿಯಗೊಂಡಿದೆ.

ಇನ್ನು ಈ ಬಗ್ಗೆ ವೈದ್ಯರು ಹೇಳಿದೆನೆಂದರೆ ಇತ್ತೀಚೆಗೆ ಕಾರ್ಡಿಯಾಕ್ ಅರೆಸ್ಟ್ ನಿಂದ ಇಂತಹ ಘಟನೆಗಳು ಹೆಚ್ಚಾಗುತ್ತಿವೆ ಎನ್ನುತಾರೆ. ಕೋನಪ್ಪ ಆಸ್ಪತ್ರೆಗೆ ನಡೆದುಕೊಂಡು ಬರುವ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆ ಆಗಿದೆ. ಕೆಲವೇ ನಿಮಿಷಗಳಲ್ಲಿ ಆದ ಬ್ರೈನ್ ಡೆಡ್‌ನಿಂದ ಸದ್ಯ ಕೋನಪ್ಪ ಕುಟುಂಬಸ್ಥರು ಕಂಗಾಲಾಗಿದ್ದಾರೆ.



**ಬ್ರೈನ್ ಡೆಡ್ ಎಂದರೇನು?:** ಬ್ರೈನ್ ಡೆಡ್ ಎಂದರೆ ಮೆದುಳು ಸಂಪೂರ್ಣವಾಗಿ ಕೆಲಸ ಮಾಡುವುದನ್ನು ನಿಲ್ಲಿಸಿದೆ ಎಂದರ್ಥ. ಮೆದುಳಿನಲ್ಲಿ ಉಂಟಾದ ಗಂಭೀರ ಗಾಯ, ಆಮ್ಲಜನಕದ ಕೊರತೆ ಮತ್ತು ಅತಿಯಾದ ರಕ್ತದ ಹರಿವಿನಂತಹ ಪ್ರಮುಖ ಅಂಶಗಳು ಈ ಸ್ಥಿತಿಗೆ ಕಾರಣವಾಗುತ್ತದೆ.

ವ್ಯಕ್ತಿ ಮೆದುಳು ನಿಷ್ಕ್ರಿಯಗೊಂಡಾಗ ಮೆದುಳು ಹೊರತುಪಡಿಸಿ ಇಡೀ ದೇಹ ಕೆಲಸ ಮಾಡುತ್ತೆ. ಒಂದು ರೀತಿಯಲ್ಲಿ ಮನುಷ್ಯ ಬದುಕಿದ್ದು ಸತ್ತ ಸ್ಥಿತಿ. ರೋಗಿಯು ಉಸಿರಾಡದ ಕಾರಣ, ಕೃತಕ ಉಸಿರಾಟ ಅಂದರೆ ವೆಂಟಿಲೇಟರ್ ನಲ್ಲಿ ಇರಿಸಲಾಗುತ್ತದೆ.

## ಸಚಿವ ಸಂಪುಟ ಸಭೆ

ಗ್ರಾಮದ ಶ್ರೀ ಭೋಗನಂದೀಶ್ವರಸ್ವಾಮಿ ದೇವಾಲಯಕ್ಕೆ ಭೇಟಿ ನೀಡಲಿದ್ದು, ದೇವರ ದರ್ಶನ ಪಡೆದ ನಂತರ ದೇವಾಲಯದ ವಸಂತ ಮಂಟಪ, ಪುಷ್ಕರಿಣಿಯಲ್ಲಿ ಸಚಿವ ಸಂಪುಟದ ಸಹೋದ್ಯೋಗಿಗಳ ಜೊತೆ ಫೋಟೋಶೂಟ್‌ನಲ್ಲಿ ಭಾಗಿಯಾಗಲಿದ್ದಾರೆ. ನಂತರ 11:50ಕ್ಕೆ ನಂದಿಬೆಟ್ಟಕ್ಕೆ ಬಸ್‌ನಲ್ಲಿ ಪ್ರಯಾಣ ಮಾಡಲಿದ್ದಾರೆ.

ಇನ್ನೂ ವಿಶೇಷ ಸಚಿವ ಸಂಪುಟ ಸಭೆ ಹಿನ್ನೆಲೆ ನಂದಿ ಗಿರಿಧಾಮದಲ್ಲಿರುವ ಕೆಎಸ್‌ಟಿಡಿಸಿ ಹೋಟೆಲ್‌ನ ಮಯೂರ ಸಭಾಂಗಣಕ್ಕೆ ಹೊಸ ಲುಕ್ ನೀಡಲಾಗಿದೆ. ಸಭಾಂಗಣವನ್ನು ನವೀಕರಿಸಿ ಸುಣ್ಣಬಣ್ಣ ಬಳಿದು ಹೊಸ ಹೊಸ ಚೇರ್ ಟೇಬಲ್‌ಗಳನ್ನು ಅಳವಡಿಸಲಾಗಿದೆ. ಲಕ್ಷಾಂತರ ರೂ. ಖರ್ಚು ಮಾಡಿ ಸಾಮಾನ್ಯ ಹಾಲನ್ನು ಹವಾನಿಯಂತ್ರಿತ ಸಭಾಂಗಣವನ್ನಾಗಿ ಪರಿವರ್ತಿಸಲಾಗಿದೆ. ಸಚಿವರ ವಾಸ್ತವ್ಯ ಹಾಗೂ ವಿಶ್ರಾಂತಿಗೆ ರೂಂಗಳನ್ನು 7 ಸ್ಟಾರ್ ರೂಂಗಳಾಗಿ ಆಧುನೀಕರಣಗೊಳಿಸಲಾಗಿದೆ. ಮತ್ತೊಂದೆಡೆ ಪೊಲೀಸರು ಭೋಗನಂದೀಶ್ವರ ದೇವಸ್ಥಾನ, ನಂದಿಗಿರಿಧಾಮದಲ್ಲಿ ಭಾರಿ ಪೊಲೀಸ್ ಬಂದೋಬಸ್ತ್ ಕೈಗೊಂಡಿದ್ದಾರೆ.

ಇನ್ನು ನಂದಿಬೆಟ್ಟದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳು ಸೇರಿದಂತೆ ಬಯಲು ಸೀಮೆಯ ಜಿಲ್ಲೆಗಳಿಗೆ ಭರಪೂರ ಕೊಡುಗೆ ಘೋಷಣೆ ಮಾಡುವ ನಿರೀಕ್ಷೆಯಿದ್ದು, ಜನಪ್ರತಿನಿಧಿಗಳು, ಜನರ ಚಿತ್ತ ಸಂಪುಟ ಸಭೆಯತ್ತ ನೆಟ್ಟಿದೆ.

## ತಕ್ಷಣವೇ ಹಿಂಪಡೆಯಬೇಕು

ಹಾಲು, ಮೊಸರು, ಚಹಾ ಪುಡಿಯಿಂದ ಹಿಡಿದು ಪಾಪ್ ಕಾರ್ನ್‌ವರೆಗೆ ಎಲ್ಲದರ ಮೇಲೆ ಜಿಎಸ್‌ಟಿ ಹೇರಿಕೆಯಿಂದಾಗಿ ಪ್ರತಿಯೊಂದು ಕುಟುಂಬದ ಬಜೆಟ್ ಏರುಪೇರಾಗಿದೆ. ಇದೇ ವೇಳೆ ರೈಲು ಪ್ರಯಾಣದ ದರ ಹೆಚ್ಚಿಸುವ ಮೂಲಕ ನರೇಂದ್ರ ಮೋದಿ ಸರ್ಕಾರ ಜನರ ಜೇಬು ಖಾಲಿ ಮಾಡಲು ಹೊರಟಿದೆ ಎಂದು ಕಿಡಿಕಾರಿದರು.

ನಮ್ಮ ಸರ್ಕಾರ ರೈತರಿಗೆ ನೆರವಾಗುವ ಉದ್ದೇಶದಿಂದ ಹಾಲಿನ ದರ ಏರಿಕೆ ಮಾಡಿದಾಗ ಜನವಿರೋಧಿ ಎಂದು ಬೊಬ್ಬಿಟ್ಟಿದ್ದ ಬಿಜೆಪಿ ನಾಯಕರು ತಮ್ಮದೇ ಸರ್ಕಾರ ರೈಲು ಪ್ರಯಾಣ ಹೆಚ್ಚಿಸಿದಾಗ ಸದ್ದಿಲ್ಲದೆ ಬಿಲ ಸೇರಿಕೊಂಡಿದ್ದಾರೆ. ಬೆಂಗಳೂರು ಮೆಟ್ರೊ ರೈಲಿನ ಪ್ರಯಾಣ ದರ ಏರಿಕೆಯಾದಾಗ ಬೀದಿಗಿಳಿದಿದ್ದ ಬಿಜೆಪಿ ನಾಯಕರು ಕೇಂದ್ರ ಸರ್ಕಾರದ ಪ್ರತಿನಿಧಿಗಳನ್ನು ಹೊಂದಿರುವ ದರ ನಿರ್ಣಯ ಸಮಿತಿಯೇ ಆ ಏರಿಕೆಯ ನಿರ್ಧಾರ ಕೈಗೊಂಡಿರುವುದನ್ನು ಬಚ್ಚಿಟ್ಟು ನಮ್ಮ ಸರ್ಕಾರದ ವಿರುದ್ಧ ಜನರನ್ನು ಎತ್ತಿಕಟ್ಟುವ ವಿಫಲ ಪ್ರಯತ್ನ ನಡೆಸಿದ್ದರು ಎಂದು ಹರಿಹಾಯ್ದರು.

ರೈಲ್ವೆ ಇಲಾಖೆ ಸಂಪೂರ್ಣವಾಗಿ ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿದ್ದು, ಪ್ರಪಂಚದಲ್ಲಿಯೇ ಅತ್ಯಂತ ಹೆಚ್ಚು ಪ್ರಯಾಣಿಕರು ಸಂಚರಿಸುವ ಈ ಸಾರಿಗೆ ವ್ಯವಸ್ಥೆ ಈಗಲೂ ಲಾಭದಾಯಕವಾಗಿದೆ. ರೈಲ್ವೆ ಇಲಾಖೆಗೆ ಸಂಬಂಧಿಸಿದ ಪ್ರತ್ಯೇಕ ಬಜೆಟ್ ಮಂಡನೆಯ ಪದ್ಧತಿಯನ್ನು ನರೇಂದ್ರ ಮೋದಿ ಸರ್ಕಾರ ಕೈಬಿಟ್ಟಿರುವ ಕಾರಣ ಇಲಾಖೆಯ ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆಯೇ ಇಲ್ಲದಂತಾಗಿದೆ. ಈ ಹಿನ್ನೆಲೆಯಲ್ಲಿ ರೈಲುಗಳ ಪ್ರಯಾಣ ದರವನ್ನು ಹೆಚ್ಚಿಸುವ ಮೊದಲು ಇಲಾಖೆಯ ಕಾರ್ಯನಿರ್ವಹಣೆಯ ಬಗ್ಗೆ ಶ್ವೇತಪತ್ರವನ್ನು ದೇಶದ ಜನತೆಯ ಮುಂದಿಡಬೇಕೆಂದು ಪ್ರಧಾನಿ ನರೇಂದ್ರ ಮೋದಿಯವರನ್ನು ಒತ್ತಾಯಿಸುತ್ತೇನೆ ಎಂದರು.

## 2 ದಿನದಲ್ಲಿ 240 ಪ್ರಶ್ನೆ!

**ಪ್ರಜ್ವಲ್ ಪಾಲಿಗೆ ಕನಸಾಗಿದೆ ಬೇಲ್:** ದೂರು ದಾಖಲಾಗ್ತಿದ್ದಂತೆ ದೇಶವೇ ಬಿಟ್ಟ ಪ್ರಜ್ವಲ್ ರೇವಣ್ಣ ಅವರ ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಬರ್ತಿದ್ದಂತೆ ಮೇ–31 2024ರಂದು ಎಸ್‌ಐಟಿ ಅಧಿಕಾರಿಗಳು ವಶಕ್ಕೆ ಪಡೆದಿದ್ರು. ಜೂ.10, 2024ರಲ್ಲಿ ಪರಪ್ಪನ ಅಗ್ರಹಾರ ಜೈಲಿಗೆ ಪ್ರಜ್ವಲ್ ಶಿಫ್ಟ್ ಮಾಡಲಾಯ್ತು. ಕೋರ್ಟ್‌ನಲ್ಲಿ ಪ್ರಜ್ವಲ್ ಕೇಸ್ ವಿಚಾರಣೆ ನಡೀತಿದ್ದು, ಜಾಮೀನು ಮಾಜಿ ಸಂಸದನ ಪಾಲಿಗೆ ದೂರದ ಬೆಟ್ಟವಾಗಿದೆ.

## ಎಗರಿಸಿದ ಕ್ಯಾಷಿಯರ್

ಬ್ಯಾಂಕ್‌ನ ದಾಖಲೆಗಳಲ್ಲಿ ಚಿನ್ನಕ್ಕಾಗಿ ಮಾಡಿದ ಲೋನ್ ಗಳು ಕ್ಲಿಯರ್ ಆಗಿದೆ ಅಂತಾ ನಕಲಿ ದಾಖಲೆ ಸೃಷ್ಟಿಸಿ ಲಾಕರ್‌ನ ಚಿನ್ನವನ್ನು ಎಗರಿಸಿದ್ದಾನೆ. ಹೀಗೆ ಎಗರಿಸಿದ್ದು ಬರೋಬ್ಬರಿ 5.80 ಕೋಟಿ ಮೌಲ್ಯದ ಆರೂವರೆ ಕೆ.ಜಿ ಚಿನ್ನ.

ಇತ್ತ ವಿಷಯ ಬಹಿರಂಗ ಆಗುತ್ತಿದ್ದಂತೆಯೇ ಪ್ರೀತೇಶ್ ದುಬೈಗೆ ಹಾರಿದ್ದಾನೆ. ಬ್ಯಾಂಕ್‌ನ ಆಡಳಿತ ಮಂಡಳಿ ಪೊಲೀಸರಿಗೆ ದೂರು ನೀಡುತ್ತಿದ್ದಂತೆಯೇ ಪ್ರೀತೇಶ್ ಮಂಗಳೂರಿಗೆ ಬಂದು

ಮೊದಲನೇ ಪುಟದಿಂದ...

ಲಾಯರ್ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದಾನೆ. ಕದ್ದ ಚಿನ್ನದ ಪೈಕಿ ಸ್ಥಳೀಯ ಮತ್ತೊಂದು ಸಹಕಾರಿ ಬ್ಯಾಂಕ್‌ನಲ್ಲಿ ಎರಡು ಕೆ.ಜಿ ಮುನ್ನೂರು ಗ್ರಾಂ ಬಂಗಾರವನ್ನು ಅಡವಿಟ್ಟು ಅಲ್ಲಿಂದ ಎರಡೂವರೆ ಕೋಟಿ ರೂಪಾಯಿಯನ್ನು ಸಾಲ ಪಡೆದುಕೊಂಡಿದ್ದ. ಒಟ್ಟು 26 ಮಂದಿ ಗ್ರಾಹಕರ ಚಿನ್ನವನ್ನು ಪ್ರೀತೇಶ್ ಎಗರಿಸಿದ್ದು, ಹತ್ತು ಮಂದಿ ಬ್ಯಾಂಕ್‌ಗೆ ಬಂದು ತಮ್ಮ ಚಿನ್ನ ಎಂದು ಖಚಿತಪಡಿಸಿಕೊಂಡಿದ್ದಾರೆ.

ಈ ನಡುವೆ ಪ್ರೀತೇಶ್ ಬ್ಯಾಂಕ್‌ನಿಂದ ಕೊಂಡುಹೋದ ಚಿನ್ನವನ್ನು ಕೊಡೋದಾಗಿ ಹೇಳಿದ್ದ. ಶೇಖ್ ಮಹಮ್ಮದ್ ಎಂಬಾತನ ನೆರವನ್ನೂ ಈ ಕುಕೃತ್ಯಕ್ಕೆ ಪಡೆದಿದ್ದ. ಸಿಕ್ಕಿಬಿದ್ದಾಗ ಗ್ರಾಹಕರಿಗೆ ನಕಲಿ ಚಿನ್ನವನ್ನು ಕೊಡಲು ಎಲ್ಲಾ ಚಿನ್ನಾಭರಣವನ್ನು ನಕಲಿಯಾಗಿ ತಯಾರಿಸಿಟ್ಟಿದ್ದರು. ಪೊಲೀಸರು ಪ್ರೀತೇಶ್ ಬಳಿಕ ಮಹಮ್ಮದ್‌ನನ್ನೂ ವಶಕ್ಕೆ ಪಡೆದುಕೊಂಡಿದ್ದಾರೆ. ಸದ್ಯ ಮಹಮ್ಮದ್‌ನಿಂದ ನಾಲ್ಕೂವರೆ ಕೆ.ಜಿ ನಕಲಿ ಚಿನ್ನವನ್ನು ವಶಕ್ಕೆ ಪಡೆದುಕೊಂಡಿದ್ದು, ಈ ನಕಲಿ ಚಿನ್ನವನ್ನು ಅಸಲಿ ಅಂತಾ ಮಾಡೋಕೆ ಪ್ರಯತ್ನ ಪಟ್ಟಿರೋದು ಕೂಡಾ ಬೆಳಕಿಗೆ ಬಂದಿದೆ.

## ಬಿಎಂಟಿಸಿಗೆ ಲಾಭ!

ಇದರಿಂದ ಮೆಟ್ರೋ ಇಲ್ಲದೆ, ಸಾಮಾನ್ಯ ಬಸ್‌ನಲ್ಲಿ ಸರಿಯಾದ ಸಮಯಕ್ಕೆ ತೆರಳಲು ಸಾಧ್ಯವಾಗದ ಐಟಿ ಉದ್ಯೋಗಿಗಳಿಗೆ ಪ್ರಯೋಜನವಾಗಿದೆ. ಈ ಮೂಲಕ ಬಿಎಂಟಿಸಿ ಯೆಲ್ಲೋ ಲೈನ್ ಮೆಟ್ರೋ ಇಲ್ಲ ಅನ್ನುವ ಕೊರಗು ನೀಗಿಸುವ ಜೊತೆಗೆ, ಕಡಿಮೆ ಸಮಯದ ಪ್ರಯಾಣದ ಮೂಲಕ ಜನರನ್ನು ಆಕರ್ಷಣೆ ಮಾಡುತ್ತಿದೆ.

ಎಕ್ಸ್‌ಪ್ರೆಸ್ ಮಾರ್ಗ ಆರಂಭವಾದ ಹದಿನೈದು ದಿನಕ್ಕೆ ಭರ್ಜರಿ ಸ್ಪಂದನೆ ವ್ಯಕ್ತವಾಗಿದ್ದು, ಇಲ್ಲಿಯವರೆಗೆ ಎರಡು ಲಕ್ಷ ಪ್ರಯಾಣಿಕರು ಸಂಚಾರ ಮಾಡಿದ್ದಾರೆ. ಈ ಎಕ್ಸ್‌ಪ್ರೆಸ್ ಬಸ್ ಗಳಲ್ಲಿ ಪ್ರತಿದಿನ 13 ರಿಂದ 14 ಸಾವಿರ ಪ್ರಯಾಣಿಕರು ಪ್ರಯಾಣ ಮಾಡುತ್ತಿದ್ದು, 48 ಬಸ್ಸುಗಳಿಂದ 343 ಟ್ರಿಪ್ ಮಾಡಲಾಗ್ತಿದೆ. ಈ ಬಸ್ ಸೇವೆ ಬಗ್ಗೆ ಪ್ರಯಾಣಿಕರು ಕೂಡ ಸಂತಸ ವ್ಯಕ್ತಪಡಿಸಿದ್ದಾರೆ.

## ಮಾರ್ಗಸೂಚಿ ಬಿಡುಗಡೆ

ಆದರೆ ಇದೇ ಮೊದಲ ಬಾರಿಗೆ ಕೇಂದ್ರ ಸರ್ಕಾರ ಬೈಕ್ ಟ್ಯಾಕ್ಸಿಗೆ ಅನುಮತಿ ನೀಡಿದೆ. ಕೇಂದ್ರ ರಸ್ತೆ ಸಾರಿಗೆ ಸಚಿವಾಲಯ 1988ರ ಮೋಟಾರು ವಾಹನ ಕಾಯ್ದೆ ಅಡಿಯಲ್ಲಿ 2025ರ ಅಗ್ರಿಗೇಟರ್ ಮಾರ್ಗಸೂಚಿಯನ್ನು ಬಿಡುಗಡೆ ಮಾಡಿದೆ.

## ಓರ್ವ ಸಾವು

ಶಿವಮೊಗ್ಗದಿಂದ ತೀರ್ಥಹಳ್ಳಿ ಕಡೆಗೆ ಸಾಗುತ್ತಿದ್ದ ಲಾರಿ ಮಂಗಳೂರಿನಿಂದ ಶಿವಮೊಗ್ಗದ ಕಡೆಗೆ ಬರುತ್ತಿದ್ದ ಕಾರಿಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಕಾರು ಸಂಪೂರ್ಣ ನಜ್ಜುಗುಜ್ಜಾಗಿದೆ. ಕಾರಿನಲ್ಲಿ ಒಟ್ಟು ಐವರು ಪ್ರಯಾಣಿಸುತ್ತಿದ್ದರು. ಈ ಪೈಕಿ ಓರ್ವ ಸಾವನ್ನಪ್ಪಿದ್ದು, ಮಕ್ಕಳು ಸೇರಿದಂತೆ ಮೂವರು ಗಾಯಗೊಂಡಿದ್ದಾರೆ.

ಘಟನಾ ಸ್ಥಳಕ್ಕೆ ಮಾಳೂರು ಠಾಣೆ ಪೊಲೀಸರು ಆಗಮಿಸಿದ್ದು, ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

## ಆದೇಶಕ್ಕೆ ಹೈಕೋರ್ಟ್ ತಡೆ!

**ನಾಲ್ಕು ಸ್ಥಾಯಿ ಸಮಿತಿ ಚುನಾವಣೆ ಮುಂದೂಡಿಕೆ:** ಇಂದು ನಡೆಯಬೇಕಿದ್ದ ನಾಲ್ಕು ಸ್ಥಾಯಿ ಸಮಿತಿ ಚುನಾವಣೆಯು ಮುಂದೂಡಿದೆ. ಬೆಳಗಾವಿ ಪಾಲಿಕೆಯಲ್ಲಿ ಜೋರಾದ ಪಾಲಿಟಿಕ್ಸ್ ನಡೆಯುತ್ತಿದ್ದು, ಇದು ಸರ್ಕಾರಕ್ಕೆ ದೊಡ್ಡ ಹೊಡೆತವಾಗಿದೆ.

## ಅರೆಸ್ಟ್

ಮಂಗಳವಾರ ಭಯೋತ್ಪಾದಕನ ಬಂಧನದ ಬಗ್ಗೆ ಪೊಲೀಸರು ಮಾಹಿತಿ ನೀಡಿದ್ದಾರೆ.

ಅಬೂಬಕರ್ ಸಿದ್ದಿಕಿಯನ್ನು ಆಂಧ್ರಪ್ರದೇಶದ ಅನ್ನಮಯ್ಯ ಜಿಲ್ಲೆಯ ಆತನ ಅಡಗುತಾಣದಿಂದ ತಮಿಳುನಾಡು ಭಯೋತ್ಪಾದನಾ ನಿಗ್ರಹ ದಳ ಬಂಧಿಸಿದೆ. ಖಚಿತ ಮಾಹಿತಿಯ ಆಧಾರದ ಮೇಲೆ ಮತ್ತು ಕೇಂದ್ರ ಗುಪ್ತಚರ ಸಂಸ್ಥೆಗಳ ನೆರವಿನೊಂದಿಗೆ ಆತನನ್ನು ಬಂಧಿಸಲಾಗಿದೆ. ಅಬೂಬಕರ್ ಜೊತೆಗೆ, ಮತ್ತೊಬ್ಬ ಪರಾರಿಯಾಗಿರುವ ಮೊಹಮ್ಮದ್ ಅಲಿ ಅಲಿಯಾಸ್ ಯೂನಸ್ ಅಲಿಯಾಸ್ ಮನ್ಸೂರ್ ನನ್ನು ಕೂಡ ಬಂಧಿಸಲಾಗಿದೆ.

ಉಗ್ರ ಅಬೂಬಕರ್ ಸಿದ್ದಿಕಿ ದಕ್ಷಿಣ ಭಾರತದಲ್ಲಿ ನಡೆದ ಅನೇಕ ಬಾಂಬ್ ಸ್ಫೋಟಗಳಲ್ಲಿ ಭಾಗಿಯಾಗಿದ್ದ.ಪೊಲೀಸರು ಕಳೆದ 3 ದಶಕಗಳಿಂದ ಅಂದರೆ ಸುಮಾರು 30 ವರ್ಷಗಳಿಂದ ಭಯೋತ್ಪಾದಕನಿಗಾಗಿ ಹುಡುಕುತ್ತಿದ್ದರು.

ಭಯೋತ್ಪಾದಕ ಅಬೂಬಕರ್ ಮೇಲೆ ಪೊಲೀಸರು 5 ಲಕ್ಷ ರೂ. ಬಹುಮಾನವನ್ನೂ ಘೋಷಿಸಿದ್ದರು. ಆತ ಅನೇಕ ಬಾಂಬ್ ಸ್ಫೋಟಗಳು ಮತ್ತು ಕೋಮು ಹತ್ಯೆಗಳಲ್ಲಿ ಭಾಗಿಯಾಗಿದ್ದ ಮತ್ತು ಮೂರು ದಶಕಗಳಿಂದ ಪೊಲೀಸರಿಂದ ತಪ್ಪಿಸಿಕೊಳ್ಳುತ್ತಿದ್ದ.

ಮಾಹಿತಿಯ ಪ್ರಕಾರ, ಭಯೋತ್ಪಾದಕ ಅಬೂಬಕರ್ 1995 ರಲ್ಲಿ ಚಿಂತಾದ್ರಿಪೇಟೆಯಲ್ಲಿರುವ ಹಿಂದೂ ಮುನ್ನಾನಿಯ ಕಚೇರಿಯಲ್ಲಿ ನಡೆದ ಬಾಂಬ್ ಸ್ಫೋಟ, 1995 ರಲ್ಲಿ ಹಿಂದೂ ಕಾರ್ಯಕರ್ತ ಟಿ ಮುತ್ತುಕೃಷ್ಣನ್ ಅವರನ್ನು ಗುರಿಯಾಗಿಸಿಕೊಂಡು ನಡೆದ ಪಾರ್ಸೆಲ್ ಬಾಂಬ್ ಸ್ಫೋಟ, 1999 ರಲ್ಲಿ ಎಗ್ಮೋರ್‌ನ ಚೆನ್ನೈ ಪೊಲೀಸ್ ಆಯುಕ್ತರ ಕಚೇರಿ ಮತ್ತು ತಿರುಚಿರಾಪಳ್ಳಿ, ಕೊಯಮತ್ತೂರು ಮತ್ತು ಕೇರಳ ಸೇರಿದಂತೆ ಆರು ಇತರ ಸ್ಥಳಗಳಲ್ಲಿ ನಡೆದ ಬಾಂಬ್ ಸ್ಫೋಟದಲ್ಲಿ ಭಾಗಿಯಾಗಿದ್ದಾನೆ. 2011 ರಲ್ಲಿ ತಮಿಳುನಾಡಿನ ಮಧುರೈನಲ್ಲಿ ಅವರ ರಥಯಾತ್ರೆಯ ಸಮಯದಲ್ಲಿ ಲಾಲ್ ಕೃಷ್ಣ ಅಡ್ವಾಣಿ ಅವರನ್ನು ಗುರಿಯಾಗಿಸಿಕೊಂಡು ಪೈಪ್ ಬಾಂಬ್ ಇಡುವ ಪ್ರಯತ್ನದಲ್ಲಿ ಭಯೋತ್ಪಾದಕ ಭಾಗಿಯಾಗಿದ್ದ ಎನ್ನಲಾಗಿದೆ.

## ನೇಮಕ

**ಆರ್‌ಬಿಐ ಉನ್ನತ ಅಧಿಕಾರಿಗಳ ಪಟ್ಟಿ**

**ಆರ್‌ಬಿಐ ಗವರ್ನರ್:** ಸಂಜಯ್ ಮಲ್ಹೋತ್ರಾ

**ಡೆಪ್ಯುಟಿ ಗವರ್ನರ್‌ಗಳು:** ಎಂ ರಾಜೇಶ್ವರ್ ರಾವ್, ಟಿ ರಬಿಶಂಕರ್, ಸ್ವಾಮಿನಾಥನ್ ಜಾನಕಿರಾಮನ್, ಪೂನಂ ಗುಪ್ತಾ

**ಎಕ್ಸಿಕ್ಯೂಟಿವ್ ಡೈರೆಕ್ಟರ್‌ಗಳು:** ಕೇಶವನ್ ರಾಮಚಂದ್ರನ್, ಎಸ್.ಸಿ. ಮುರ್ಮು, ವಿವೇಕ್ ದೀಪ್, ರೋಹಿತ್ ಜೈನ್, ರಾಧಾ ಶ್ಯಾಮ್ ರಾಥೋ, ಅಜಯ್ ಕುಮಾರ್, ಡಾ. ರಾಜೀವ್ ರಂಜನ್, ಪಿ ವಾಸುದೇವನ್, ಆರ್ ಲಕ್ಷ್ಮೀಕಾಂತ ರಾವ್, ಅರ್ನಬ್ ಕುಮಾರ್ ಚೌಧುರಿ, ಅವಿರಲ್ ಜೈನ್, ಡಾ. ಅಜಿತ್ ರತ್ನಾಕರ್ ಜೋಷಿ, ಇಂದ್ರಾನಿಲ್ ಭಟ್ಟಾಚಾರ್ಯ, ಸುಧಾ ಬಾಲಕೃಷ್ಣನ್

ಇಲ್ಲಿ ಪ್ರತಿಯೊಬ್ಬ ಕಾರ್ಯನಿರ್ವಾಹನ ನಿರ್ದೇಶಕರಿಗೆ ಪ್ರತ್ಯೇಕ ವಿಭಾಗದ ಉಸ್ತುವಾರಿ ಜವಾಬ್ದಾರಿ ವಹಿಸಲಾಗಿರುತ್ತದೆ.

**ಆರ್ ಬಿಐ ಹಣಕಾಸು ನೀತಿ ಸಮಿತಿ ಸದಸ್ಯರು:** ಸಂಜಯ್ ಮಲ್ಹೋತ್ರಾ, ಪೂನಂ ಗುಪ್ತಾ, ಡಾ. ರಾಜೀವ್ ರಂಜನ್, ಪ್ರೊಫೆಸರ್ ರಾಮ್ ಸಿಂಗ್, ಡಾ. ಸೌಗತ ಭಟ್ಟಾಚಾರ್ಯ, ಡಾ. ನಾಗೇಶ್ ಕುಮಾರ್.

ಇಲ್ಲಿ ಕೊನೆಯ ಮೂವರಾಗಿರುವ ರಾಮ್ ಸಿಂಗ್, ಸೌಗತ ಮತ್ತು ನಾಗೇಶ್ ಕುಮಾರ್ ಅವರು ಸರ್ಕಾರದಿಂದ ನೇಮಕವಾಗಿರುವ ಬಾಹ್ಯ ಸದಸ್ಯರಾಗಿದ್ದಾರೆ. ಆರ್ಥಿಕ ಮತ್ತು ಕೈಗಾರಿಕಾ ಕ್ಷೇತ್ರಗಳಿಂದ ಬಂದವರಾಗಿದ್ದಾರೆ.

# ಬಾಳಿನ ವಿಕಾಸಕ್ಕೆ ಗುರಿ ಗುರು ಮುಖ್ಯ: ಶ್ರೀ ರಂಭಾಪುರಿ ಜಗದ್ಗುರು

**ಹೊಸಕೋಟೆ:** ಸುಖ ಶಾಂತಿ ಬಯಸುವ ಮನುಷ್ಯ ಜೀವನದಲ್ಲಿ ಕೆಲವು ಆದರ್ಶ ಮೌಲ್ಯಗಳನ್ನು ಬೆಳೆಸಿಕೊಂಡು ಬರಬೇಕಾಗುತ್ತದೆ. ಬಾಳಿನ ವಿಕಾಸಕ್ಕೆ ಗುರಿ ಮತ್ತು ಗುರು ಮುಖ್ಯವೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಸೋಮವಾರ ನಗರದ ಹೆಚ್.ಜೆ.ಎಸ್.ಎಸ್.ಕನ್ವೆನ್ ಷನ್ ಹಾಲ್‌ನಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತ್ಯುತ್ಸವ ಹಾಗೂ ಇಷ್ಟಲಿಂಗ ಮಹಾಪೂಜಾ ಅಂಗವಾಗಿ ಜರುಗಿದ ಧರ್ಮ ಜಾಗೃತಿ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಮನುಷ್ಯ ಜೀವನದಲ್ಲಿ ಹಣ ಗಳಿಕೆಯಷ್ಟೇ ಮುಖ್ಯವಲ್ಲ. ಅದರೊಂದಿಗೆ ಒಂದಿಷ್ಟಾದರೂ ಶಿವಜ್ಞಾನ ಮತ್ತು ಗುರು ಕಾರುಣ್ಯ ಪಡೆಯಲು ಶ್ರಮಿಸಬೇಕಾಗಿದೆ. ಭೌತಿಕ ಸಂಪತ್ತು ಶಾಶ್ವತವಲ್ಲ. ಆಧ್ಯಾತ್ಮ ಸಂಪತ್ತು ಬಾಳಿನ ನಿಜವಾದ ಸಂಪತ್ತೆಂಬುದನ್ನು ಮರೆಯಬಾರದು. ಪ್ರಾಣ ಯೌವನ ಕಾಲ ಒಮ್ಮೆ ಕಳೆದು ಹೋದರೆ ಮತ್ತೆಂದೂ ತಿರುಗಿ ಬರಲಾರವು. ಸದ್ವಿದ್ಯೆ, ಉತ್ತಮ ಸಂಬಂಧ ಮತ್ತು ಆದರ್ಶ ಸ್ನೇಹ ಜೀವನ ಶ್ರೇಯಸ್ಸಿಗೆ ಮೂಲ. ಶ್ರೀ ಜಗದ್ಗುರು ರೇಣುಕಾಚಾರ್ಯರ ಜೀವನ ಮೌಲ್ಯದ ಸಚ್ಚಿಂತನೆಗಳು ಬದುಕಿ ಬಾಳುವ ಜನಸಮುದಾಯಕ್ಕೆ ಬೆಳಕು ತೋರುತ್ತವೆ. ಅವರು ಬೋಧಿಸಿದ ವಿಚಾರ ಧಾರೆಗಳು ಸರ್ವ ಕಾಲಕ್ಕೂ ಸರ್ವರಿಗೂ ಅನ್ವಯಿಸುತ್ತವೆ. ಹೊಸಕೋಟೆ ನಗರ ಇತಿಹಾಸದಲ್ಲಿ ಹಿಂದೆಂದೂ ಮಾಡದಿರುವ



ಮಹತ್ಕಾರ್ಯವನ್ನು ತಾವೆಲ್ಲ ಮಾಡಿ ಹೊಸ ದಾಖಲೆಯನ್ನು ನಿರ್ಮಿಸಿದ್ದೀರೆಂದು ತಮ್ಮ ಹರುಷ ವ್ಯಕ್ತಪಡಿಸಿದರು.

ಸಮಾರಂಭ ಉದ್ಘಾಟಿಸಿದ ಶಾಸಕ ಬಿ.ಶರತ್ ಬಚ್ಚೇಗೌಡ ಮಾತನಾಡಿ ಅಶಾಂತಿಯ ಬದುಕಿನಲ್ಲಿ ಸಮಾಧಾನ ಶಾಂತಿ ಕಾಣಬೇಕಾದರೆ ಧರ್ಮದ ಪರಿಪಾಲನೆಯನ್ನು ಮಾಡಬೇಕಾಗುತ್ತದೆ. ಆಚಾರ್ಯರು ಶರಣರು ಮತ್ತು ಮಹಾನುಭಾವರ ವಿಚಾರ ಧಾರೆಗಳು ನಮ್ಮೆಲ್ಲರ ಬಾಳಿಗೆ ಆಶಾಕಿರಣವಾಗಿವೆ ಎಂದರು. ವಿಧಾನ ಪರಿಷತ್ ಸದಸ್ಯರಾದ ಎಂ.ಟಿ.ಬಿ.ನಾಗರಾಜ್ ಮಾತನಾಡಿ ಪ್ರತಿಯೊಬ್ಬ ಮನುಷ್ಯ ದೇವರು ಧರ್ಮ ಮತ್ತು ಗುರುವಿನಲ್ಲಿ ನಂಬಿಗೆ ಇಟ್ಟು ಬಾಳಬೇಕು. ನಂಬಿ ನಡೆದರೆ ಏನೆಲ್ಲ ಸೌಭಾಗ್ಯ ಪ್ರಾಪ್ತಿ. ನಂಬಿಗೆ ವಿಶ್ವಾಸ ಕಳೆದುಕೊಂಡರೆ ಬದುಕು ಬರಡಾಗುತ್ತದೆ. ಶ್ರೀ ಜಗದ್ಗುರು ರೇಣುಕಾಚಾರ್ಯರ ಬೋಧನೆಗಳು ನಮ್ಮೆಲ್ಲರಿಗೂ ದಾರಿದೀಪವೆಂದರು. ನೇತೃತ್ವ ವಹಿಸಿದ ನಾಗಲಾಪುರ ಸಂಸ್ಥಾನ ಮಠದ ತೇಜೇಶಲಿಂಗ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಈ ಭಾಗದ ಭಕ್ತರ ಬಹು ದಿನಗಳ ಕನಸು ನನಸಾದ ಸುದಿನ. ಶ್ರೀ ರಂಭಾಪುರಿ ಜಗದ್ಗುರುಗಳವರ ಶುಭಾಗಮನ ಈ ಭಾಗದ ಭಕ್ತರ ಸೌಭಾಗ್ಯವೆಂದರೆ ತಪ್ಪಾಗದು. ವಿವಿಧ ಸಂಘ ಸಂಸ್ಥೆಗಳ ದಾನಿಗಳ ಸಹಕಾರದಿಂದ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿದ್ದು ಸಂತೋಷ ಉಂಟು ಮಾಡಿದೆ ಎಂದರು. ಎಡೆಯೂರು ಕ್ಷೇತ್ರದ ರೇಣುಕ ಶಿವಾಚಾರ್ಯರು, ಗುಮ್ಮಳಾಪುರದ ಶಿವಾನಂದ ಶಿವಾಚಾರ್ಯರು, ರಾಜಾಪುರ ಡಾ॥ ರಾಜೇಶ್ವರ ಶಿವಾಚಾರ್ಯರು ಹಾಗೂ ಬೆಳ್ಳಾವಿ ಮಹಾಂತ ಶಿವಾಚಾರ್ಯರು ಪಾಲ್ಗೊಂಡು ಉಪದೇಶಾಮೃತವನ್ನಿತ್ತರು. ಹೊಸಕೋಟೆ ನಗರದ ವೀರಶೈವ ಲಿಂಗಾಯತ ಸಮಾಜದ ವಿವಿಧ ಸಂಘಟನೆಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಉಪಸ್ಥಿತರಿದ್ದರು. ಶಿಕ್ಷಕ ಎಂ.ಮಹೇಶ್ ಸ್ವಾಗತಿಸಿದರು. ಪ್ರಶಾಂತ ರಿಪ್ಪನ್‌ಪೇಟೆ ನಿರೂಪಿಸಿದರು.

ಲೋಕ ಕಲ್ಯಾಣಕ್ಕಾಗಿ ಶ್ರೀ ರಂಭಾಪುರಿ ಜಗದ್ಗುರುಗಳು ಬೆಳಿಗ್ಗೆ ಇಷ್ಟಲಿಂಗ ಮಹಾಪೂಜಾ ನೆರವೇರಿಸಿ ಆಶೀರ್ವದಿಸಿದರು. ಇದೇ ಸಂದರ್ಭದಲ್ಲಿ 25 ವೀರಮಾಹೇಶ್ವರ ವಟುಗಳಿಗೆ ಅಯ್ಯಾಚಾರ ಶಿವದೀಕ್ಷೆ ನೀಡಲಾಯಿತು.

ಸಂಜೆ ನಗರದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವ ಅದ್ದೂರಿಯಾಗಿ ಜರುಗಿತು. ಸಹಸ್ರಾರು ಭಕ್ತರು ಪಾಲ್ಗೊಂಡು ಜಗದ್ಗುರುಗಳ ದರ್ಶನಾಶೀರ್ವಾದ ಪಡೆದು ಪುನೀತರಾದರು.

## ಹೈ ಲೈಫ್ ಪ್ರದರ್ಶನ ಉದ್ಘಾಟನೆ

**ಮೈಸೂರು:** ಬಹುನಿರೀಕ್ಷಿತ ಹೈ ಲೈಫ್ ಪ್ರದರ್ಶನವನ್ನು ಇಂದು ಮೈಸೂರಿನ ರಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ಅದ್ದೂರಿಯಾಗಿ ಉದ್ಘಾಟಿಸಲಾಯಿತು.

ಜುಲೈ 1 ಮತ್ತು 2 ರಂದು ನಡೆಯುವ ಈ ಎರಡು ದಿನಗಳ ಶಾಪಿಂಗ್ ಉತ್ಸವವು ಕೆಲವು ಆಭರಣಗಳು ಮತ್ತು ಪರಿಕರಗಳನ್ನು ಒಟ್ಟುಗೂಡಿಸುತ್ತದೆ, ಇದು ಭಾರತೀಯ ಫ್ಯಾಷನ್‌ನ ಅತ್ಯುತ್ತಮತೆಯನ್ನು ಪ್ರದರ್ಶಿಸುತ್ತದೆ.

ಪ್ರದರ್ಶನವು ಲೆಹೆಂಗಾಗಳು, ಸೀರೆಗಳು, ಆಧುನಿಕ ನಿಲುವಂಗಿಗಳು ಮತ್ತು ವಿವಿಧ ರೀತಿಯ ಅತ್ಯುತ್ತಮ ಆಭರಣಗಳ ವಿಶೇಷ ಸಂಗ್ರಹಗಳನ್ನು ಒಳಗೊಂಡಿದೆ. ಪ್ರತಿಯೊಂದು ಶೈಲಿ ಮತ್ತು ಆದ್ಯತೆಗೆ ಅನುಗುಣವಾಗಿ ವಿವಿಧ ರೀತಿಯ ಉನ್ನತ-ಮಟ್ಟದ ವಿನ್ಯಾಸಕ ಉಡುಗೆ ಮತ್ತು ಪರಿಕರಗಳನ್ನು ಸಂಗ್ರಹಿಸಲಾಗಿದೆ.ಹೈ ಲೈಫ್‌ನ ಸಹ-ಸಂಘಟಕಿ ಶೋಮಿಕಾ ಎಸ್ ರಾವ್, ಹೈ ಲೈಫ್ ಅತ್ಯುತ್ತಮ ಫ್ಯಾಷನ್ ಅನ್ನು ಪ್ರದರ್ಶಿಸಲು ಒಂದು ವೇದಿಕೆಯಾಗಿದೆ, ಅಲ್ಲಿ ಸಂಪ್ರದಾಯ ಮತ್ತು ಆಧುನಿಕತೆ ಸಂಧಿಸುತ್ತದೆ. ಮೈಸೂರು ವಧುಗಳ ಸಾರವನ್ನು ಪ್ರತಿಬಿಂಬಿಸುವ ವಿಶಿಷ್ಟ ಸಂಗ್ರಹವನ್ನು ಒಟ್ಟುಗೂಡಿಸಲು ನಾವು ಶ್ರಮಿಸಿದ್ದೇವೆ ಎಂದು ಹೇಳಿದರು.

ಮೈಸೂರಿನಲ್ಲಿ ಈ ಪ್ರದರ್ಶನವನ್ನು ಆಯೋಜಿಸಲು ನಾವು ಉತ್ಸುಕರಾಗಿದ್ದೇವೆ. ನಗರವು ಯಾವಾಗಲೂ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ. ಹೈ ಲೈಫ್ ಎಕ್ಸಿಬಿಷನ್‌ನ ಕಾರ್ಯಕ್ರಮ ಸಂಯೋಜಕರಾದ ಶ್ರೀಕಾಂತ್ ಎಸ್ ಅವರು ಸಂಯೋಜಿಸಿದ್ದಾರೆ, ಹೈ ಲೈಫ್ ಎಕ್ಸಿಬಿಷನ್‌ನ ಯೋಜನಾ ವ್ಯವಸ್ಥಾಪಕಿ ರಿಯಾ, ಅಪೂರ್ವ ಶೇಖರ್ ಸೋಷಿಯಲೈಟ್, ಕೇಂಬ್ರಿಡ್ಜ್ ಮಾಂಟೆಸ್ಸರಿ ಪ್ರಿ ಸ್ಕೂಲ್‌ನ ಸಿಇಒ ವರ್ಷಾ ಎಸ್, ಸಿ.ಎಸ್. ವಿನುತಾ ಮನ್ನಾರ್ ಇದ್ದರು.



### ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಭಾಗಿ

## ಫಾರ್ಮಸಿ ಪದವೀಧರರ ಸ್ವಾಗತ ದಿನ

**ಮೈಸೂರು:** ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪದವಿ ಪ್ರದಾನ ಸಮಾರಂಭವನ್ನು ಜು.1ರಂದು ಮಧ್ಯಾಹ್ನ 3 ಗಂಟೆಗೆ ಜೆಎಸ್ ಎಸ್ ವೈದ್ಯಕೀಯ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಪದವೀಧರರ ಸ್ವಾಗತದ 3 ನೇ ಆವೃತ್ತಿಯ ಭಾಗವಾಗಿ ಈ ಸಮಾರಂಭವನ್ನು ಆಯೋಜಿಸಲಾಗಿತ್ತು.

ಶ್ರೀ ಸುತ್ತೂರು ಕ್ಷೇತ್ರದ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಯವರ ದಿವ್ಯ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ನಡೆಯಿತು.

ಹೈದರಾಬಾದ್ ನ ಯುಎಸ್ ಪಿ ಇಂಡಿಯಾದ ಇಂಡಿಯಾ ಸೈಟ್ ಆಪರೇಷನ್ಸ್‌ನ ಹಿರಿಯ ಉಪಾಧ್ಯಕ್ಷ ಮತ್ತು ಸೈಟ್ ಹೆಡ್ ಡಾ.ಗಿರೀಶ್ ಕಪೂರ್ ಮುಖ್ಯ ಅತಿಥಿಯಾಗಿದ್ದರು. ಜೆಎಸ್ ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ ಅಧ್ಯಕ್ಷತೆ ವಹಿಸಿದ್ದರು. ಜೆಎಸ್‌ಎಸ್ ಎಹೆಚ್‌ಇಆರ್ ಕುಲಪತಿ ಡಾ.ಎಚ್.ಬಸವನಗೌಡಪ್ಪ, ಕುಲಸಚಿವ ಡಾ.ಬಿ.ಮಂಜುನಾಥ ಅತಿಥಿಗಳಾಗಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ.ಟಿ.ಎಂ.ಪ್ರಮೋದ್ ಕುಮಾರ್, ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಉಪ ಪ್ರಾಂಶುಪಾಲ ಡಾ.ಜಿ.ವಿ.ಪೂಜಾರ್ ಉಪಸ್ಥಿತರಿದ್ದರು. ಮೈಸೂರಿನ ಜೆಎಸ್‌ಎಸ್ ಎಹೆಚ್ ಇಆರ್ನ ಪರೀಕ್ಷಾ ನಿಯಂತ್ರಕ ಡಾ.ಆರ್.ಸುಧೀಂದ್ರ ಭಟ್ ಅವರು ಎಲ್ಲಾ ಫಾರ್ಮಸಿ ಪದವೀಧರರಿಗೆ ಫಾರ್ಮಾಸಿಸ್ಟ್‌ಳ ಪ್ರತಿಜ್ಞೆ' ಬೋಧಿಸಿದರು.

ಸಭಿಕರನ್ನುದ್ದೇಶಿಸಿ ಮಾತನಾಡಿದ ಡಾ.ಗಿರೀಶ್ ಕಪೂರ್, ಈ ಪದವೀಧರರ ಸ್ವಾಗತದ ಭಾಗವಾಗಲು ನನಗೆ ತುಂಬಾ ಸಂತೋಷವಾಗಿದೆಮತ್ತು ಯುವಪದವೀಧರರನ್ನು ಶ್ಲಾಘಿಸಿದರು, ನಿಮ್ಮ ಕಠಿಣ ಪರಿಶ್ರಮ ಮತ್ತು ಪರಿಶ್ರಮದಿಂದಾಗಿ ನೀವು ನಿಮ್ಮ ಜೀವನದಲ್ಲಿ ಈ ಮೈಲಿಗಲ್ಲನ್ನು ತಲುಪಿದ್ದೀರಿ ಎಂದು ಹೇಳಿದರು. ಈ ಪ್ರತಿಷ್ಠಿತ ಸಂಸ್ಥೆಯಿಂದ ಪದವಿ ಪಡೆಯಲು ನೀವೆಲ್ಲರೂ ಅದೃಷ್ಟವಂತರು ಎಂದು ತೋರುತ್ತದೆ. ಇಂದಿನ ಔಷಧದ ಗುಣಮಟ್ಟ ಮತ್ತು ಗುಣಮಟ್ಟದಲ್ಲಿ ಆರೋಗ್ಯ ವ್ಯವಸ್ಥೆಯಲ್ಲಿ ಫಾರ್ಮಾಸಿಸ್ಟ್ ಗಳ ಗಮನಾರ್ಹ ಕೊಡುಗೆಯೇ ಇದಕ್ಕೆ ಕಾರಣ ಎಂದು ಅವರು ಉಲ್ಲೇಖಿಸಿದರು. ಇಂದು ಭಾರತವು ಅನೇಕ ದೇಶಗಳಿಗೆ ಔಷಧಿಗಳನ್ನು ರಫ್ತು, ಮಾಡುತ್ತಿದೆ ಮತ್ತು




ಅದರಲ್ಲಿ ಫಾರ್ಮಾಸಿಸ್ಟ್ ಗಳ ಕೊಡುಗೆ ಗಮನಾರ್ಹವಾಗಿದೆ. ವಿದ್ಯಾರ್ಥಿಗಳು ತಮ್ಮ ಜ್ಞಾನವನ್ನು ನವೀಕರಿಸಲು ಮತ್ತು ಕೆಲಸದಲ್ಲಿ ಹೊಸ ಪ್ರಯಾಣವನ್ನು ಪ್ರಾರಂಭಿಸಲು ಅವರು ಒತ್ತಿ ಹೇಳಿದರು. ಭಾರತವು ವಿಶ್ವ ಆರ್ಥಿಕತೆಯಲ್ಲಿ 5 ನೇ ಸ್ಥಾನದಲ್ಲಿದೆ ಮತ್ತು ಔಷಧ ಉದ್ಯಮವು ಇದಕ್ಕೆ ಸಾಕಷ್ಟು ಕೊಡುಗೆ ನೀಡುತ್ತದೆ.

ಡಿ.ಫಾರ್ಮ್ (ಎಂ.ಜೆ.ಸರೋಜ್), ಬಿ.ಫಾರ್ಮ್ (ಅನಿರುದ್ ಕಾಮತ್), ಫಾರ್ಮ್ ಡಿ (ಕಾಮಾಕ್ಷಿ ಶ್ರೇಯಾ) ಮತ್ತು ಎಂ.ಫಾರ್ಮ್ (ಫಾರ್ಮಾಸ್ಯುಟಿಕ್ಸ್ ವಿಭಾಗದ ಅಂಜು ಜೇಮ್ಸ್), ಔಷಧ ನಿಯಂತ್ರಣ ವ್ಯವಹಾರಗಳ ವಿಭಾಗದ ಶ್ರೀಮತಿ ಕಾಟಿಕಲಾ ತನ್ವಿ. ಔಷಧೀಯ ರಸಾಯನಶಾಸ್ತ್ರ ವಿಭಾಗದ ಶ್ರೀಮತಿ ಲಕ್ಷ್ಮಿ ಎಸ್. ಫಾರ್ಮಾಸ್ಯುಟಿಕಲ್ ಕ್ವಾಲಿಟಿ ಅಶ್ಯೂರೆನ್ಸ್ ವಿಭಾಗದ ಶ್ರೀಮತಿ ಮೇಘನಾ ಆರ್. ಶ್ರೀ ದರ್ಶನ್ ಆರ್. ಫಾರ್ಮಾಕಾಲಜಿ ವಿಭಾಗದ ಶ್ರೀಮತಿ ಬಿಂದುಶ್ರೀ ಜಿ. ಕೈಗಾರಿಕಾ ಫಾರ್ಮಸಿ ವಿಭಾಗದ ಶ್ರೀಮತಿ ತುಮ್ಮೂರು ಜಯಶ್ರೀ ರೆಡ್ಡಿ ಫಾರ್ಮಸಿ ಪ್ರಾಕ್ಟಿಸ್ ನ ಶ್ರೀಮತಿ ಶಿರಿಷಾ ಜಿ, ಬಯೋಟೆಕ್ನಾಲಜಿಯ ಶ್ರೀಮತಿ ಮೇಘಾ ಕುದ್ರಾಜಿ ಮತ್ತು ಫಾರ್ಮಾಕೊಗೊಸಿಯ ಶ್ರೀ ಹರ್ಷ ಪ್ರತಾಪ್ ಸಿಂಗ್) ಅವರು ತಮ್ಮ ಪದವಿಗಳಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ಚಿನ್ನದ ಪದಕಗಳನ್ನು ಪಡೆದರು.

2024-25ನೇ ಸಾಲಿಗೆ ಬಿ.ಫಾರ್ಮ್ (104), ಫಾರ್ಮ್ ಡಿ (35), ಡಿ ಫಾರ್ಮ್ (30) ಮತ್ತು ಎಂ.ಫಾರ್ಮ್ (98) ಪದವಿಗಳಿಗೆ ಒಟ್ಟು 267 ಪದವೀಧರರು ವೈಯಕ್ತಿಕವಾಗಿ ಪದವಿ ಪ್ರಮಾಣಪತ್ರವನ್ನು ಸ್ವೀಕರಿಸಿದರು. ಅಲಮ್ನಿ ಸನ್ಮಾನ ಕಾರ್ಯಕ್ರಮದಲ್ಲಿ ಡಾ.ಅಮಿತ್ ಬಿ ಪಾಟೀಲ್, ಸಹಪ್ರಾಧ್ಯಾಪಕರು, ಫಾರ್ಮಾಸ್ಯೂಟಿಕ್ಸ್ ವಿಭಾಗದಿಂದ ಅಲಮ್ನಿಗಳ ಪರಿಚಯ - ಶ್ರೀ ಕೆ.ವಿ.ಪಿ. ಅಮರ್ ಕುಮಾರ್ ,ಸಿಇಒ, ಸಿಗ್ಮ0ಡ್ ಪ್ರೊಮೆಡಿಕಾ, ವಿಜಯವಾಡ, ಶ್ರೀ ಅಮಿತ್ .ಸದಾನಂದ ರಾವ್, ನಿರ್ದೇಶಕರು, ಸುಪ್ರೀಂ ಫಾರ್ಮಾಸ್ಯುಟಿಕಲ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್, ನಂಜನಗೂಡು. ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ.ಟಿ.ಎಂ.ಪ್ರಮೋದ್ ಕುಮಾರ್ ಸ್ವಾಗತಿಸಿ, ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಉಪ ಪ್ರಾಂಶುಪಾಲ ಡಾ.ಜಿ.ವಿ.ಪೂಜಾರ್ ವಂದಿಸಿದರು. ವಿದ್ಯಾರ್ಥಿಗಳು ತಮ್ಮ ಮೌಖಿಕ ಪ್ರತಿಕ್ರಿಯೆಯಲ್ಲಿ ಅತ್ಯುತ್ತಮವೆಂದು ವ್ಯಕ್ತಪಡಿಸಿದರು.

## ಸೆಂಟ್ ಫಿಲೋಮಿನಾಸ್ ಕಾಲೇಜ್ ಸ್ವಾಯತ್ತ ಸಂಸ್ಥೆ ದೀಕ್ಷಾರಂಭ ಪರಿಚಯ

**ಮೈಸೂರು:** ಸೆಂಟ್ ಫಿಲೋಮಿನಾಸ್ ಕಾಲೇಜ್ (ಸ್ವಾಯತ್ತ), ಮೈಸೂರಿನಲ್ಲಿ ದೀಕ್ಷಾರಂಭ ಪರಿಚಯ ಕಾರ್ಯಕ್ರಮವು ಕಾಲೇಜಿನ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಿತು. ಮೂರು ದಿನಗಳ ಕಾಲ ನಡೆದ ಈ ಕಾರ್ಯಕ್ರಮವು ಹೊಸದಾಗಿ ದಾಖಲಾದ ವಿದ್ಯಾರ್ಥಿಗಳನ್ನು ಮತ್ತು ಅವರ ಪೋಷಕರನ್ನು ಕಾಲೇಜಿನ ಶೈಕ್ಷಣಿಕ ಸಮುದಾಯಕ್ಕೆ ಆತ್ಮೀಯವಾಗಿ ಸ್ವಾಗತಿಸಿತು. ಕಾಲೇಜಿನ The Internal Quality Assurance Cell (IQAC) ವ್ಯಾಪ್ತಿಯಲ್ಲಿ ಆಯೋಜಿತ ಈ ಕಾರ್ಯಕ್ರಮವು ಕಾಲೇಜು ಗೀತೆಯಾದ ಫಿಲೋಮಿನಾಸ್ ಆಂಥಮ್‌ನೊಂದಿಗೆ ಆರಂಭವಾಯಿತು, ಆಡಳಿತಾಧಿಕಾರಿ ರೆವ್. ಫಾ. ಜ್ಞಾನಪ್ರಕಾಶಂ ಅವರ ತಂಡ ಪ್ರಾರ್ಥನೆ ನಡೆಸಿ, ಹೊಸ ಶೈಕ್ಷಣಿಕ ವರ್ಷದ ಹಾರೈಸಿದರು. ರೆವ್. ಡಾ. ಲೌರ್ದು ಪ್ರಸಾದ್ ಜೋಸೆಫ್, ಸೆಂಟ್ ಫಿಲೋಮಿನಾಸ್ ಕಾಲೇಜಿನ ರೆಕ್ಟರ್, ದೀಪವನ್ನು ಬೆಳಗಿಸುವ ಮೂಲಕ ಅಧಿಕೃತ ಉದ್ಘಾಟನೆ ಮಾಡಿದರು. ಇದು ಜ್ಞಾನೋದಯ ಮತ್ತು ಶಿಕ್ಷಣದ ಶ್ರೇಷ್ಠತೆಯನ್ನು ಸಂಕೇತಿಸಿತು. ಡಾ. ರವಿ ಜೆ. ಡಿ. ಸಲ್ಡಾನ್ಹಾ, ಪ್ರಿನ್ಸಿಪಾಲ್, ಪ್ರೇರಣಾದಾಯಕ ಭಾಷಣದೊಂದಿಗೆ ವಿದ್ಯಾರ್ಥಿಗಳಿಗೂ ಪೋಷಕರಿಗೂ ಹಾರ್ದಿಕವಾಗಿ ಸ್ವಾಗತ ಕೋರಿದರು. ಕಾಲೇಜಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸುತ್ತಾ, ಶ್ರೇಷ್ಠ ಶೈಕ್ಷಣಿಕ ಆಯ್ಕೆಗಳ ಮಹತ್ವವನ್ನು ತಿಳಿಸಿದರು, ಇದು ಭವಿಷ್ಯದ ಯಶಸ್ಸಿಗೆ ಬುನಾದಿ ಇರಿಸಲಿದೆ. ಡಾ. ಸಲ್ಡಾನ್ಹಾ ಅವರು ಕಾಲೇಜಿನ ವೈವಿಧ್ಯಮಯ ಶೈಕ್ಷಣಿಕ ಪಠ್ಯಕ್ರಮಗಳು, ಆಧುನಿಕ ಸೌಕರ್ಯಗಳು, ಮತ್ತು ಅನುಭವಿ ಅಧ್ಯಾಪಕರನ್ನೊಳಗೊಂಡ ಮಾಹಿತಿ ನೀಡಿದರು. ಪ್ರಯೋಜನಕಾರಿಯ ಶೈಕ್ಷಣಿಕ ಮತ್ತು ಸಹಪಠ್ಯ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳಲು ಪ್ರೋತ್ಸಾಹಿಸಿದರು. ರೆವ್. ಡಾ. ಲೌರ್ದು ಪ್ರಸಾದ್ ಜೋಸೆಫ್, ರೆಕ್ಟರ್, ಅವರ ಸ್ಫೂರ್ತಿದಾಯಕ ಭಾಷಣದಲ್ಲಿ, ಪೋಷಕರು ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಸೆಂಟ್ ಫಿಲೋಮಿನಾಸ್ ಕಾಲೇಜನ್ನು ಆರಿಸಿದ್ದಕ್ಕಾಗಿ ಕೃತಜ್ಞತೆ ವ್ಯಕ್ತಪಡಿಸಿದರು. 80 ವರ್ಷಗಳ ಕಾಲಸೀಮೆಯ ಸಮೃದ್ಧ ಪರಂಪರೆಯನ್ನು ಪರಿಚಯಿಸಿ, 2025ನೇ ಶೈಕ್ಷಣಿಕ ವರ್ಷಕ್ಕೆ 700 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರವೇಶ ಪಡೆದಿರುವುದು ಹೆಮ್ಮೆಗೀಡಾಗಿದೆ ಎಂದು ಅಭಿಪ್ರಾಯಪಟ್ಟರು. ರೆವ್. ಡಾ. ಲೌರ್ದು ಪ್ರಸಾದ್ ಜೋಸೆಫ್ (ರೆಕ್ಟರ್), ರೆವ್. ಫಾ. ಜ್ಞಾನಪ್ರಕಾಶಂ (ಆಡಳಿತಾಧಿಕಾರಿ), ರೆವ್. ಫಾ. ಡೇವಿಡ್ ಸಗಯರಾಜ್ ಎಸ್. (ಅಸಿಸ್ಟೆಂಟ್ ರೆಕ್ಟರ್), ಡಾ. ರವಿ ಜೆ. ಡಿ. ಸಲ್ಡಾನ್ಹಾ (ಪ್ರಿನ್ಸಿಪಾಲ್), ಎಂ. ನಾಗರಾಜ್ ಅರಸ್ (ವೈಸ್ ಪ್ರಿನ್ಸಿಪಾಲ್ – ಅಕಾಡೆಮಿಕ್), ಶ್ರೀ. ರೋನಾಲ್ಡ್ ಪ್ರಕಾಶ್ ಕ್ಯೂಟಿನ (ವೈಸ್ ಪ್ರಿನ್ಸಿಪಾಲ್ – ಆಡಳಿತ), ಡಾ. ರೀನಾ ಫ್ರಾನ್ಸಿಸ್ (ಪರೀಕ್ಷೆಗಳ ನಿಯಂತ್ರಕ), ಡಾ. ನೂರ್ ಮುಬಶೀರ್ ಸಿ.ಎ. (ಸಂಯೋಜಕ, ಪಿಜಿ ಅಧ್ಯಯನಗಳು ಮತ್ತು ಸಂಶೋಧನಾ ಕೇಂದ್ರ), ಮಿಸ್ಟರ್. ಲಿಡಿಯಾ ಅಂಜಲಿ ಎ. , ಶ್ರೀ. ಎ. ಥಾಮಸ್ ಗುಣಸೀಲನ್ ಮತ್ತು ಡಾ. ದೀಪಾ ವಿ. ಉಪಸ್ಥಿತರಿದ್ದರು.



## ವೈದ್ಯರ ಕರ್ತವ್ಯ ನಿಷ್ಠೆ, ತ್ಯಾಗವನ್ನು ಸ್ಮರಿಸುವುದು ಪ್ರತಿಯೊಬ್ಬರ ಜವಾಬ್ದಾರಿ

**ಚನ್ನಪಟ್ಟಣ:** ದೇವರು ನಮ್ಮನ್ನು ಸೃಷ್ಠಿ ಮಾಡಿದರೆ ನಮಗೆ ಆರೋಗ್ಯದ ಮೂಲಕ ಆಯಸ್ಸನ್ನು ನೀಡುವ ವೈದ್ಯರ ಸೇವೆಯನ್ನು ಪ್ರತಿಯೊಬ್ಬರು ಗೌರವಿಸಬೇಕಿದೆ ಎಂದು ಕಸ್ತೂರಿ ಕರ್ನಾಟಕ ಜನಪರ ವೇದಿಕೆ ರಾಜ್ಯಾಧ್ಯಕ್ಷ ರಮೇಶ್‌ಗೌಡರು ಅಭಿಪ್ರಾಯಿಸಿದರು.

ಕಾವೇರಿ ನದಿ ನೀರಿನ ಹಂಚಿಕೆಯಲ್ಲಿ ಸಂಕಷ್ಟ ಸೂತ್ರ ರಚಿಸುವ ಜೊತೆಗೆ ಮೇಕೆದಾಟು ಯೋಜನೆಗೆ ಅಡಿಗಲ್ಲು ಹಾಕುವಂತೆ ಹಾಗೂ ಸತ್ತೇಗಾಲ ಯೋಜನೆಯನ್ನು ಶೀಘ್ರವಾಗಿ ಮುಕ್ತಾಯ ಮಾಡುವಂತೆ ಆಗ್ರಹಿಸಿ ಕಸ್ತೂರಿ ಕರ್ನಾಟಕ ಜನಪರ ವೇದಿಕೆಯ ರಾಜ್ಯಾಧ್ಯಕ್ಷರಾದ ರಮೇಶ್‌ಗೌಡರ ನೇತೃತ್ವದಲ್ಲಿ 2023ರ ಅಕ್ಟೋಬರ್ 5 ರಿಂದ ನಿರಂತರವಾಗಿ ಹೋರಾಟ ಮಾಡುತ್ತಿದ್ದು ಮಂಗಳವಾರ ನಡೆದ 637 ನೇ ದಿನದ ಹೋರಾಟದಲ್ಲಿ ಕಸ್ತೂರಿ ಕರ್ನಾಟಕ ಜನಪರ ವೇದಿಕೆ ವತಿಯಿಂದ ವಿಶ್ವ ವೈದ್ಯರ ದಿನಾಚರಣೆ ಪ್ರಯುಕ್ತ ತಾಲೂಕಿನ ವೈದ್ಯರನ್ನು ಸನ್ಮಾನಿಸಿ ಗೌರವಿಸಿದ ಬಳಿ ಅವರು ಮಾತನಾಡಿ, ಪ್ರತಿಯೊಬ್ಬರು ತಮ್ಮ ಆರೋಗ್ಯದ ಕಾಳಜಿ ನೋಡಿಕೊಳ್ಳುತ್ತಾರೆ ಆದರೆ ನಮ್ಮ ಆರೋಗ್ಯವನ್ನು ಕಾಪಾಡುವ ವೈದ್ಯರನ್ನು ಸೀಮಿತ ಕಾಲಕ್ಕೆ ನೆನಪು ಮಾಡಿಕೊಂಡು ಮರೆತುಬಿಡುತ್ತಾರೆ. ವೈದ್ಯರ ವೃತ್ತಿಯಲ್ಲಿ ಶ್ರೇಷ್ಠವಾಗಿದ್ದು ಅವರನ್ನು ಪ್ರತಿಯೊಬ್ಬರು ಗೌರವಿಸಬೇಕಿದೆ ಎಂದರು.

ಕೊರೋನಾ ಸಂದರ್ಭದಲ್ಲಿ ವೈದ್ಯರ ಸೇವೆಯನ್ನು ನಾವು ಎಂದೂ ಮರೆಯುವಂತಿಲ್ಲ. ನಮಗೆ ಜನ್ಮ ಕೊಟ್ಟ ತಂದೆ-ತಾಯಿ, ನಾವು ಜನ್ಮ ಕೊಟ್ಟ ಮಕ್ಕಳು, ಒಡಹುಟ್ಟಿದವರೂ ಸಹ ನಮ್ಮನ್ನು ಮುಟ್ಟಲು ಹಿಂಜರಿಯುತ್ತಿದ್ದ ಸಂದರ್ಭದಲ್ಲಿ ವೈದ್ಯರು ತಮ್ಮ



ಜೀವದ ಹಂಗನ್ನು ತೊರೆದು ಸೋಂಕಿತರನ್ನು ಚಿಕಿತ್ಸೆ ಮಾಡಿದ್ದಾರೆ. ಸೋಂಕಿತರಿಗೆ ಮರುಜನ್ಮ ನೀಡಿದ ವೈದ್ಯರು ಇಂದು ನಮ್ಮ ನಿಜವಾದ ದೇವರೆಂದು ಭಾವಿಸಿ ವೈದ್ಯರನ್ನು ನಾವೆಲ್ಲಾ ಗೌರವಿಸಬೇಕಿದೆ ಎಂದು ರಮೇಶ್‌ಗೌಡರು ಅಭಿಪ್ರಾಯಿಸಿದರು.

ಖ್ಯಾತ ವೈದ್ಯರಾದ ಡಾ. ಟಿ.ವಿ. ಶಂಕರ್‌ಅವರು ಅಭಿನಂದನೆ ಸ್ವೀಕರಿಸಿ ಮಾತನಾಡಿ ಪ್ರಾಣವನ್ನು ಒತ್ತೆ ಇಟ್ಟು ಮತ್ತೊಬ್ಬರ ಪ್ರಾಣವನ್ನು ಉಳಿಸುವ ವೈದ್ಯಕೀಯ ವೃತ್ತಿಯನ್ನು ಗೌರವಿಸಿ ಕಕಜ ವೇದಿಕೆ ರಾಜ್ಯಾಧ್ಯಕ್ಷ ರಮೇಶ್‌ಗೌಡರು ವೈದ್ಯರ ದಿನಾಚರಣೆಯಲ್ಲಿ ವೈದ್ಯರ ಕರ್ತವ್ಯ ನಿಷ್ಠೆ ಮತ್ತು ತ್ಯಾಗವನ್ನು ಗೌರವಿಸುತ್ತಿರುವುದು ಶ್ಲಾಘನೀಯವಾಗಿದೆ ಎಂದು ಬಣ್ಣಿಸಿದರು.

ಹಿರಿಯ ವೈದ್ಯರಾದ ಡಾ. ಜಿ ಮೋಹನ್‌ಅವರು ಮಾತನಾಡಿ, ವೈದ್ಯಕೀಯ ವೃದ್ಧಿಯಲ್ಲಿ ಇಂದು ಕೆಲವರು ಮಾನವೀಯ ಮೌಲ್ಯಗಳನ್ನು ಮರೆಯುತ್ತಿದ್ದು ಇಂತಹ ಕೆಲವರಿಂದ ಎಲ್ಲಾ ವೈದ್ಯರನ್ನು ಕೆಟ್ಟವರು ಎಂಬಂತೆ ಬಿಂಬಿಸುವಂತಾಗಿದೆ. ಆದರೂ ದೋಷಗಳ ನಡುವೆ ವೈದ್ಯರನ್ನು ಗೌರವಿಸಿ ಅಭಿನಂದಿಸುತ್ತಿರುವ ರಮೇಶ್‌ಗೌಡರ ಕಾರ್ಯ ಶ್ಲಾಘನೀಯವಾಗಿದೆ ಎಂದರು.

ಹಿರಿಯ ವೈದ್ಯರಾದ ಡಾ. ಸಂಪಂಗಿ ರಾಮಯ್ಯ ಅವರು ಮಾತನಾಡಿ, ವೈದ್ಯರ ಸೇವೆಯನ್ನು ಗುರುತಿಸಿ ಅಭಿನಂದಿಸುತ್ತಾ ಬಂದಿರುವ ರಮೇಶ್‌ಗೌಡರ ಕಾರ್ಯ ಅಭಿನಂದನಾರ್ಹವಾಗಿದೆ ಎಂದರು.

ಡಾ. ರಾಜಣ್ಣ ಅವರು ಮಾತನಾಡಿ, ವೈದ್ಯಕೀಯ ವೃತ್ತಿಯನ್ನು ಸಾರ್ಥಕ ಮಾಡಿಕೊಳ್ಳುವ ನಿಟ್ಟಿನಲ್ಲಿ ನಮ್ಮ ವೃತ್ತಿ ಧರ್ಮವನ್ನು ಪಾಲನೆ ಮಾಡಿಕೊಂಡು ಬಂದಿದ್ದೇವೆ. ನಮ್ಮನ್ನು ಗುರುತಿಸಿ ಸನ್ಮಾನಿಸುತ್ತಿರುವುದು ಶ್ಲಾಘನೀಯವಾಗಿದೆ ಎಂದರು. ಜನರಲ್ಲಿ ಆರೋಗ್ಯದ ಬಗ್ಗೆ ಅರಿವು ಮೂಡಿಸುವ ಮೂಲಕ ಮುಂದಿನ ಅನಾಹುತ ತಪ್ಪಿಸಲು ಎಲ್ಲರೂ ಕೈ ಜೋಡಿಸಬೇಕಿದೆ ಎಂದರು.

ಡಾ. ರಾಜಶ್ರೀ ಅವರು ಮಾತನಾಡಿ, ರಮೇಶ್‌ಗೌಡರು ಪ್ರತಿವರ್ಷ ವೈದ್ಯರನ್ನು ಅಭಿನಂದಿಸಿ ನಮ್ಮ ಸೇವೆಗೆ ಪ್ರೋತ್ಸಾಹ ನೀಡುತ್ತಾ ನಮ್ಮ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚು ಮಾಡುತ್ತಾ ಬಂದಿದ್ದಾರೆ. ಸಮಾಜದಲ್ಲಿ ಆಹಾರ, ನೀರು, ಗಾಳಿ ಎಲ್ಲವೂ ಕಲುಷಿತವಾಗುತ್ತಿದ್ದು, ಜನರು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಂಡು ಸದೃಢರಾಗಬೇಕಿದೆ ಎಂದರು.

ಡಾ. ಶಿವಕುಮಾರ್‌ಅವರು ಮಾತನಾಡಿ, ವೈದ್ಯರು ಎಂದರೆ ಹಣ ಕಿತ್ತುಕೊಳ್ಳುವವರು ಎಂಬ ಭಾವನೆ ಕೆಲವರಲ್ಲಿ ಮೂಡಿದೆ. ವೈದ್ಯರಲ್ಲಿ ಮಾನವೀಯತೆ ಇದೆ ಎಂಬುದನ್ನು ಅವರ ಸೇವಾ ನಿಷ್ಠೆಯನ್ನು ಗೌರವಿಸಿ ಅವರಿಗೆ ಹೆಚ್ಚಿನ ಜವಾಬ್ದಾರಿ ನೀಡಬೇಕು ಎಂದು ರಮೇಶ್‌ಗೌಡರು ವೈದ್ಯರನ್ನು ಅಭಿನಂದಿಸುತ್ತಿರುವುದು ಶ್ಲಾಘನೀಯವಾಗಿದೆ ಎಂದರು. ಇದೇ ವೇಳೆ ತಾಲೂಕಿನ ವೈದ್ಯರನ್ನು ಅಭಿನಂದಿಸಿ ಗೌರವಿಸಲಾಯಿತು.

ಸಂದರ್ಭದಲ್ಲಿ ವೇದಿಕೆ ರಾಜ್ಯ ಉಪಾಧ್ಯಕ್ಷ ರಂಜಿತ್ ಗೌಡ, ತಾಲೂಕು ಅಧ್ಯಕ್ಷ ಬೈರಾಪಟ್ಟಣ ಸತೀಶ್, ಡಾ. ರಾಜ್ ಕಲಾಬಳಗದ ಎಲೇಕೇರಿ ಮಂಜುನಾಥ್, ಚೌ.ಪು. ಸ್ವಾಮಿ, ಜಗದಾಪುರ ಕೃಷ್ಣೆಗೌಡ, ಟೆಂಪೋ ರಾಜೇಶ್, ಮರಿಅಂಕೇಗೌಡ, ಸಿ.ವಿ. ರಾಮು, ರಾಜು, ವೆಂಕಟೇಶ್ (ಸೇಟು), ಮಂಗಳವಾರಪೇಟೆ ಕೃಷ್ಣಪ್ರಸಾದ್, ಮರಿಅಂಕೇಗೌಡ, ಆಟೋ ವೆಂಕಟೇಶ್, ಚಿಕ್ಕೇನಹಳ್ಳೀ ಸುರೇಶ್, ಆರ್. ರಮೇಶ್, ಆರ್. ಶಂಕರ್, ಬೀರೇಶ್ ಇತರರು ಇದ್ದರು.

## ಕೊಯಿರಾ ಹಾಲು ಉತ್ಪಾದಕರ ಸಹಕಾರ ಸಂಘ ಬಿಜೆಪಿ ತೆಕ್ಕೆಗೆ

**ದೇವನಹಳ್ಳಿ:** ತಾಲೂಕು ಕೊಯಿರಾ ಉತ್ಪಾದಕರ ಸಹಕಾರ ಸಂಘದಲ್ಲಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಚುನಾವಣೆಯಲ್ಲಿ ಎಲೆವೆಂಕಟೇಶ್ ಉಪಾಧ್ಯಕ್ಷ ಸ್ಥಾನಕ್ಕೆ ರಾಜಣ್ಣ ನವರು ಅವಿರೋಧವಾಗಿ ಆಯ್ಕೆ ಗೊಂಡರು. ಕೊಯಿರಾ ಡೇರಿ ನೂತನ ಅಧ್ಯಕ್ಷ ಎಲೆ ವೆಂಕಟೇಶ್ ಮಾತನಾಡಿ,ಹೈನುಗಾರಿಕೆ ಅವಲಂಬಿತ ರೈತರ ಅಗತ್ಯ ಸೌಲಭ್ಯ ಗಳಿಗೆ ಹಾಗೂ ಅವರ ಜೀವನೋಪಾಯಕ್ಕೆ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಹೆಚ್ಚಿನ ಒತ್ತು ನೀಡುತ್ತೇನೆ. ಶಿಥಿಲಾವಸ್ಥೆಯಲ್ಲಿರುವ ಡೇರಿ ಕಟ್ಟಡವನ್ನು ತೆರವು ಮಾಡಿ ಸರ್ವ ಸದಸ್ಯರು ಸಹಕಾರ ಪಡೆದು ಸುಮಾರು 50 ಲಕ್ಷ ರೂಗಳ ವೆಚ್ಚದಲ್ಲಿ ಹೊಸ ಕಟ್ಟಡ ನಿರ್ಮಿಸುವ ಭರವಸೆ ನೀಡಿದರು. ಡೇರಿ ಮಾಜಿ ಅಧ್ಯಕ್ಷ ಹೊಸೂರುಎಚ್. ಎಂ.ರವಿ ಕುಮಾರ್ ಮಾತನಾಡಿ, ಕೈಗಾರಿಕೆಗಳು ತಲೆಯೆತ್ತಿದ ಹಿನ್ನೆಲೆ ಹೈನು ಗಾರಿಕೆ ಕುಂಠಿತ ಕೊಳ್ಳುವ ಪ್ರಶ್ನೆಗಳಿಗೆ ಉತ್ತರಿಸಿದ ಅವರು ನಮ್ಮಲ್ಲಿ 20 ಕ್ಯಾನ್ ಗಳು ಪ್ರತಿದಿನ ಬೆಂಗಳೂರು ಡೈರಿಗೆ ಹಾಲುಸರಬರಾಜು ಆಗುತ್ತಿದೆ. ಈ ಹಿಂದೆ ತಾಲೂಕಿನಲ್ಲಿ ಅತಿ ಹೆಚ್ಚು ಹಾಲು ಉತ್ಪಾದಿಸುವ ಡೇರಿಗಳಲ್ಲಿ ಒಂದಾಗಿತ್ತು. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳು ಹಾಲು ಉತ್ಪಾದಕರ ಅನುಕೂಲಕ್ಕೆ ಬಳಕೆಯಾಗುತ್ತಿದೆ ಕೈಗಾರಿಕೆಗಳು ನಮ್ಮಲ್ಲಿದ್ದರು ಹೈನುಗಾರಿಕೆಯಲ್ಲಿ ಹಿಂದುಳಿದಿಯಲ್ಲಿ. ಹಾಲು ಉತ್ಪಾದಕರಿಗೆ ಐದುರುಗಳ ಪ್ರೋತ್ಸಾಹ ಧನ ಸರ್ಕಾರ ಹಿಂತೆಗೆದು ಕೊಂಡಿದೆ ಮುಂದಿನ ದಿನಗಳಲ್ಲಿ ಈ ಸಂಬಂಧ ಸರ್ಕಾರದ ಗಮನ ಸೆಳೆಯುವ ಕೆಲಸ ಆಗಲಿದೆ ಎಂದರು. ಚುನಾವಣಾ ಅಧಿಕಾರಿ ಚೇತನಾ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯ ದರ್ಶಿ ಎಚ್. ಎಂ. ರವಿಕುಮಾರ್, ಕುಂದಾಣ ಹೋಬಳಿ ಅಧ್ಯಕ್ಷ ಅರುವನಹಳ್ಳಿ ವೆಂಕಟೇಗೌಡ, ಕೊಯಿರಾ ಗ್ರಾಮ ಪಂಚಾಯಿತಿ ಸದಸ್ಯ ಮುನೀಂದ್ರ, ಕೊಯಿರಾ ಉತ್ಪಾದಕರ ಸಹಕಾರ ಸಂಘದ ನಿರ್ದೇಶಕರಾದ ಕೃಷ್ಣ ಮೂರ್ತಿ, ನಾಗರಾಜು, ರಾಮಾಂಜಿನಪ್ಪ, ವೆಂಕ ಟೇಶ್, ಕುಮಾರಸ್ವಾಮಿ, ಆನಂದ್, ರಾ.ಕೃಷ್ಣ ಮೂರ್ತಿ, ಕೆ.ಎಂ. ನಾರಾಯಣ ಸ್ವಾಮಿ, ಕೃಷ್ಣಪ್ಪ, ಸಿಇಒ ಹಾಜರಿದ್ದರು.

## ಧನ ಸಹಾಯಕ್ಕಾಗಿ ಅರ್ಜಿ ಆಹ್ವಾನ

**ಬೆಂಗಳೂರು:** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ 2025-26ನೇ ಸಾಲಿಗೆ ವೃತ್ತಿ ರಂಗಭೂಮಿ ಕಾಯಕಲ್ಪ ಯೋಜನೆಯಡಿ ಧನಸಹಾಯಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮಾಹಿತಿಗೆ www.kannadasiri.karnataka.gov.in ನಲ್ಲಿ ಪಡೆದು, ಭರ್ತಿ ಮಾಡಿ ಅಗತ್ಯ ದಾಖಲೆಗಳನ್ನು ಲಗತ್ತಿಸಿ 2025ನೇ ಜುಲೈ 15 ರಿಂದ ಆಗಸ್ಟ್ 15 ರೊಳಗೆ ಸಲ್ಲಿಸಬಹುದು.

**ಜಿಲ್ಲಾ ಮಕ್ಕಳ ರಕ್ಷಣಾ ಘಟಕ**
ಬೆಂಗಳೂರು ಗ್ರಾಮಾಂತರ ಜಿಲ್ಲೆ,
'ಜಿಲ್ಲಾಡಳಿತ ಭವನ', ಸಂ.206, 2ನೇ ಮಹಡಿ, ಬೀರಸಂದ್ರ, ಕುಂದಾಣ ಹೋಬಳಿ, ದೇವನಹಳ್ಳಿ ತಾ॥, ಬೆಂಗಳೂರು ಗ್ರಾ. ಜಿಲ್ಲೆ-562110.
ದೂರವಾಣಿ: 080-29560034, ಇ-ಮೇಲ್: dcpobrural2012@gmail.com

ಸಂ: ಜಿಮರಘ/ಬೆಂಗ್ರಾ/ಪೋ.ಪತ್ರೆ/2025-26/66 ದಿನಾಂಕ: 01.07.2025

**ಪೋಷಕರನ್ನು ಗುರುತಿಸಲು ಪ್ರಕಟಣೆ**



**ಮಗುವಿನ ಹೆಸರು:**------, **ಮಗು ದೊರೆತ ಸ್ಥಳ:** ದೊಡ್ಡ ಅಮನಿಕೆರೆ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. **ಮಗುವಿನ ಆರೋಗ್ಯ:** ಆರೋಗ್ಯ ಉತ್ತಮವಾಗಿದೆ. **ದೊರೆತ ಸಮಯ:** ದಿನಾಂಕ: 20.05.2025 ರಂದು ಬೆಳಗ್ಗೆ 7.00 ಗಂಟಗೆ. **ವಯಸ್ಸು:** 24 ದಿನದ ನವಜಾತ ಶಿಶು. **ಮುಖ:** ಗುಂಡು ಮುಖ. **ತೂಕ:** 2,48 ಕೆ.ಜಿ. **ಬಣ್ಣ:** ಗೋಧಿ ಬಣ್ಣ. **ಕೂದಲು:** ಕಪ್ಪು. **ಎತ್ತರ:** 47 ಸೆಂ.ಮೀ.

**ಮಾಹಿತಿಗಾಗಿ:** ಪರಸ್ಪರ ದತ್ತು ಕೇಂದ್ರ, ಶ್ರೀ ಸಿದ್ದಲಿಂಗೇಶ್ವರ ಬಿಲ್ಡಿಂಗ್, ಎಸ್.ಎಸ್.ನಿಲಯ, ನಂ.05, 1ನೇ ಮುಖ್ಯರಸ್ತೆ, ಡಿಫೆನ್ಸ್ ಕಾಲೋನಿ, ಮಾರುತಿ ನಗರ, ಅರಿಶಿನಕುಂಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-562123.

**ಫೋ: 9482216080, 9141532430 ಅಥವಾ ಮೇಲಿನ ವಿಳಾಸ.**

ಸಹಿ/-
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಬೆಂಗಳೂರು ಗ್ರಾಮಾಂತರ.ಜಿಲ್ಲೆ

ವಾಸಸಂಇ/ಸಿಪಿ/ಎಎಎ/1554/2025-26

**ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ**
ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 110.

ಸಂ: ಬಿಐಎಪಿಎ/ಟಿಪಿ/ಭೂಉಬ/97/2024-25/25-26/957 ದಿನಾಂಕ: 30.06.2025

**ಪ್ರಕಟಣೆ**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ಭೂಉಪಯೋಗ ವಲಯದಿಂದ ಸಾರ್ವಜನಿಕ / ಅರೆಸಾರ್ವಜನಿಕ (ಶೈಕ್ಷಣಿಕ) ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

| ಕ್ರ. ಸಂ | ಅರ್ಜಿದಾರರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮದ ವಿವರ | ಸರ್ವೆ ನಂ. | ವಿಸ್ತೀರ್ಣ ಎ-ಗು | ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ | ಬದಲಾವಣೆ ಕೋರಿರುವ ಭೂ ಉಪಯೋಗ |
|---|---|---|---|---|---|---|---|---|
| 1. | ಶ್ರೀ ಕೃಷ್ಣ ರಾಜೇಂದ್ರ ಚಾರಿಟೆಬಲ್ ಟ್ರಸ್ಟ್ ಇವರ ಪರವಾಗಿ ಅಧ್ಯಕ್ಷರಾದ ಶ್ರೀ ಸಿ.ಪ್ರಭಾಕರ್ | ದೇವನಹಳ್ಳಿ | ಕುಂದಾಣ | ಲಿಂಗಧೀರಗೊಲ್ಲಹಳ್ಳಿ | 12 | 3-14 | ವ್ಯವಸಾಯ | ಸಾರ್ವಜನಿಕ / ಅರೆ ಸಾರ್ವಜನಿಕ (ಶೈಕ್ಷಣಿಕ) |
| 2. | | ದೇವನಹಳ್ಳಿ | ಕುಂದಾಣ | ಲಿಂಗಧೀರಗೊಲ್ಲಹಳ್ಳಿ | 13/2 | 0-09 | | |
| 3. | | ದೇವನಹಳ್ಳಿ | ಕುಂದಾಣ | ಲಿಂಗಧೀರಗೊಲ್ಲಹಳ್ಳಿ | 14 | 0-28 | | |
| 4. | | ದೇವನಹಳ್ಳಿ | ಕುಂದಾಣ | ಲಿಂಗಧೀರಗೊಲ್ಲಹಳ್ಳಿ | 34/7 | 0-13 | | |
| 5. | | ದೇವನಹಳ್ಳಿ | ಕುಂದಾಣ | ಲಿಂಗಧೀರಗೊಲ್ಲಹಳ್ಳಿ | 71 | 0-16 | | |

**ಷರಾ :-** ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದು, ಸದರಿ ಜಮೀನುಗಳ ಪರಿಸರದಲ್ಲಿ ವಸತಿಯೇತರ ಅಭಿವೃದ್ಧಿ ಬೆಳವಣಿಗೆಗಳು ಬರುತ್ತಿದ್ದು, ಈ ಜಮೀನುಗಳ ಪರಿಸರದಲ್ಲಿ ಶೈಕ್ಷಣಿಕ ಉದ್ದೇಶಕ್ಕೆ ಸಾರ್ವಜನಿಕರಿಂದ ತುಂಬ ಬೇಡಿಕೆಯಿದ್ದು, ಭವಿಷ್ಯದಲ್ಲಿ ಶೈಕ್ಷಣಿಕ ಉದ್ದೇಶಕ್ಕೆ ಹೆಚ್ಚಿನ ಬೇಡಿಕೆ ಬರುವುದರಿಂದ ಪ್ರಸ್ತಾಪಿತ ಪ್ರದೇಶದಲ್ಲಿ ಶೈಕ್ಷಣಿಕ ಬೆಳವಣಿಗೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುತ್ತೇವೆ ಅಲ್ಲದೇ, ಪ್ರಸ್ತಾಪಿತ ಜಮೀನುಗಳಲ್ಲಿ ಶೈಕ್ಷಣಿಕ ಬೆಳವಣಿಗೆಗಳನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಜಮೀನುಗಳನ್ನು ವ್ಯವಸಾಯ ಭೂಉಪಯೋಗ ವಲಯ ದಿಂದ ಸಾರ್ವಜನಿಕ / ಅರೆಸಾರ್ವಜನಿಕ (ಶೈಕ್ಷಣಿಕ) ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

ವಾಸಾಸಂಇ/ವಾಪ್ರ/ಜಿಎ/1572/2025-26

**ಕಾವೇರಿ ನೀರಾವರಿ ನಿಗಮ ನಿಯಮಿತ**
**(ಕರ್ನಾಟಕ ಸರ್ಕಾರದ ಒಂದು ಉದ್ಯಮ)**
**ಕಾರ್ಯಪಾಲಕ ಅಭಿಯಂತರರು ಕಛೇರಿ,**
**ಕಬಿನಿ ನಾಲಾ ವಿತರಣಾ ವಿಭಾಗ,**
**ತಿ. ನರಸೀಪುರ-571124, ಮೈಸೂರು ಜಿಲ್ಲೆ.**
**Ph: 08227-261362 E-Mail eekcdtnp@yahoo.com**

**ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ 04/2025-26 ದಿ: 26.06.2025**

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ/ ಪಿ.ಡಬ್ಲ್ಯೂಡಿ, ಮೈಸೂರು/ಬೆಂಗಳೂರು ಇವರ ಪರವಾಗಿ ಲೋಕೋಪಯೋಗಿ ಇಲಾಖೆ, ನೀರಾವರಿ ಇಲಾಖೆ, ಸಿಪಿಡಬ್ಲ್ಯೂಡಿ ಹಾಗೂ ಇತರೆ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ನೋಂದಾಯಿಸಲ್ಪಟ್ಟ ಹಾಗೂ ಸರ್ಕಾರದ ಕಾರ್ಮಿಕ ಇಲಾಖೆ, ಇ.ಎಸ್.ಐ. ಮತ್ತು ಇ.ಪಿ.ಎಫ್. ಇಲಾಖೆಗಳಲ್ಲಿ ಕಡ್ಡಾಯವಾಗಿ ಹೆಸರು ನೋಂದಾಯಿಸಿರುವ ಗುತ್ತಿಗೆದಾರರಿಂದ ಒಟ್ಟು 3 ಕಾಮಗಾರಿಗಳಿಗಾಗಿ ಐಟಂವಾರು ದರದ ಎರಡನೇ ಕರೆಯ ಅಲ್ಪಾವಧಿ ಟೆಂಡರ್‌ಗಳನ್ನು ಕೆಪಿಪಿಪಿ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವುದು. ಅರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರಗಳನ್ನು ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಆನ್‌ಲೈನ್ ಮೂಲಕ ಟೆಂಡರ್‌ಗಳ ಜೊತೆಗೆ ಸಲ್ಲಿಸುವುದು. ಪ್ರೊಸೆಸ್ಸಿಂಗ್ ಶುಲ್ಕವನ್ನು ಇ-ಪೇಮೆಂಟ್ ಮೂಲಕ ಸಂದಾಯ ಮಾಡುವುದು. ಇ.ಎಂ.ಡಿ ಹಣ ಹಾಗೂ ಪ್ರೊಸೆಸ್ಸಿಂಗ್ ಶುಲ್ಕವನ್ನು ಇ-ಪೇಮೆಂಟ್ ಮೂಲಕ ಸಂದಾಯ ಮಾಡುವುದು. ಕಾಮಗಾರಿಗಳಿಟ್ಟ ಕನಿಷ್ಠ ಮೊತ್ತ ರೂ.12.36 ಲಕ್ಷಗಳು ಹಾಗೂ ಗರಿಷ್ಠ ಮೊತ್ತ ರೂ.30.49 ಲಕ್ಷಗಳು, ಸದರಿ ಕಾಮಗಾರಿಗಳ ಟೆಂಡರ್ ಕ್ವಾರಿಸ್/ಕ್ಲ್ಯಾರಿಫಿಕೇಷನ್ ಕೊನೆಯ ದಿ: 02.07.2025 ಸಾಯಂಕಾಲ 4.00 ಗಂಟೆವರೆಗೆ. ಆನ್ ಲೈನ್ ಮೂಲಕ ಭರ್ತಿಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿಯೊಂದಿಗೆ ಸಲ್ಲಿಸುವ ಕೊನೆಯ ದಿ: 03.07.2025 ಸಾಯಂಕಾಲ 5.00 ಗಂಟೆಯವರೆಗೆ, ಬಿಡ್‌ಗಳನ್ನು ತೆರೆಯುವ ದಿ: 04.07.2025 ಬೆಳಿಗ್ಗೆ 05.30 ಗಂಟೆಗೆ, ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ https://kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು

DIPR/DDMYS/543/KSMCA/323/2025-26

# ಸಂಜೆ ಟಿಪ್ಸ್

## ನೆಟ್‌ಫ್ಲಿಕ್ಸ್ ಚಂದಾದಾರಿಕೆ ಒಳಗೊಂಡ ಹೊಸ ವಿ ಮ್ಯಾಕ್ಸ್ ಫ್ಯಾಮಿಲಿ ಪ್ಲ್ಯಾನ್ ಪರಿಚಯಿಸಿದ ವಿ

ದೇಶದ ಪ್ರಮುಖ ದೂರಸಂಪರ್ಕ ಸೇವಾ ಸಂಸ್ಥೆಯಾಗಿರುವ ವಿ ತನ್ನ ಹೊಸ ವಿ ಮ್ಯಾಕ್ಸ್ ಫ್ಯಾಮಿಲಿ ಪೋಸ್ಟ್‌ಪೇಯ್ಡ್ ಯೋಜನೆ ಪ್ರಾರಂಭಿಸಿರುವುದಾಗಿ ಇಂದು ಇಲ್ಲಿ ಪ್ರಕಟಿಸಿದೆ. ಈ ಪ್ಲ್ಯಾನ್- ಉದ್ಯಮದಲ್ಲಿಯೇ ಅತ್ಯುನ್ನತ ಡೇಟಾ ಪ್ರಯೋಜನವನ್ನು ನೀಡಲಿದೆ. ಈ ಯೋಜನೆಯು ನೆಟ್‌ಫ್ಲಿಕ್ಸ್ ಚಂದಾದಾರಿಕೆ ಮತ್ತು ಒಂದೇ ಮಾಸಿಕ ಬಿಲ್‌ನಲ್ಲಿ ಹೆಚ್ಚುವರಿಯಾಗಿ 18 ಒಟಿಟಿ ವೇದಿಕೆಗಳ ಬಳಕೆ ಸೌಲಭ್ಯ ಒಳಗೊಂಡಂತೆ ಸರಿಸಾಟಿಯಿಲ್ಲದ ಒಟಿಟಿ ಅನುಭವ ನೀಡಲಿದೆ. ಇದು ಸ್ಪರ್ಧಾತ್ಮಕ ಬೆಲೆಯಲ್ಲಿ ಉತ್ತಮ ಮೌಲ್ಯವನ್ನು ಒದಗಿಸಲಿದೆ. ದೇಶದಲ್ಲಿ ಮನರಂಜನೆಯು ಮೊಬೈಲ್ ಡೇಟಾ ಬಳಕೆಗೆ ಪ್ರಮುಖ ಚಾಲಕ ಶಕ್ತಿಗಳಲ್ಲಿ ಒಂದಾಗಿದೆ. ಅತ್ಯುತ್ತಮ ದರ್ಜೆಯ ಒಟಿಟಿ ಅನುಭವಕ್ಕಾಗಿ ಹೆಚ್ಚುತ್ತಿರುವ ಬೇಡಿಕೆ ಪೂರೈಸುವ ಮೂಲಕ ವಿ, ತನ್ನ ಹೊಸ ವಿ ಮ್ಯಾಕ್ಸ್ ಫ್ಯಾಮಿಲಿ ಪ್ಲ್ಯಾನ್ 871 ಗೆ ಸ್ಥಿರ ಪುನರಾವರ್ತಿತ ಪ್ರಯೋಜನವಾಗಿ ನೆಟ್‌ಫ್ಲಿಕ್ಸ್ ಚಂದಾದಾರಿಕೆಯನ್ನು ಸೇರ್ಪಡೆ ಮಾಡಿದೆ. ನೆಟ್‌ಫ್ಲಿಕ್ಸ್ ಮೂಲ ಚಂದಾದಾರಿಕೆಯ ಜೊತೆಗೆ, ವಿ ಪೋಸ್ಟ್‌ಪೇಯ್ಡ್ ಬಳಕೆದಾರರು ತಮ್ಮ ಮೊಬೈಲ್ ಅಥವಾ ಟೆಲಿವಿಷನ್‌ನಲ್ಲಿ ಜಾಗತಿಕ ಗುಣಮಟ್ಟದ ಮನರಂಜನೆ ಆನಂದಿಸಲು ಸಾಧ್ಯವಾಗಲಿದೆ. ಈ ಪ್ಲ್ಯಾನ್‌ನಲ್ಲಿ ಇರುವ ಗ್ರಾಹಕರು ನೆಟ್‌ಫ್ಲಿಕ್ಸ್‌ನಿಂದ ವಿವಿಧ ಪ್ರಕಾರಗಳು ಮತ್ತು ವಿಭಾಗಗಳಲ್ಲಿ ವ್ಯಾಪಿಸಿರುವ ವೈವಿಧ್ಯಮಯ ಮನರಂಜನಾ ಕಾರ್ಯಕ್ರಮಗಳನ್ನು ವೀಕ್ಷಿಸಬಹುದು. ಇದರಲ್ಲಿ ವಿಶ್ವದಾದ್ಯಂತ ಜನಪ್ರಿಯವಾಗಿರುವ ಜಾಗತಿಕ ಕಾರ್ಯಕ್ರಮಗಳಾದ ಸ್ಕ್ವಿಡ್ ಗೇಮ್, ವೆಡನ್ಸ್‌ಡೆ, ಸ್ಟ್ರೇಂಜರ್ ಥಿಂಗ್ಸ್, ಲಾಪತಾ ಲೇಡೀಸ್, ಪುಷ್ಪಾ 2, ಜವಾನ್, ಛಾವಾ, ಸಿಕಂದರ್ ಸೇರಿದಂತೆ ಇನ್ನೂ ಅನೇಕ ಚಿತ್ರ ಶೀರ್ಷಿಕೆಗಳು, ಸಿನಿಮಾ, ಪ್ರಾದೇಶಿಕ ಚಲನಚಿತ್ರಗಳು ಮತ್ತು ಕಪಿಲ್ ಶರ್ಮಾ ಶೋ, ಟೆಸ್ಟ್, ಜ್ಯುವೆಲ್ ಥೀಫ್, ದಿ ರಾಯಲ್ಸ್, ಖಾಕಿ: ದಿ ಬೆಂಗಾಲ್ ಚಾಪ್ಟರ್, ಬ್ಲ್ಯಾಕ್ ವಾರಂಟ್, ಹೀರಾಮಂಡಿ, ರಾಣಾ ನಾಯ್ಡು ಮುಂತಾದ ಸರಣಿಗಳೂ ಇದರಲ್ಲಿ ಸೇರಿವೆ. ಈ ಯೋಜನೆಯು ಡಬ್ಲ್ಯುಡಬ್ಲ್ಯುಇ ಸೇರಿದಂತೆ ನೆಟ್‌ಫ್ಲಿಕ್ಸ್‌ನಲ್ಲಿ ಲಭ್ಯ ಇರುವ ಎಲ್ಲಾ ನೇರ ಪ್ರಸಾರದ ಕಾರ್ಯಕ್ರಮಗಳನ್ನು ವೀಕ್ಷಿಸಿ ಆನಂದಿಸುವುದಕ್ಕೂ ನಿಮಗೆ ಅವಕಾಶ ಒದಗಿಸುತ್ತದೆ. ನೆಟ್‌ಫ್ಲಿಕ್ಸ್ ಜೊತೆಗೆ, ಬಳಕೆದಾರರು ಹೆಚ್ಚುವರಿಯಾಗಿ 18 ಒಟಿಟಿ ಪ್ಲಾಟ್‌ಫಾರ್ಮ್‌ಗಳಲ್ಲಿನ ಕಾರ್ಯಕ್ರಮಗಳನ್ನು ಸಹ ವೀಕ್ಷಿಸಬಹುದು. ಇವೆಲ್ಲವೂ ಈ ಯೋಜನೆಯಲ್ಲಿ ಸೇರಿವೆ, ಹೀಗಾಗಿ ಇದು ಸದ್ಯಕ್ಕೆ ಲಭ್ಯವಿರುವ ಅತ್ಯಂತ ಸಮಗ್ರ ಮನರಂಜನೆ ಆಧಾರಿತ ಪೋಸ್ಟ್‌ಪೇಯ್ಡ್ ಯೋಜನೆಯಾಗಿದೆ.

## ಬೇಳೆಸಾರು

### ಪಾಕ ಶಾಲೆ



### ಬೇಕಿರುವ ಸಾಮಗ್ರಿ

ತೊಗರಿ ಬೇಳೆ, ಟೊಮೆಟೋ, ಈರುಳ್ಳಿ, ಅರಶಿಣ, ಸಾಂಬಾರ್ ಪುಡಿ, ಧನಿಯಾ ಪುಡಿ, ಬೆಳ್ಳುಳ್ಳಿ, ಎಣ್ಣೆ, ಉಪ್ಪು, ಕಾಯಿ ತರಿ, ಖಾರದ ಪುಡಿ, ಕೊತ್ತಂಬರಿ ಸೊಪ್ಪು, ಸಾಸಿವೆ ಜಿರಿಗೆ, ಕರಬೇವು ತರಕಾರಿಗಳು

### ಮಾಡುವ ವಿಧಾನ

ಮೊದಲು ತೊಗರಿ ಬೇಳೆಯನ್ನು ಚೆನ್ನಾಗಿ ತೊಳೆದು ನೀರಿನಲ್ಲಿ ನೆನೆಸಿಟ್ಟು, ಕುಕ್ಕರ್‌ನಲ್ಲಿ ಹಾಕಿ ಇದಕ್ಕೆ ಅರಶಿಣ, ಎಣ್ಣೆ ಹಾಕಿ ಮುಚ್ಚಳ ಮುಚ್ಚಿ ಸೀಟಿ ಹೊಡೆಸಿಕೊಳ್ಳಿ. 2 ಅಥವಾ 3 ಸೀಟಿ ಹೊಡೆಸಿಕೊಳ್ಳಿ. ಈಗ ಮಸಾಲೆ ಮಾಡಿಕೊಳ್ಳಿ. ಈಗ ಒಂದು ಮಿಕ್ಸಿ ಜಾರ್ ತೆಗೆದುಕೊಂಡು ಅರ್ಧ ಕಪ್ ಕಾಯಿ ತುರಿ, ಸಾಂಬಾರ್ ಪುಡಿ, ಅರಶಿಣ, ಖಾರದ ಪುಡಿ, ಕೊತ್ತಂಬರಿ ಸೊಪ್ಪು, ಧನಿಯಾ ಪುಡಿ, ಬೆಳ್ಳುಳ್ಳಿ ಹಾಕಿ ಸ್ವಲ್ಪವೇ ನೀರು ಹಾಕಿ ತರಿ ತರಿಯಾಗಿ ರುಬ್ಬಿಕೊಳ್ಳಬೇಕು. ನಂತರ ಇದನ್ನು ತೆಗೆದು ಬದಿಗಿಟ್ಟುಕೊಳ್ಳಿ. ಈಗ ಒಲೆ ಮೇಲೆ ಇಟ್ಟಿರುವ ಕುಕ್ಕರ್ ಮೂರು ಸೀಟಿ ಹೊಡೆದಿದ್ದರೆ ಅದರ ಮುಚ್ಚಳ ತೆಗೆದು ಅದಕ್ಕೆ ತರಕಾರಿಗಳ ಹಾಕಿಕೊಳ್ಳಬೇಕು. ಇದಕ್ಕೆ ಬದನೆಕಾಯಿ, ನುಗ್ಗೆಕಾಯಿ, ಟೊಮೆಟೋ, ಈರುಳ್ಳಿ, ಆಲೂಗಡ್ಡೆ ಹೀಗೆ ಯಾವುದಾದರು ತರಕಾರಿ ನಿಮ್ಮ ಬಳಿ ಇದ್ದರೆ ಅದನ್ನು ಕೂಡ ಹಾಕಿಕೊಳ್ಳಿ. ಈಗ ಮತ್ತೆ ಇದಕ್ಕೆ ರುಬ್ಬಿಕೊಂಡಿದ್ದ ಮಸಾಲೆಗಳ ಹಾಕಿ, ಉಪ್ಪು ಹಾಕಿ, ಹಾಗೆ ಒಂದು ಉಂಡೆಯ ಹುಣಸೆ ಹುಳಿ ರಸವನ್ನು ಕೂಡ ಇದಕ್ಕೆ ಹಾಕಿಕೊಳ್ಳಿ. ನಂತರ ಚೆನ್ನಾಗಿ ಮಿಕ್ಸ್ ಮಾಡಿ ಮುಚ್ಚಳ ಮುಚ್ಚಿ ಒಂದು ಸೀಟಿ ಹೊಡೆಯಲು ಬಿಡಿ. ಒಂದು ಸೀಟಿ ಹೊಡೆದ ಬಳಿಕ ಮುಚ್ಚಳ ತೆಗೆದು ಎಲ್ಲಾ ತರಕಾರಿ ಚೆನ್ನಾಗಿ ಬೆಂದಿದೆಯೇ ಎಂಬುದನ್ನು ಪರಿಶೀಲಿಸಿ. ಈಗ ಒಲೆ ಮೇಲೆ ಮತ್ತೊಂದು ಪಾತ್ರೆ ಇಟ್ಟು ಅದಕ್ಕೆ ಎಣ್ಣೆ ಹಾಕಿ, ಜೀರಿಗೆ, ಸಾಸಿವೆ, ಬೆಳ್ಳುಳ್ಳಿ, ಕರಿಬೇವು ಹಾಕಿ ಒಗ್ಗರಣೆ ಮಾಡಿ ಸಾರಿಗೆ ಹಾಕಿಕೊಳ್ಳಿ. ಇಷ್ಟಾದರೆ ನಿಮ್ಮ ಮುಂದೆ ಘಮ ಘಮಿಸುವ ಸಾರು ರೆಡಿಯಾಗುತ್ತದೆ.

## ಲಿವರ್ ಟ್ಯೂಮರ್‌ನ ಲಕ್ಷಣಗಳಿವು

### ಹೆಲ್ತ್ ಟಿಪ್ಸ್



ಹೊಟ್ಟೆಯ ಬಲಭಾಗದಲ್ಲಿ ನೋವು. ಯಕೃತ್ತು ದೇಹದ ಬಲಭಾಗದಲ್ಲಿದೆ. ಆದ್ದರಿಂದ ನೀವು ಅಲ್ಲಿ ಆಗಾಗ್ಗೆ ನೋವು ಅನುಭವಿಸುತ್ತಿದ್ದರೆ, ಅದು ಸಮಸ್ಯೆಯ ಸಂಕೇತವಾಗಿರಬಹುದು. ಇದು ಕೇವಲ ಸರಳ ಅನಿಲ ಸಮಸ್ಯೆಯಲ್ಲ, ಯಕೃತ್ತಿಗೆ ಸಂಬಂಧಿಸಿದ ಸಮಸ್ಯೆಯಾಗಿರಬಹುದು.

ಯಾವುದೇ ವಿಶೇಷ ಆಹಾರ ಅಥವಾ ವ್ಯಾಯಾಮವಿಲ್ಲದೆ, ಯಾವುದೇ ಕಾರಣವಿಲ್ಲದೆ ತೂಕ ಇಳಿಸಿಕೊಳ್ಳುವುದು ದೇಹದಲ್ಲಿನ ಸಮಸ್ಯೆಯ ಸಂಕೇತವಾಗಿರಬಹುದು. ಇದು ಯಕೃತ್ತಿನ ಗೆಡ್ಡೆಗಳಿರುವ ಜನರಲ್ಲಿ ಕಂಡುಬರುವ ಸಾಮಾನ್ಯ ಲಕ್ಷಣವಾಗಿದೆ.

ಕಡಿಮೆ ತಿಂದ ನಂತರ ಹಸಿವು ಕಡಿಮೆಯಾಗುವುದು ಅಥವಾ ಹೊಟ್ಟೆ ತುಂಬಿದ ಅನುಭವ. ಕಡಿಮೆ ಪ್ರಮಾಣದಲ್ಲಿ ತಿಂದ ನಂತರ ಹೊಟ್ಟೆ ತುಂಬಿದ ಅನುಭವ ಅಥವಾ ಹಸಿವು ಕಡಿಮೆಯಾಗುವುದು ಯಕೃತ್ತಿನಲ್ಲಿ ಬೆಳೆಯುವ ಗೆಡ್ಡೆ ಅಥವಾ ಹೊಟ್ಟೆಯ ಮೇಲಿನ ಒತ್ತಡದಿಂದ ಉಂಟಾಗಬಹುದು.

ಯಕೃತ್ತಿನ ಅಸಮರ್ಪಕ ಕಾರ್ಯದಿಂದಾಗಿ ಆಯಾಸ, ಯಾವುದೇ ತೊಂದರೆ ಇಲ್ಲದೆ ಆಯಾಸ ಮತ್ತು ದೇಹದಲ್ಲಿ ದೌರ್ಬಲ್ಯ ಉಂಟಾಗಬಹುದು. ಇದಲ್ಲದೇ ಪದೇ ಪದೇ ವಾಂತಿ ಅಥವಾ ಹಸಿವು ಕಡಿಮೆಯಾಗುವುದು ಯಕೃತ್ತು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂಬುದರ ಸಂಕೇತವಾಗಿದೆ. ಇದು ಅತಿಸಾರವಿಲ್ಲದೆ ಮಲಬದ್ಧತೆಯಂತಹ ಸಮಸ್ಯೆಗಳೊಂದಿಗೆ ಸಹ ಬರಬಹುದು.

ಮುಖ ಅಥವಾ ಕಣ್ಣುಗಳು ಹಳದಿ ಬಣ್ಣಕ್ಕೆ ತಿರುಗುವುದು. ಇದು ಕಾಮಾಲೆಯ ಸಂಕೇತ. ಇದು ದೇಹದಲ್ಲಿ ಬಿಲಿರುಬಿನ್ ಎಂಬ ವಸ್ತುವಿನ ಶೇಖರಣೆಯಿಂದ ಉಂಟಾಗುತ್ತದೆ. ಇದು ಯಕೃತ್ತು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ಸೂಚಿಸುತ್ತದೆ. ಇದರೊಂದಿಗೆ ಹೊಟ್ಟೆ ಉಬ್ಬುವುದು, ಹೊಟ್ಟೆ ನಿಧಾನವಾಗಿ ಊದಿಕೊಳ್ಳುವುದು ಮತ್ತು ಹೊಟ್ಟೆಯಲ್ಲಿ ಗ್ಯಾಸ್ ತುಂಬಿರುವ ಭಾವನೆಯಂತಹ ಲಕ್ಷಣಗಳು ಯಕೃತ್ತಿನ ವೈಫಲ್ಯದಿಂದ ಉಂಟಾಗುವ ಅಸ್ಸೈಟ್ಸ್ ಎಂಬ ಸ್ಥಿತಿಯನ್ನು ಸೂಚಿಸಬಹುದು. ಇದು ಸೂಕ್ಷ್ಮ ಆದರೆ ಪ್ರಮುಖ ಲಕ್ಷಣವಾಗಿದೆ. ಪದೇ ಪದೇ ಜ್ವರ ಬರುವುದು.. ಯಕೃತ್ತಿನ ಆರೋಗ್ಯ ಕಡಿಮೆಯಾಗುವುದರಿಂದ ದೇಹದ ರೋಗನಿರೋಧಕ ಶಕ್ತಿ ದುರ್ಬಲಗೊಳ್ಳುತ್ತದೆ. ಇದರಿಂದಾಗಿ ಸಣ್ಣಪುಟ್ಟ ಕಾಯಿಲೆಗಳು ಸಹ ಜ್ವರವಾಗಿ ಬದಲಾಗಬಹುದು. ಇದು ನಿರ್ಲಕ್ಷಿಸಬಾರದ ಲಕ್ಷಣ. ಯಕೃತ್ತಿನ ಗೆಡ್ಡೆ ದೊಡ್ಡದಾಗಿ ಬೆಳೆದು ಬಲ ಹೊಟ್ಟೆಯಲ್ಲಿ ಗಡ್ಡೆಯಂತೆ ಭಾಸವಾಗಬಹುದು. ಇದು ತುಂಬಾ ಸ್ಪಷ್ಟವಾದ ಎಚ್ಚರಿಕೆಯ ಸಂಕೇತವಾಗಿದೆ.

## ಉಗುರುಗಳ ರಕ್ಷಣೆ ಹೇಗೆ?

### ಬ್ಯೂಟಿ ಟಿಪ್ಸ್



ಉದ್ದನೆಯ ಬೆರಳುಗಳಿಗೆ ಸುಂದರವಾದ ಉಗುರುಗಳು ಅಷ್ಟೇ ಶೋಭೆಯನ್ನು ತರುತ್ತವೆ. ಉಗುರು ಬೆಳೆಸಬೇಕೆಂದು ಎಲ್ಲರಿಗೂ ಆಸೆಯಿರುತ್ತದೆ. ಆದರೆ, ಅವುಗಳನ್ನು ಕಾಪಾಡಿಕೊಳ್ಳುವುದು ಅಷ್ಟೇ ಕಷ್ಟಕರವಾಗಿರುತ್ತದೆ. ಸಾಮಾನ್ಯವಾಗಿ ಪೆಡಿಕ್ಯೂರ್ ಹಾಗೂ ಮ್ಯಾನಿಕ್ಯುರ್ ಮಾಡಿಕೊಳ್ಳುವುದರಿಂದ ಉಗುರಿನ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಅದನ್ನು ಹೊರತುಪಡಿಸಿ ಮನೆಯಲ್ಲಿ ಉಗುರುಗಳ ಅಂದ ಹೆಚ್ಚಿಸಲು ಕೆಲ ಸಲಹೆಗಳು ಇಲ್ಲಿವೆ. ಸಾಮಾನ್ಯವಾಗಿ ಮನೆ ಕೆಲಸ ಮಾಡುವ ಗೃಹಿಣಿಯರು ಉಗುರುಗಳನ್ನು ಅಂದವಾಗಿಟ್ಟುಕೊಳ್ಳಲು ಸಾಧ್ಯಾವಾಗುವುದಿಲ್ಲ. ಮನೆ ಕೆಲಸ ಮಾಡುವ ಸಂದರ್ಭದಲ್ಲಿ ಹ್ಯಾಂಡ್ ಗ್ಲೌಸ್ ಗಳನ್ನು ಬಳಕೆ ಮಾಡುವುದು ಉತ್ತಮವಾಗಿರುತ್ತದೆ. ಇದರಿಂದ ಉಗುರುಗಳು ಕೊಳೆಯಾಗುವುದನ್ನು ತಪ್ಪಿಸಬಹುದು. ಮನೆ ಕೆಲಸ ಮುಗಿದ ಬಳಿಕ ಗ್ಲೌಸ್ ಗಳನ್ನು ತೆಗೆದು ಕೈಗಳನ್ನು ಶುಭ್ರವಾಗಿ ತೊಳೆಯಿರಿ. ನಂತರ ಉಗುರುಗಳ ಕೊನೆಯ ಭಾಗವನ್ನು ಸ್ವಚ್ಛಗೊಳಿಸಿ. ಈ ಕೆಲಸವನ್ನು ಪ್ರತೀ ನಿತ್ಯ ಮಾಡಲು ಸಾಧ್ಯವಾಗದೇ ಹೋದರು, ಎರಡು ದಿನಕ್ಕೊಮ್ಮೆಯಾದರೂ ಮಾಡಿ. ಕೈತೊಳೆಯುವಾದ ಅತೀಯಾದ ತಣ್ಣನೆಯ ಅಥವಾ ಅತಿಯಾದ ಬಿಸಿ ನೀರನ್ನು ಬಳಕೆ ಮಾಡಬೇಡಿ. ಬೆಚ್ಚಗಿನ ನೀರಿನಿಂದ ತೊಳೆದು, ಹ್ಯಾಂಡ್ ಕ್ರೀಮ್ ಹಚ್ಚಿರಿ. ಉಗುರು ಬಣ್ಣ ಹಚ್ಚುವುದರಿಂದ ಉಗುರುಗಳು ಹಾಳಾಗುವುದಿಲ್ಲ. ಬದಲಾಗಿ ಉಗುರಿನ ಅಂದವನ್ನು ಮತ್ತಷ್ಟು ಹೆಚ್ಚುವಂತೆ ಮಾಡುತ್ತದೆ. ಆದರೆ, ಉಗುರು ಬಣ್ಣ ಖರೀದಿ ವೇಳೆ ಉತ್ತಮ ಬ್ರ್ಯಾಂಡ್ ಇರುವುದನ್ನು ಆಯ್ಕೆ ಮಾಡಿ. ಕಡಿಮೆ ಗುಣಮಟ್ಟದ ಉಗುರು ಬಣ್ಣಗಳು ಉಗುರುಗಳ ಆರೋಗ್ಯವನ್ನು ಹಾಳು ಮಾಡುತ್ತದೆ. ಉಗುರುಗಳು ತೆಳ್ಳಗಾಗುವಂತೆ ಮಾಡುತ್ತವೆ.

ಉಗುರು ಬಣ್ಣ ಹಚ್ಚುವ ವೇಳೆ ಮೊದಲು ಬೇಸ್ ಕೋಟ್ ಹಾಕಿರಿ. ಇದು ಉಗುರುಗಳು ಡ್ಯಾಮೇಜ್ ಆಗಿದ್ದರೆ, ಉಗುರುಗಳು ಹಳದಿ ಬಣ್ಣಕ್ಕೆ ತಿರುಗಿದ್ದರೆ ಕಡಿಮೆಯಾಗುತ್ತದೆ.

ಉಗುರು ಬಣ್ಣ ತೆಗೆಯುವುದಕ್ಕೆ ರಿಮೂವರ್ ಬಳಕೆ ಮಾಡುವುದು ಉತ್ತಮ. ನೇಲ್ ಪಾಲಿಷ್ ರಿಮೂವರ್ ತೆಗೆದುಕೊಳ್ಳುವಾಗ ರಿಮೂವರ್ ಸಂಪೂರ್ಣ ಅಸಿಟೋನ್ ನಿಂದ ಕೂಡಿರಬಾರದು. ಅಸಿಟೋನ್ ಜೊತೆಗೆ ವಿಟಮಿನ್ ಎ,ಸಿ ಮತ್ತು ಇ ಅಂಶವಿರುವ ರಿಮೂವರ್ ಗಳನ್ನು ಖರೀದಿ ಮಾಡಿ. ಉಗುರುಗಳು ಹಳದಿಬಣ್ಣದಿಂದ ಇರಬಾರದು ಎಂದರೆ, ಬೇಕಿಂಗ್ ಸೋಡಾವನ್ನು ನೀರಿನಲ್ಲಿ ಹಾಕಿ ಕೈಗಳ ಬೆರಳುಗಳನ್ನು 10 ನಿಮಿಷ ಇಡಿ. ಪ್ರತೀನಿತ್ಯ ಹೀಗೆ ಮಾಡುವುದರಿಂದ ಉಗುರುಗಳು ಹಳದಿ ಬಣ್ಣದಿಂದ ಮುಕ್ತಿ ಪಡೆಯುತ್ತವೆ.

ಪ್ರೋಟೀನ್ ಹಾಗೂ ಕ್ಯಾಲ್ಸಿಯಂ ಕೊರೆಯಿಂದ ಉಗುರುಗಳು ಕಟ್ ಆಗುವುದು ಹಾಗೂ ಮೇಲ್ಪದರ ಏಳುತ್ತವೆ. ಇದನ್ನು ತಡೆಯಲು ಪ್ರತೀನಿತ್ಯ ಹಾಲು, ಮೊಸರು, ಮೀನು ಹಾಗೂ ಮೊಳಕೆ ಕಾಳುಗಳನ್ನು ಹೆಚ್ಚಾಗಿ ಸೇವಿಸಿ. ದುರ್ಬಲ ಉಗುರಗಳಿಂದ ಮುಕ್ತಿ ಪಡೆಯಲು ಜೆಲಾಟಿನ್'ನ್ನು ಒಂದು ಚಮಚ ತೆಗೆದುಕೊಂಡು ಅದನ್ನು ಬಿಸಿ ನೀರಿಗೆ ಹಾಕಿ ಕರಗಿಸಿ. ನಂತರ ನೀರು ತಣ್ಣಗಾದ ಬಳಿಕ ಯಾವುದೇ ಹಣ್ಣಿನ ರಸದ ಜೊತೆಗೆ ಸೇರಿಸಿ ಅದನ್ನು ಕುಡಿಯಿರಿ. ಇದರಿಂದ ದುರ್ಬಲ ಉಗುರುಗಳ ಆರೋಗ್ಯ ಸುಧಾರಿಸುತ್ತದೆ.

## ನಿಜವಾಗಿಯೂ ಗರ್ಭಿಣಿಯಾಗಿದ್ದ ನಟಿ ಶ್ವೇತಾ ಮೆನನ್



ಬಾಲಿವುಡ್‌ನ ನಟಿ ಶ್ವೇತಾ ಮೆನನ್ ಅವರು ಸಲ್ಮಾನ್ ಖಾನ್ ಮತ್ತು ಅಮೀರ್ ಖಾನ್ ಅವರಂತಹ ದೊಡ್ಡ ನಟರೊಂದಿಗೆ ತೆರೆ ಹಂಚಿಕೊಂಡಿದ್ದಾರೆ. ಜನಪ್ರಿಯ ರೂಪದರ್ಶಿಯಾಗಿರುವ ಇವರು 1997 ರಲ್ಲಿ 'ಪೃಥ್ವಿ' ಚಿತ್ರದ ಮೂಲಕ ಬಾಲಿವುಡ್‌ಗೆ ಪಾದಾರ್ಪಣೆ ಮಾಡಿದರು. ಇಷ್ಕ್, ಬಂಧನ್, ಶಿಕಾರಿ, ಅಶೋಕ, ಹಾನ್ ಮೈಂ ಭಿ ಪ್ಯಾರ್ ಕಿಯಾ, ಅಬ್ಕೆ ಬರಾಸ್, ಮಕ್ಬೂಲ್, ಹಂಗಾಮಾ, ಓಂಕಾರ, ರನ್ ಮತ್ತು ಶಿಖರ್ ಚಿತ್ರಗಳಲ್ಲಿ ಶ್ವೇತಾ ನಟಿಸಿದ್ದಾರೆ. ಅವರು ಬಾಲಿವುಡ್ ಸೇರಿದಂತೆ ಹಲವು ಮಲಯಾಳಂ ಭಾಷೆಯ ಚಿತ್ರಗಳಲ್ಲಿ ಕೆಲಸ ಮಾಡಿದ್ದಾರೆ.. ಈ ನಟಿ ಚಿತ್ರದ ದೃಶ್ಯವೊಂದಕ್ಕೆ ಶ್ವೇತಾ ಗರ್ಭಿಣಿಯಾಗಿ.. ಕ್ಯಾಮರಾ ಮುಂದೆ ಹೆಣ್ಣು ಮಗುವಿಗೆ ಜನ್ಮ ನೀಡಿ, ಆ ಬಳಿಕ ಆಕೆ ವಿವಾದಕ್ಕೆ ಸಿಲುಕಿದ್ದಳಂತೆ..

2013ರಲ್ಲಿ ತೆರೆಕಂಡ ಭ್ರ್ಣಿ ಮಹಿಳೆಯ ಜೀವನಾಧಾರಿತ 'ಕಾಳಿಮಣ್ಣು' ಚಿತ್ರದ ದೃಶ್ಯವೊಂದಕ್ಕೆ ಶ್ವೇತಾ ಮೆನನ್ ಗರ್ಭಿಣಿಯಾಗಿದ್ದರಂತೆ.. ಆಗ ಮುಂಬೈನ ನಾನಾವತಿ ಆಸ್ಪತ್ರೆಯಲ್ಲಿ ಶ್ವೇತಾ ಹೆಣ್ಣು ಮಗುವಿಗೆ ಜನ್ಮ ನೀಡಿದ್ದಾರೆ. ಹೆರಿಗೆಗೂ ಮುನ್ನ ಆಪರೇಷನ್ ಥಿಯೇಟರ್ ನಲ್ಲಿ ಮೂರು ಕ್ಯಾಮೆರಾಗಳನ್ನು ಅಳವಡಿಸಿ, ಶ್ವೇತಾ ಅವರ ಹೆರಿಗೆಯ 45 ನಿಮಿಷಗಳ ದೃಶ್ಯವನ್ನು ನಿರ್ದೇಶಕರು ಚಿತ್ರೀಕರಿಸಿದ್ದಾರೆ. ಬಳಿಕ 'ಕಾಳಿಮಣ್ಣು' ಸಿನಿಮಾ ದೊಡ್ಡ ಹಿಟ್ ಆಯಿತು. ಆದರೆ ಇನ್ನೊಂದೆಡೆ ಈ ಚಿತ್ರಕ್ಕೆ ವ್ಯಾಪಕ ವಿರೋಧ ವ್ಯಕ್ತವಾಗಿತ್ತು. ಚಿತ್ರದ ದೃಶ್ಯವೊಂದಕ್ಕೆ ಡೆಲಿವರಿ ದೃಶ್ಯವನ್ನು ತೋರಿಸುವುದು ಅನೈತಿಕ ಎಂದು ಹೇಳಲಾಗಿತ್ತು. ಶ್ವೇತಾ ಮೆನನ್ 23 ಏಪ್ರಿಲ್ 1974 ರಂದು ಚಂಡೀಗಢದಲ್ಲಿ ಜನಿಸಿದರು. ಇವರು ತನ್ನ ವೃತ್ತಿಜೀವನವನ್ನು ಮಲಯಾಳಂ ಚಿತ್ರಗಳ ಮೂಲಕ ಪ್ರಾರಂಭಿಸಿದರು. ಸುನಿಲ್ ಶೆಟ್ಟಿ ಅವರ ಪೃಥ್ವಿ ಚಿತ್ರದ ಮೂಲಕ ಅವರು ಬಾಲಿವುಡ್‌ಗೆ ಪಾದಾರ್ಪಣೆ ಮಾಡಿದರು. ಇದುವರೆಗೆ 30ಕ್ಕೂ ಹೆಚ್ಚು ಹಿಂದಿ ಚಿತ್ರಗಳಲ್ಲಿ ನಟಿಸಿರುವ ಶ್ವೇತಾ ಅವರ ಮೊದಲ ಮದುವೆ ಬಾಬಿ ಬೋಂಸ್ಲೆ ಅವರೊಂದಿಗೆ ಆಗಿತ್ತು.. ಆದರೆ 2007 ರಲ್ಲಿ ಅವರ ಸಂಬಂಧ ಮುರಿದುಬಿತ್ತು.



## ಅಸ್ಮಿತಾ ಮತ್ತು ಶ್ರುತಿ ರಾಜಕುಮಾರ್ ಸಹೋದರಿಯರ ರಂಗಪ್ರವೇಶ





ಖ್ಯಾತ 'ಶಿವಾಲಯ ನಾಟ್ಯಮಂದಿರ' ದ ಕಲಾತ್ಮಕ ನಿರ್ದೇಶಕಿ ಮತ್ತು ನೃತ್ಯಗುರು ವಿದುಷಿ. ಮಂಜುಳಾ ಜಗದೀಶ್ ಅವರ ನುರಿತ ಗರಡಿಯಲ್ಲಿ ರೂಪುಗೊಂಡ ಕಲಾಪ್ರತಿಮೆಗಳು ಕು. ಅಸ್ಮಿತಾ ರಾಜಕುಮಾರ್ ಮತ್ತು ಶ್ರುತಿ ರಾಜಕುಮಾರ್. ಈಸಕ್ಕಿ ರಾಜಕುಮಾರ್ ಮತ್ತು ಅನಿತಾ ದಂಪತಿಗಳ ಪುತ್ರಿಯರಾದ ಈ ಪ್ರತಿಭಾವಂತ ಸಹೋದರಿಯರು ತಮ್ಮ ಬಾಲ್ಯದ ಆರರ ಎಳವೆಯಲ್ಲೇ ಉತ್ಕೃಷ್ಟ ಶಿಕ್ಷಣಕ್ಕೆ ಹೆಸರಾದ ಗುರು ಮಂಜುಳಾ ಜಗದೀಶರಿಂದ ನೃತ್ಯ ಕಲಿಯಲಾರಂಭಿಸಿ ನಾಡಿನ ಅನೇಕ ವೇದಿಕೆಗಳಲ್ಲಿ ಯಶಸ್ವೀ ನೃತ್ಯ ಪ್ರದರ್ಶನಗಳನ್ನು ನೀಡಿರುವ ಬಹುಮುಖ ಪ್ರತಿಭೆಗಳು. ಕರ್ನಾಟಕ ಸರ್ಕಾರದ ನೃತ್ಯಪರೀಕ್ಷೆ ಜ್ಯೂನಿಯರ್ ಮತ್ತು ಸೀನಿಯರ್ ಗಳಲ್ಲಿ ಉತ್ತೀರ್ಣರಾಗಿರುವರಲ್ಲದೆ, ಕರಾಟೆಯಲ್ಲಿ ಬ್ಲಾಕ್ ಬೆಲ್ಟ್ ಪಡೆದಿದ್ದು ಅನೇಕ ಕ್ರೀಡಾಸ್ಪರ್ಧೆಗಳಲ್ಲಿ ಭಾಗವಹಿಸಿದ್ದಾರೆ. ಫ್ರೀ ಸ್ಟೈಲ್ ಡ್ಯಾನ್ಸ್ ಅಲ್ಲದೆ ಸ್ಕೇಟಿಂಗ್ ನಲ್ಲೂ ತರಬೇತಿ ಪಡೆಯುತ್ತಿರುವ ಇವರು ಕ್ರಮವಾಗಿ ಹನ್ನೆರಡನೆಯ ಮತ್ತು ಎಂಟನೇ ತರಗತಿಯ ವಿದ್ಯಾರ್ಥಿನಿಯರು. ಅನೇಕ ವರ್ಷಗಳಿಂದ ಭರತನಾಟ್ಯ ಅಭ್ಯಾಸ ಮಾಡುತ್ತಿರುವ ಈ ಸಹೋದರಿಯರು, ಜುಲೈ ತಿಂಗಳ 6 ಭಾನುವಾರದಂದು ಬೆಳಗ್ಗೆ 9.30 ಕ್ಕೆ ನಗರದ ಎ.ಡಿ.ಎ. ರಂಗಮಂದಿರದಲ್ಲಿ ವಿದ್ಯುಕ್ತವಾಗಿ ರಂಗಪ್ರವೇಶ ಮಾಡಲಿದ್ದಾರೆ. ಕಲಾವಿದೆದ್ವಯರ ಚೇತೋಹಾರಿ ನೃತ್ಯರಮ್ಯತೆಯನ್ನು ಕಣ್ತುಂಬಿಕೊಳ್ಳಲು ಸರ್ವರಿಗೂ ಆದರದ ಸ್ವಾಗತ.

ಉತ್ತಮ ಕಲಾಸಕ್ತಿಯುಳ್ಳ ರಾಜಕುಮಾರ್ ಮತ್ತು ಅನಿತಾ ದಂಪತಿಗಳ ಹೆಣ್ಣು ಮಕ್ಕಳಿಬ್ಬರಿಗೂ ಬಾಲ್ಯದಿಂದಲೇ ನೃತ್ಯದ ಬಗ್ಗೆ ಅಮಿತ ಒಲವು. ಹಿರಿಯವಳು ಅಸ್ಮಿತಾ ಕಿರಿಯವಳು ಶ್ರುತಿ. ಅಸ್ಮಿತಾ ಓಕ್ರಿಜ್ ಇಂಟರ್ನ್ಯಾಷನಲ್ ಸ್ಕೂಲ್ನಲ್ಲಿ ಹನ್ನೆರಡನೆಯ ತರಗತಿಯ ವಿದ್ಯಾರ್ಥಿನಿಯಾದರೆ, ಶ್ರುತಿ 8 ನೆಯ ತರಗತಿಯಲ್ಲಿ ಓದುತ್ತಿದ್ದಾಳೆ . ಇಬ್ಬರೂ ಓದಿನಲ್ಲಿ ಜಾಣೆಯರು, ನೃತ್ಯದಲ್ಲಿ ಆಸಕ್ತಿ -ಪರಿಶ್ರಮಗಳಿಂದ ಅನೇಕ ದೇವಾಲಯಗಳಲ್ಲಿ ನೃತ್ಯ ಪ್ರದರ್ಶನಗಳನ್ನು ನೀಡಿ ಮೆಚ್ಚುಗೆ ಗಳಿಸಿದ್ದಾರೆ. ಅಸ್ಮಿತಾ ಸೀನಿಯರ್ ಮತ್ತು ಶ್ರುತಿ ಜ್ಯೂನಿಯರ್ ನೃತ್ಯ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದು, ಶಾಲೆಯ ಅನೇಕ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಂಡು ಬಹುಮಾನಗಳನ್ನು ಪಡೆದಿದ್ದಾರೆ. ಓದಿನ ಜೊತೆ ಕ್ರೀಡಾಸಕ್ತಿ ಇರುವ ಈ ಸೋದರಿಯರು ಶಾಲೆಯ ಒಲಂಪಿಯಾಡ್ಸ್ ಕ್ರೀಡೆಗಳಲ್ಲಿ ನಿರಂತರ ಭಾಗವಹಿಸುತ್ತ ಬಂದಿರುವ ಉತ್ಸಾಹಿಗಳು ಎಂಬುದು ಇವರ ವಿಶೇಷ.

ಕು. ಅಸ್ಮಿತಾ, ಶಾಸ್ತ್ರೀಯ ನೃತ್ಯೋತ್ಸವಗಳು, ಕಲೆಮನೆ ಉತ್ಸವ, ಸಮರ್ಪಣಂ, ಶಿವರಾತ್ರಿ ಉತ್ಸವ, ನಾಟ್ಯಾಂಜಲಿ ಮತ್ತು ಅಂತರರಾಷ್ಟ್ರೀಯ ಕ್ಲಾಸಿಕಲ್ ಡ್ಯಾನ್ಸ್ ಫೆಸ್ಟಿವಲ್ ಗಳಲ್ಲಿ ಭಾಗವಹಿಸಿದ್ದು, ಇವಳಿಗೆ ಸಮಾಜ ಸೇವೆಯಲ್ಲಿ ಅಪರಿಮಿತ ಆಸಕ್ತಿ. ಅಷ್ಟೇ ಉತ್ಸಾಹಿಯಾದ ಶ್ರುತಿ ಬದ್ಧತೆಯಿಂದ ನೃತ್ಯ ಕಲಿಯುತ್ತಿರುವುದಲ್ಲದೆ ಶಾಲೆಯಲ್ಲಿ ಎಒಗಟ ಮತ್ತು ಅಠಜಜಜಿಜಣ ಗಳಲ್ಲಿ ಪಾಲ್ಗೊಂಡ ಕ್ರಿಯಾಶಾಲಿ ಕೂಡ. ಪ್ರಯೋಗಶೀಲ ನೃತ್ಯ ಸಂಯೋಜಕಿಯಾದ ಗುರು ಮಂಜುಳಾ ಜಗದೀಶ್ ಅವರ ಉತ್ತಮ ಮಾರ್ಗದರ್ಶನ ಪಡೆದ ಈ ನೃತ್ಯಾರ್ಥಿಗಳು, ನೃತ್ಯಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡುವ ಕನಸು ಹೊಂದಿದ್ದಾರೆ.

**। ವೈ.ಕೆ.ಸಂಧ್ಯಾ ಶರ್ಮ**



**ಜಯಶ್ರೀ.ಬಿ.ಆರ್**
ಖ್ಯಾತ ಜ್ಯೋತಿಷಿ
ದೂರವಾಣಿ–9964739507
www.jyotishyavaastu.com

## ರಾಶಿ ಭವಿಷ್ಯ

**ಮೇಷ:** ಷೇರು ವ್ಯವಹಾರಗಳಲ್ಲಿ ನಷ್ಟ, ಪಿತ್ರಾರ್ಜಿತ ಅಸ್ತಿ ಪ್ರಾಪ್ತಿ, ಸುಖ ಭೋಜನ, ನೀವಾಡುವ ಮಾತಿನಿಂದ ಅನರ್ಥ.

**ವೃಷಭ:** ದೇವತಾ ಕಾರ್ಯಗಳಲ್ಲಿ ಒಲವು, ಸೈಟ್ ಖರೀದಿಸುವ ಸಾಧ್ಯತೆ, ವಾಹನ ಖರೀದಿ, ಸಾಕು ಪ್ರಾಣಿಗಳಿಂದ ತೊಂದರೆ.

**ಮಿಥುನ:** ಸ್ತ್ರೀಯರಿಗೆ ನೆಮ್ಮದಿ, ಕುತಂತ್ರದಿಂದ ಹಣ ಸಂಪಾದನೆ, ಚೋರ ಭಯ, ಅಧಿಕ ಕೋಪ, ತಿರುಗಾಟ, ಆರೋಗ್ಯದಲ್ಲಿ ಏರುಪೇರು.

**ಕಟಕ:** ಕೃಷಿಕರಿಗೆ ಲಾಭ, ಅಲ್ಪ ಕಾರ್ಯಸಿದ್ಧಿ, ಪ್ರೀತಿ ಸಮಾಗಮ, ಅಮೂಲ್ಯ ವಸ್ತು ಕಳೆದುಕೊಳ್ಳುವಿರಿ, ನೌಕರಿಯಲ್ಲಿ ತೊಂದರೆ.

**ಸಿಂಹ:** ಪರರಿಂದ ತೊಂದರೆ, ಅತಿಯಾದ ಆಯಾಸ, ಮೆಡಿಕಲ್ ಕ್ಷೇತ್ರದವರಿಗೆ ಅನುಕೂಲ, ಬಾಕಿ ಹಣ ಕೈ ಸೇರುವುದು.

**ಕನ್ಯಾ:** ಅನಗತ್ಯ ಖರ್ಚು, ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ, ಮಾನಸಿಕ ನೆಮ್ಮದಿ, ಸ್ತ್ರೀ ಸೌಖ್ಯ, ಅಪರಿಚಿತರಿಂದ ಕಲಹ.

**ತುಲಾ:** ಎಷ್ಟೇ ಹಣ ಬಂದರೂ ಉಳಿಯುವುದಿಲ್ಲ, ಆತ್ಮೀಯರ ಭೇಟಿ, ಮಹಿಳೆಯರಿಗೆ ವಿಶೇಷ ಲಾಭ, ದಾನ ಧರ್ಮದಲ್ಲಿ ಆಸಕ್ತಿ.

**ವೃಶ್ಚಿಕ:** ಪತ್ರ ವ್ಯವಹಾರಗಳಲ್ಲಿ ಲಾಭ, ಪರಸ್ಥಳವಾಸ, ಮಾತಿನ ಚಕಮಕಿ, ಸೇವಕರಿಂದ ತೊಂದರೆ, ಹಣಕಾಸು ಅಡಚಣೆ, ಅಪವಾದ.

**ಧನಸ್ಸು:** ವೈವಾಹಿಕ ಜೀವನದಲ್ಲಿ ನೆಮ್ಮದಿ, ಹಿರಿಯರಿಂದ ಬೋಧನೆ, ಉದ್ಯೋಗದಲ್ಲಿ ಕಿರಿಕಿರಿ, ಹಿತ ಶತ್ರುಗಳಿಂದ ತೊಂದರೆ.

**ಮಕರ:** ಅನ್ಯ ಜನರಲ್ಲಿ ವೈಮನಸ್ಸು, ಟ್ರಾವೆಲ್ಸ್‌ನವರಿಗೆ ಲಾಭ, ಆತ್ಮೀಯರಲ್ಲಿ ವಿರೋಧ, ಸ್ಥಗಿತ ಕಾರ್ಯಗಳಲ್ಲಿ ಮುನ್ನಡೆ.

**ಕುಂಭ:** ದೂರ ಪ್ರಯಾಣ, ಸ್ನೇಹಿತರಿಂದ ಸಹಾಯ, ಪ್ರಿಯ ಜನರ ಭೇಟಿ, ಸ್ತ್ರೀಯರಿಗೆ ವಸ್ತ್ರಾಭರಣ ಪ್ರಾಪ್ತಿ, ಹೆತ್ತವರಲ್ಲಿ ಪ್ರೀತಿ ವಾತ್ಸಲ್ಯ, ಆಕಸ್ಮಿಕ ಧನ ಲಾಭ.

**ಮೀನ:** ಪುಣ್ಯಕ್ಷೇತ್ರ ದರ್ಶನ, ದಯಾದಿ ಕಲಹ, ಮಿತ್ರರಿಂದ ನಂಬಿಕೆ ದ್ರೋಹ, ಮನಸ್ಸಿಗೆ ನಾನಾ ರೀತಿಯ ಚಿಂತೆ, ರಾಜ ವಿರೋಧ.

## ವಿಶ್ವ ಕ್ರೀಡಾ ಪತ್ರಕರ್ತರ ದಿನ

ವಿಶ್ವ ಕ್ರೀಡಾ ಪತ್ರಕರ್ತರ ದಿನವನ್ನು ಪ್ರತಿ ವರ್ಷ ಜುಲೈ 2 ರಂದು ಆಚರಿಸಲಾಗುತ್ತದೆ. ಅಂತರರಾಷ್ಟ್ರೀಯ ಕ್ರೀಡಾ ಪತ್ರಕರ್ತರ ದಿನ ಎಂದೂ ಕರೆಯಲ್ಪಡುವ ಈ ರಜಾದಿನವನ್ನು 1994 ರಲ್ಲಿ ಅಂತರರಾಷ್ಟ್ರೀಯ ಕ್ರೀಡಾ ಪತ್ರಿಕೋದ್ಯಮ ಸಂಘವು ತನ್ನ 70 ನೇ ವಾರ್ಷಿಕೋತ್ಸವವನ್ನು ಆಚರಿಸಲು ರಚಿಸಿತು. ಕ್ರೀಡಾ ಪತ್ರಿಕೋದ್ಯಮವು 1800 ರ ದಶಕದಲ್ಲಿ ಅಭಿವೃದ್ಧಿ ಹೊಂದಿತು ಆದರೆ ಗಣ್ಯ ಕ್ರೀಡೆಗಳ ಮೇಲೆ ಕೇಂದ್ರೀಕೃತವಾಗಿತ್ತು ಮತ್ತು ಕ್ರೀಡಾ ಘಟನೆಗಳ ಸಾಮಾಜಿಕ ಸಂದರ್ಭವನ್ನು ವರದಿ ಮಾಡುವುದರ ಮೇಲೆ ಹೆಚ್ಚು ಗಮನಹರಿಸಿತು. 1920 ರ ದಶಕದಲ್ಲಿ, ಪತ್ರಿಕೆಗಳು ಕ್ರೀಡಾ ಪತ್ರಿಕೋದ್ಯಮಕ್ಕೆ ಹೆಚ್ಚಿನ ಸಮಯ ಮತ್ತು ಸ್ಥಳವನ್ನು ಮೀಸಲಿಟ್ಟಂತೆ ಈ ವೃತ್ತಿಯು ರೂಪುಗೊಳ್ಳಲು ಪ್ರಾರಂಭಿಸಿತು.

1994 ರಲ್ಲಿ, ಅಂತರರಾಷ್ಟ್ರೀಯ ಕ್ರೀಡಾ ಪತ್ರಿಕೋದ್ಯಮ ಸಂಘ (A.I.P.S.) ತನ್ನ 70 ನೇ ವಾರ್ಷಿಕೋತ್ಸವದ ಗೌರವಾರ್ಥವಾಗಿ ಮೊದಲ ಬಾರಿಗೆ ವಿಶ್ವ ಕ್ರೀಡಾ ಪತ್ರಕರ್ತರ ದಿನವನ್ನು ಆಚರಿಸಿತು. 1924 ರಲ್ಲಿ, A.I.P.S. ಅನ್ನು ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿ L'Association Internationale de la Presse Sportiveಎಂದು ಸ್ಥಾಪಿಸಲಾಯಿತು. ಆದಾಗ್ಯೂ, ಸಂಘವು ಈಗ ಸ್ವಿಟ್ಜರ್‌ಲ್ಯಾಂಡ್‌ನ ಒಲಿಂಪಿಕ್ ರಾಜಧಾನಿ ಲೌಸೇನ್‌ನಲ್ಲಿ ಪ್ರಧಾನ ಕಚೇರಿಯನ್ನು ಹೊಂದಿದೆ. A.I.P.S. 160 ಸದಸ್ಯ ಸಂಘಗಳನ್ನು ಹೊಂದಿರುವ ಸ್ವತಂತ್ರ ಸಂಸ್ಥೆಯಾಗಿದ್ದು, ಸದಸ್ಯತ್ವ ಶುಲ್ಕ ಮತ್ತು ಇತರ ಅಂತರರಾಷ್ಟ್ರೀಯ ಸಂಸ್ಥೆಗಳು ಮತ್ತು ಒಕ್ಕೂಟಗಳ ಕೊಡುಗೆಗಳ ಮೂಲಕ ಹಣವನ್ನು ಪಡೆಯುತ್ತದೆ.

ಅದರ ವೆಬ್‌ಸೈಟ್ ಪ್ರಕಾರ, A.I.P.S.ನ ಗುರಿ ಕ್ರೀಡೆ ಮತ್ತು ಸದಸ್ಯರ ವೃತ್ತಿಪರ ಹಿತಾಸಕ್ತಿಯನ್ನು ರಕ್ಷಿಸುವಲ್ಲಿ ಅದರ ಸದಸ್ಯ ಸಂಘಗಳ ನಡುವಿನ ಸಹಕಾರವನ್ನು ಹೆಚ್ಚಿಸುವುದು, ಎಲ್ಲಾ ರಾಷ್ಟ್ರಗಳ ಕ್ರೀಡಾ ಪತ್ರಕರ್ತರ ನಡುವಿನ ಸ್ನೇಹ, ಒಗ್ಗಟ್ಟು ಮತ್ತು ಸಾಮಾನ್ಯ ಹಿತಾಸಕ್ತಿಗಳನ್ನು ಬಲಪಡಿಸುವುದು ಮತ್ತು ಸದಸ್ಯರಿಗೆ ಸಾಧ್ಯವಾದಷ್ಟು ಉತ್ತಮ ಕೆಲಸದ ಪರಿಸ್ಥಿತಿಗಳನ್ನು ಖಚಿತಪಡಿಸಿಕೊಳ್ಳುವುದು. ಕ್ರೀಡಾ ಪತ್ರಿಕೋದ್ಯಮವು ಕ್ರೀಡಾ-ಕೇಂದ್ರಿತ ವಿಷಯಗಳ ಮೇಲೆ ಕೇಂದ್ರೀಕರಿಸುವ ಒಂದು ರೀತಿಯ ಬರವಣಿಗೆಯಾಗಿದೆ. ಕ್ರೀಡಾ ಪತ್ರಿಕೋದ್ಯಮವು 1800 ರ ದಶಕದಲ್ಲಿ, ನಿರ್ದಿಷ್ಟವಾಗಿ 1820 ಮತ್ತು 1830 ರ ದಶಕದಲ್ಲಿ ಅಭಿವೃದ್ಧಿಗೊಂಡಿತು. 20 ನೇ ಶತಮಾನವು ಕ್ರೀಡಾ ಪತ್ರಿಕೋದ್ಯಮದ ಜನಪ್ರಿಯತೆಯಲ್ಲಿ ಭಾರಿ ಉತ್ಕರ್ಷವನ್ನು ಕಂಡಿತು. 1880 ರಲ್ಲಿ, ವೃತ್ತಪತ್ರಿಕೆಗಳಲ್ಲಿ ಕ್ರೀಡೆಗಳಿಗೆ ಕೇವಲ 0.4% ಜಾಗವನ್ನು ಮಾತ್ರ ಮೀಸಲಿಡಲಾಗಿತ್ತು. 1920 ರ ದಶಕದ ವೇಳೆಗೆ ಈ ಅಂಕಿ ಅಂಶವು 20% ಕ್ಕೆ ಏರಿತು, ಏಕೆಂದರೆ ವೃತ್ತಪತ್ರಿಕೆಗಳು ಕ್ರೀಡಾ ವರದಿಗಾಗಿ ಪ್ರತ್ಯೇಕವಾಗಿ ವರದಿಗಾರರನ್ನು ನೇಮಿಸಿಕೊಳ್ಳಲು ಪ್ರಾರಂಭಿಸಿದವು. ಇಂದು, ಕ್ರೀಡಾ ಪತ್ರಿಕೋದ್ಯಮವು ಮುದ್ರಣ ಮಾಧ್ಯಮವನ್ನು ಮಾತ್ರವಲ್ಲದೆ ರೇಡಿಯೋ, ದೂರದರ್ಶನ ಮತ್ತು ಇಂಟರ್ನೆಟ್ ಅನ್ನು ಸಹ ಬಳಸುತ್ತದೆ.

# 8ನೇ ವೇತನ ಆಯೋಗ 2026 ರಿಂದ ಜಾರಿಗೆ



**ನವದೆಹಲಿ:** ಕೇಂದ್ರ ಸರ್ಕಾರಿ ನೌಕರರು ಮತ್ತು ಪಿಂಚಣಿದಾರರಿಗೆ ಸಂತಸದ ಸುದ್ದಿಯೊಂದಿಗೆ, 8ನೇ ವೇತನ ಆಯೋಗವು ಜನವರಿ 1, 2026 ರಿಂದ ಜಾರಿಗೆ ಬರಲಿದೆ ಎಂದು ಘೋಷಿಸಲಾಗಿದೆ.

ಆದರೆ, ಇತ್ತೀಚಿನ ವರದಿಗಳ ಪ್ರಕಾರ, ಈ ಆಯೋಗದ ಅನುಷ್ಠಾನವು ಕೆಲವು ಕಾರಣಗಳಿಂದ ವಿಳಂಬವಾಗುವ ಸಾಧ್ಯತೆಯಿದೆ.ಜನವರಿ 16, 2025 ರಂದು ಸರ್ಕಾರವು 8ನೇ ವೇತನ ಆಯೋಗದ ರಚನೆಯನ್ನು ಘೋಷಿಸಿತಾದರೂ, ಇದರ ಅಧ್ಯಕ್ಷರು, ಸದಸ್ಯರು ಮತ್ತು ವಿವರವಾದ ಕಾರ್ಯವ್ಯಾಪ್ತಿಯ ಆದೇಶವನ್ನು ಇನ್ನೂ ಅಂತಿಮಗೊಳಿಸಲಾಗಿಲ್ಲ.ಪಿಂಚಣಿ ವಿನಿಮಯದ ಅವಧಿಯನ್ನು 12 ವರ್ಷಗಳಿಗೆ ಇಳಿಕೆ ಮಾಡುವ ಬೇಡಿಕೆ ನೌಕರರು ಮತ್ತು ಪಿಂಚಣಿದಾರರಿಗೆ 8ನೇ ವೇತನ ಆಯೋಗದಿಂದ ಪ್ರಮುಖ ಬೇಡಿಕೆಯೊಂದು ಎದ್ದಿದೆ.

ಪಿಂಚಣಿಯ ವಿನಿಮಯ ಅವಧಿಯನ್ನು ಪ್ರಸ್ತುತ 15 ವರ್ಷಗಳಿಂದ 12 ವರ್ಷಗಳಿಗೆ ಇಳಿಕೆ ಮಾಡಬೇಕೆಂದು ಅವರು ಒತ್ತಾಯಿಸುತ್ತಿದ್ದಾರೆ. ಈ ಬೇಡಿಕೆಯು ಏರಿಳಿಯುತ್ತಿರುವ ವೈದ್ಯಕೀಯ ವೆಚ್ಚ ಮತ್ತು ಜೀವನ ವೆಚ್ಚದ ಒತ್ತಡವನ್ನು ಗಮನದಲ್ಲಿಟ್ಟುಕೊಂಡು ಮಾಡಲಾಗಿದೆ.

# ಸಿರಿಯಾ ಮೇಲಿನ ಆರ್ಥಿಕ ನಿರ್ಬಂಧ ತೆರವುಗೊಳಿಸಿದ ಅಮೆರಿಕ

**ವಾಷಿಂಗ್ಟನ್(ಯುಎಸ್‌ಎ):** ಸಿರಿಯಾದಲ್ಲಿ ಹೊಸ ಮಧ್ಯಂತರ ಸರ್ಕಾರದ ನಾಯಕನಿಗೆ ನೀಡಿದ ಭರವಸೆಯಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸಿರಿಯಾ ಮೇಲಿನ ಆರ್ಥಿಕ ನಿರ್ಬಂಧಗಳನ್ನು ಕೊನೆಗೊಳಿಸುವ ಕಾರ್ಯಕಾರಿ ಆದೇಶಕ್ಕೆ ಸಹಿ ಹಾಕಿದ್ದಾರೆ. ಸಿರಿಯಾದ ಸ್ಥಿರತೆ ಮತ್ತು ಶಾಂತಿಯನ್ನು ಬೆಂಬಲಿಸಲು ಮತ್ತು ಉತ್ತೇಜಿಸಲು ಈ ಕ್ರಮವನ್ನು ಕೈಗೊಳ್ಳಲಾಗಿದೆ ಎಂದು ಶ್ವೇತಭವನದ ಮಾಧ್ಯಮ ಕಾರ್ಯದರ್ಶಿ ಕ್ಯಾರೋಲಿನ್ ಲೀವಿಟ್ ತಿಳಿಸಿದರು. ಅಂತಾರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯಿಂದ ದೇಶವನ್ನು ಪ್ರತ್ಯೇಕವಾಗಿಸುವುದನ್ನು ನಿಲ್ಲಿಸಲು, ಜಾಗತಿಕ ವಾಣಿಜ್ಯ ವೇದಿಕೆಯನ್ನು ರೂಪಿಸಲು, ಆ ಪ್ರದೇಶದಲ್ಲಿ ನೆರೆಹೊರೆಯವರು ಮತ್ತು ಅಮೆರಿಕದಿಂದ ಹೂಡಿಕೆ ಹೆಚ್ಚಿಸುವ ಗುರಿಯನ್ನು ಈ ನಿರ್ಧಾರ ಹೊಂದಿದೆ ಎಂದು ಹಣಕಾಸು ಗುಪ್ತಚರ ವಿಭಾಗದ ಅಧೀನ ಕಾರ್ಯದರ್ಶಿ ಬ್ರಾಡ್ ಸ್ಮಿತ್ ಹೇಳಿದ್ದಾರೆ.

ಸಿರಿಯಾದ ಪದಚ್ಯುತ ಅಧ್ಯಕ್ಷ ಬಷರ್ ಅಸ್ಸಾದ್, ಅವರ ಉನ್ನತ ಸಹಾಯಕರು, ಕುಟುಂಬ ಸದಸ್ಯರು ಮಾನವ ಹಕ್ಕುಗಳ ಉಲ್ಲಂಘನೆ, ಮಾದಕವಸ್ತು ಕಳ್ಳಸಾಗಣೆಯಲ್ಲಿ ಭಾಗಿಯಾಗಿದ್ದಾರೆ. ಅಲ್ಲದೇ ಇವರ ಮೇಲೆ ರಾಸಾಯನಿಕ ಶಸ್ತ್ರಾಸ್ತ್ರಗಳ ಕಾರ್ಯಕ್ರಮದ ಭಾಗವಾಗಿರುವ ಸಂಬಂಧ ವಿಧಿಸಲಾದ ನಿರ್ಬಂಧಗಳನ್ನು ರದ್ದುಗೊಳಿಸುವುದಿಲ್ಲ ಎಂದು ಅಮೆರಿಕ ಸ್ಪಷ್ಟಪಡಿಸಿದೆ.

ಟ್ರಂಪ್ ಸಹಿ ಹಾಕಿರುವ ಕಾರ್ಯಕಾರಿ ಆದೇಶವನ್ನು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಲಾಗಿದೆ. ಮೇ ತಿಂಗಳಲ್ಲಿ ಅಮೆರಿಕ ಸಿರಿಯಾಕ್ಕೆ ನಿರ್ಬಂಧಗಳಿಂದ ವ್ಯಾಪಕ ವಿನಾಯಿತಿಗಳನ್ನು ನೀಡಿದೆ. ಇದು ಸುಮಾರು 13 ವರ್ಷಗಳ ಅಂತರ್ಯುದ್ಧದಿಂದ ಸಿರಿಯಾವನ್ನು ಕೊನೆಗೊಳಿಸುವ ರಿಪಬ್ಲಿಕನ್ ನಾಯಕ ಟ್ರಂಪ್ ಅವರ ಪ್ರತಿಜ್ಞೆಯನ್ನು ಈಡೇರಿಸುವ ಮೊದಲ ಹೆಜ್ಜೆಯಾಗಿದೆ ಎಂದು ಶ್ವೇತಭವನ ಹೇಳಿದೆ.

# ರಿಲಯನ್ಸ್ ಜಿಯೋ ಜಾಗತಿಕವಾಗಿ ಪ್ರಬಲ ಸ್ಥಿರ ವೈರ್ ಲೆಸ್ ಆಕ್ಸೆಸ್ ಪ್ಲೇಯರ್ ಆಗುವ ಹಾದಿಯಲ್ಲಿದೆ: ವಿಶ್ಲೇಷಕರು

**ನವದೆಹಲಿ:** ಭಾರತೀಯ ಟೆಲಿಕಾಂ ದೈತ್ಯ ರಿಲಯನ್ಸ್ ಜಿಯೋ, ಚಂದಾದಾರರ ಸಂಖ್ಯೆಯಲ್ಲಿ ವಿಶ್ವದ ಅತಿದೊಡ್ಡ ಸ್ಥಿರ ವೈರ್ ಲೆಸ್ ಪ್ರವೇಶ ಪೂರೈಕೆದಾರನಾಗುವ ಹಾದಿಯಲ್ಲಿದೆ ಎಂದು ವಿಶ್ಲೇಷಕರ ವರದಿಯೊಂದು ತಿಳಿಸಿದೆ.

ಟೆಲಿಕಾಂ ನಿಯಂತ್ರಕ ಟ್ರಾಯ್ ಬಿಡುಗಡೆ ಮಾಡಿದ ಇತ್ತೀಚಿನ ಮಾಹಿತಿಯ ಪ್ರಕಾರ, ರಿಲಯನ್ಸ್ ಜಿಯೋ ಒಟ್ಟು 5 ಜಿಎಫ್‌ಡಬ್ಲ್ಯೂಎ ಚಂದಾದಾರರ ಸಂಖ್ಯೆ (ಪರವಾನಗಿ ಪಡೆಯದ ಬ್ಯಾಂಡ್ ರೇಡಿಯೋ ಸೇರಿದಂತೆ) ಮೇ ತಿಂಗಳಲ್ಲಿ 6.88 ಮಿಲಿಯನ್ ತಲುಪಿದ್ದರೆ, ಟಿ-ಮೊಬೈಲ್ ಮಾರ್ಚನಲ್ಲಿ 6.85 ಮಿಲಿಯನ್ ಚಂದಾದಾರರನ್ನು ಹೊಂದಿತ್ತು.ರಿಲಯನ್ಸ್ ಜಿಯೋ ಸುಮಾರು 1 ಮಿಲಿಯನ್ ಫಿಕ್ಸೆಡ್ ವೈರ್ಲೆಸ್ ಆಕ್ಸೆಸ್ (ಎಫ್‌ಡಬ್ಲ್ಯೂಎ) ಪರವಾನಗಿ ಪಡೆಯದ ಬ್ಯಾಂಡ್ ರೇಡಿಯೋ (ಯುಬಿಆರ್) ಚಂದಾದಾರರನ್ನು ಎಫ್ಟಿಟಿಎಕ್ಸ್ ವರ್ಗಕ್ಕೆ ಮರು ವರ್ಗೀಕರಿಸಿದೆ. ಇದರ ನಂತರ ಅದರ ನಿವ್ವಳ ಎಫ್‌ಡಬ್ಲ್ಯೂಎ ಚಂದಾದಾರರ ಸಂಖ್ಯೆ ಮೇ ತಿಂಗಳಲ್ಲಿ 5.9 ಮಿಲಿಯನ್ ಆಗಿದ್ದು, ಮಾಸಿಕ 0.74 ಮಿಲಿಯನ್ ಗ್ರಾಹಕರನ್ನು ಸೇರಿಸಲಾಗಿದೆ.

ಟ್ರಾಯ್ ದತ್ತಾಂಶದ ಆಧಾರದ ಮೇಲೆ ವಿಶ್ಲೇಷಕರಾದ ಸಂಜೇಶ್ ಜೈನ್, ಮೋಹಿತ್ ಮಿಶ್ರಾ ಮತ್ತು ಅಪರಾಜಿತಾ ಚಕ್ರವರ್ತಿ ಅವರ ಐಸಿಐಸಿಐ ಸೆಕ್ಯುರಿಟೀಸ್ ವರದಿಯ ಪ್ರಕಾರ, ಒಟ್ಟಾರೆ ಉದ್ಯಮದ ಎಫ್ ಡಬ್ಲ್ಯೂಎ (ಯುಬಿಆರ್ ಹೊರತುಪಡಿಸಿ) 7.4 ಮಿಲಿಯನ್ ಮತ್ತು ಯುಬಿಆರ್ ಮರು ವರ್ಗೀಕರಣದ ನಂತರ ಜಿಯೋದ ಎಫ್‌ಡಬ್ಲ್ಯೂಎ ಉಪಬಂಧಗಳು 5.9 ಮಿಲಿಯನ್ ಆಗಿದೆ. ಮೇ ತಿಂಗಳಲ್ಲಿ ನಿವ್ವಳ ಸೇರ್ಪಡೆ 0.74 ಮಿಲಿಯನ್ ಚಂದಾದಾರರು ಎಂದು ವರದಿ ತಿಳಿಸಿದೆ.

ಜಿಯೋದ ಎಫ್‌ಡಬ್ಲ್ಯೂಎ (ಯುಬಿಆರ್ ಸೇರಿದಂತೆ) 6.88 ಮಿಲಿಯನ್ ಆಗಿತ್ತು. ಇದು, ಟಿ-ಮೊಬೈಲ್ (ಯುಎಸ್ ಪ್ಲೇಯರ್ ಮತ್ತು ಜಾಗತಿಕವಾಗಿ ಅತಿದೊಡ್ಡ ಎಫ್ಡಬ್ಲ್ಯೂಎ ಸಬ್ಸ್ ಬೇಸ್) ಎಫ್‌ಡಬ್ಲ್ಯೂಎ ಸಬ್ಸ್ ಬೇಸ್‌ಗೆ ಹೋಲಿಸಿದರೆ ಮಾರ್ಚ್ 2025 ರಲ್ಲಿ 6.85 ಮಿಲಿಯನ್ ಆಗಿತ್ತು. ಜೂನ್ 2025 ರ ಅಂತ್ಯದ ವೇಳೆಗೆ ಜಾಗತಿಕವಾಗಿ ಎಫ್‌ಡಬ್ಲ್ಯೂಎಗೆ ಚಂದಾದಾರರಾಗುವ ಮೂಲಕ ಜಿಯೋ ಪ್ರಬಲ ಸೇವಾ ಪೂರೈಕೆದಾರ ಆಗುವ ಹಾದಿಯಲ್ಲಿದೆ ಎಂದು ನಾವು ನಂಬುತ್ತೇವೆ ಎಂದು ವರದಿ ಹೇಳಿದೆ. ಒಟ್ಟಾರೆಯಾಗಿ, ವೈರ್ಡ್ ಮತ್ತು ವೈರ್ಲೆಸ್ ವಿಭಾಗಗಳನ್ನು ಒಳಗೊಂಡ ಬ್ರಾಡ್ಬ್ಯಾಂಡ್ ವಿಭಾಗದಲ್ಲಿ ರಿಲಯನ್ಸ್ ಜಿಯೋ ಶೇಕಡಾ 50.72 ರಷ್ಟು ಪಾಲನ್ನು ಹೊಂದಿದ್ದು, ಭಾರತೀಯ ಮಾರುಕಟ್ಟೆಯಲ್ಲಿ ಪ್ರಾಬಲ್ಯ ಸಾಧಿಸಿದೆ. ಟೆಲಿಕಾಂ ರೆಗ್ಯುಲೇಟರಿ ಅಥಾರಿಟಿ ಆಫ್ ಇಂಡಿಯಾ (ಟ್ರಾಯ್) ಪ್ರಕಟಿಸಿದ ಅಂಕಿಅಂಶಗಳ ಪ್ರಕಾರ, ಮೇ ತಿಂಗಳಲ್ಲಿ ರಿಲಯನ್ಸ್ ಜಿಯೋ ಒಟ್ಟು ಸ್ಥಿರ ವೈರ್ಡ್ ಬ್ರಾಡ್ಬ್ಯಾಂಡ್ ಚಂದಾದಾರರ ಸಂಖ್ಯೆ 13.51 ಮಿಲಿಯನ್ ಮತ್ತು ವೈರ್ಲೆಸ್ ಬ್ರಾಡ್ಬ್ಯಾಂಡ್ ಚಂದಾದಾರರ ಸಂಖ್ಯೆ 480.96 ಮಿಲಿಯನ್ ಆಗಿತ್ತು.ಬ್ರಾಡ್ಬ್ಯಾಂಡ್ ವಿಭಾಗದಲ್ಲಿ ಶೇ.30.99ರಷ್ಟು ಪಾಲನ್ನು ಹೊಂದಿರುವ ಭಾರ್ತಿ ಏರ್ಟೆಲ್ ನಂತರದ ಸ್ಥಾನದಲ್ಲಿದೆ. ರಿಲಯನ್ಸ್ ಜಿಯೋ ಮತ್ತು ಭಾರ್ತಿ ಏರ್ಟೆಲ್ ಎರಡೂ ಪ್ರಸ್ತುತ ಭಾರತೀಯ ಟೆಲಿಕಾಂ ಸೇವೆಗಳ ಮಾರುಕಟ್ಟೆಯಲ್ಲಿ ಪ್ರಾಬಲ್ಯ ಹೊಂದಿವೆ.

ರಿಲಯನ್ಸ್ ಜಿಯೋ ಮತ್ತು ಭಾರ್ತಿ ಏರ್ಟೆಲ್ ತಿಂಗಳಲ್ಲಿ ಶೇಕಡಾ 99 ರಷ್ಟು ಹೊಸ ಗ್ರಾಹಕರನ್ನು ಸೇರಿಸುವುದರೊಂದಿಗೆ ಭಾರತೀಯ ಟೆಲಿಕಾಂ ಚಂದಾದಾರರ ಸಂಖ್ಯೆ ಮೇ ತಿಂಗಳಲ್ಲಿ 1,207 ಮಿಲಿಯನ್ಗೆ ಏರಿದೆ.ಟೆಲಿಕಾಂ ಸೇವಾ ಪೂರೈಕೆದಾರರ ಒಟ್ಟು ನಿವ್ವಳ ಚಂದಾದಾರರ ಸೇರ್ಪಡೆ 43,58,231 ಆಗಿದ್ದರೆ, ರಿಲಯನ್ಸ್ ಜಿಯೋ ಮತ್ತು ಭಾರ್ತಿ ಏರ್ಟೆಲ್ ಜಂಟಿಯಾಗಿ 43,51,294 ಅನ್ನು ಸೇರಿಸಿವೆ.

# ಭಾರತ-ಪಾಕ್ ಕದನ ವಿರಾಮಕ್ಕೆ ಟ್ರಂಪ್ ಮಧ್ಯಸ್ಥಿಕೆ ಸುಳ್ಳು: ಜೈಶಂಕರ್



**ವಾಷಿಂಗ್ಟನ್:** ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪದೇ ಪದೇ ಭಾರತ ಹಾಗೂ ಪಾಕಿಸ್ತಾನದ ನಡುವಿನ ಕದನ ವಿರಾಮಕ್ಕೆ ತಾನೇ ಕಾರಣ ಎಂದು ಹೇಳುತ್ತಿದ್ದಾರೆ. ಇದೀಗ ವಿದೇಶಾಂಗ ಸಚಿವ ಎಸ್ ಜೈಶಂಕರ್ ಈ ಹೇಳಿಕೆಯನ್ನು ಅಲ್ಲಗೆಳೆದಿದ್ದಾರೆ. ಪ್ರಸ್ತುತ ಅಮೆರಿಕದಲ್ಲಿರುವ ವಿದೇಶಾಂಗ ಸಚಿವ (ಇಎಂ) ಎಸ್ ಜೈಶಂಕರ್, ಆಪರೇಷನ್ ಸಿಂದೂರ್ ಬಗ್ಗೆ ತಮ್ಮ ನಿಲುವನ್ನು ಸ್ಪಷ್ಟ ಪಡಿಸಿದ್ದಾರೆ. ಭಾರತ ಮತ್ತು ಪಾಕಿಸ್ತಾನದ ನಡುವೆ ಕದನ ವಿರಾಮಕ್ಕೆ ಮಧ್ಯವರ್ತಿಯಾಗಿರುವ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪುನರಾವರ್ತಿತ ಹೇಳಿಕೆಗಳನ್ನು ಸಚಿವ ತಿರಸ್ಕರಿಸಿದರು.

ವ್ಯಾಪಾರ ಮಾತುಕತೆ ಮತ್ತು ಕದನ ವಿರಾಮ ಮಾತುಕತೆಗಳ ನಡುವೆ ಯಾವುದೇ ಸಂಬಂಧವಿಲ್ಲ ಎಂದು ಜೈ ಶಂಕರ್ ಹೇಳಿದ್ದಾರೆ. ಮೇ 9 ರ ರಾತ್ರಿ ಅಮೆರಿಕ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಪ್ರಧಾನಿ ಮೋದಿಯವರೊಂದಿಗೆ ಮಾತನಾಡುತ್ತಾ, ಪಾಕಿಸ್ತಾನ ಭಾರತದ ಮೇಲೆ ಭಾರಿ ದಾಳಿ ನಡೆಸಲು ಯೋಜಿಸುತ್ತಿದೆ ಎಂದು ಹೇಳಿದ್ದರು. ಆಗ ಆ ಕೋಣೆಯಲ್ಲಿ ನಾನೂ ಇದ್ದೆ. ಆ ರಾತ್ರಿ ಪಾಕಿಸ್ತಾನ ದೊಡ್ಡ ಪ್ರಮಾಣದ ದಾಳಿ ನಡೆಸಿತು , ಅದಕ್ಕೆ ಭಾರತ ತಕ್ಷಣವೇ ಪ್ರತೀಕಾರ ತೀರಿಸಿಕೊಂಡಿತು ಎಂದು ಜೈಶಂಕರ್ ಬಹಿರಂಗಪಡಿಸಿದರು. ಮರುದಿನ ಬೆಳಿಗ್ಗೆ, ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರನ್ನು ಸಂಪರ್ಕಿಸಿ ಪಾಕಿಸ್ತಾನ ಮಾತುಕತೆಗೆ ಸಿದ್ಧವಾಗಿದೆ ಎಂದು ಹೇಳಿದರು. ಆ ದಿನದ ನಂತರ, ಪಾಕಿಸ್ತಾನದ ಮಿಲಿಟರಿ ಕಾರ್ಯಾಚರಣೆಗಳ ಮಹಾನಿರ್ದೇಶಕ ಮೇಜರ್ ಜನರಲ್ ಕಾಶಿಫ್ ಅಬ್ದುಲ್ಲಾ ಅವರು ಲೆಫ್ಟಿನೆಂಟ್ ಜನರಲ್ ರಾಜೀವ್ ಘಾಯ್ ಅವರನ್ನು ನೇರವಾಗಿ ಸಂಪರ್ಕಿಸಿ ಕದನ ವಿರಾಮಕ್ಕೆ ವಿನಂತಿಸಿದರು ಎಂದು ಜೈಶಂಕರ್ ಹೇಳಿದರು. ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಮಾರಕ ಭಯೋತ್ಪಾದಕ ದಾಳಿಯ ನಂತರ ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಭಯೋತ್ಪಾದಕ ನೆಲೆಗಳನ್ನು ಭಾರತ ಆಪರೇಷನ್ ಸಿಂದೂರ್ ಮೂಲಕ ನಾಶಪಡಿಸಿತ್ತು. ಕದನ ವಿರಾಮವನ್ನು ಘೋಷಿಸಲು ತಾನೇ ಕಾರಣ ಎಂದು ಟ್ರಂಪ್ ಹಲವು ಬಾರಿ ಹೇಳಿದ್ದಾರೆ. ಈ ಹೇಳಿಕೆಯನ್ನು ತಿರಸ್ಕರಿಸಿದ ಜೈಶಂಕರ್, ಘಟನೆಗಳು ಆ ರೀತಿ ನಡೆಯಲಿಲ್ಲ ಮತ್ತು ರಾಜತಾಂತ್ರಿಕತೆ ಮತ್ತು ವ್ಯಾಪಾರ ಮಾತುಕತೆಗಳು ಸಂಪೂರ್ಣವಾಗಿ ಪ್ರತ್ಯೇಕವಾಗಿವೆ ಎಂದು ಹೇಳಿದ್ದಾರೆ.

# ಪಾಟ್ನಾ ವಿಮಾನ ನಿಲ್ದಾಣಕ್ಕೆ ಬೆದರಿಕೆ ಕರೆ



**ಪಾಟ್ನಾ:** ಇಲ್ಲಿನ ಜಯ ಪ್ರಕಾಶ್ ನಾರಾಯಣ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಾಂಬ್ ಬೆದರಿಕೆ ಇಮೇಲ್ ಸಂದೇಶ ರವಾನೆಯಾಗಿದ್ದು, ಈ ಹಿನ್ನೆಲೆಯಲ್ಲಿ ಆತಂಕ ಸೃಷ್ಟಿಯಾಯಿತು.

ಎಸ್ಟೋನಿಯಾ ಮೂಲದ ಎನ್‌ಕ್ರಿಪ್ಟ್ ಮಾಡಿದ ಇಮೇಲ್‌ನಿಂದ ವಿಮಾನ ನಿಲ್ದಾಣದ ನಿರ್ದೇಶಕರಿಗೆ ಬಾಂಬ್ ಬೆದರಿಕೆ ಕರೆ ಬಂದಿದೆ. ಈ ರೀತಿ ಸಂದೇಶ ಕಳೆದ ಎರಡು ವಾರಗಳ ಹಿಂದೆ ಕೂಡ ರವಾನೆಯಾಗಿದ್ದು, ಈ ವರ್ಷದಲ್ಲಿ ಬಂದ ಮೂರನೇ ಬೆದರಿಕೆ ಕರೆ ಇದಾಗಿದೆ. ಬೆದರಿಕೆ ಇಮೇಲ್ ಬಂದ ಹಿನ್ನೆಲೆಯಲ್ಲಿ ನಿಲ್ದಾಣದಲ್ಲಿ ಭದ್ರತಾ ಸಿಬ್ಬಂದಿ ತೀವ್ರ ಶೋಧ ನಡೆಸಿದರು, ಆದರೆ ಯಾವುದೇ ಬಾಂಬ್ ಪತ್ತೆಯಾಗಿಲ್ಲ.

ಈ ಕುರಿತು ಮಾತನಾಡಿದ ನಗರ ಕೇಂದ್ರ ಎಸ್‌ಪಿ ದೀಕ್ಷಾ ಯಾದವ್, ಬೆದರಿಕೆ ಕರೆಯನ್ನು ಗಂಭೀರವಾಗಿ ಪರಿಗಣಿಸಿ ಪರಿಶೀಲಿಸಲಾಗಿದೆ. ವಿಮಾನ ನಿಲ್ದಾಣದ ಬಾಂಬ್ ಬೆದರಿಕೆ ಮೌಲ್ಯಮಾಪನ ಸಮಿತಿಯು ನಿಲ್ದಾಣದದಲ್ಲಿ ತಡರಾತ್ರಿವರೆಗೆ ಸಂಪೂರ್ಣ ತಪಾಸಣೆ ನಡೆಸಿದರು. ಘಟನೆ ಕುರಿತು ಪ್ರಕರಣ ದಾಖಲಿಸಲಾಗಿದ್ದು, ಈ ಇಮೇಲ್ ಬಗ್ಗೆ ತನಿಖೆ ನಡೆಸುವಂತೆ ಈ ಕುರಿತು ಸೈಬರ್ ಸೆಲ್‌ಗೆ ಮಾಹಿತಿ ನೀಡಲಾಗಿದೆ. ಪಾಟ್ನಾ ಪೊಲೀಸರು ಕೂಡ ಈ ವಿಚಾರದಲ್ಲಿ ತನಿಖೆ ನಡೆಸುತ್ತಿದ್ದಾರೆ.

2024ರ ಜೂನ್ 18ರಂದು ಕೂಡ ಪಾಟ್ನಾ ವಿಮಾನ ನಿಲ್ದಾಣ ಸ್ಫೋಟಿಸುವ ಇಮೇಲ್ ಬೆದರಿಕೆ ರವಾನೆಯಾಗಿತ್ತು. ವಿಮಾನ ನಿಲ್ದಾಣದ ಭದ್ರತಾ ಅಧಿಕಾರಿ ವಿಕ್ಕಿ ಸಿಂಗ್ ಅವರು ವಿಮಾನ ನಿಲ್ದಾಣ ಪೊಲೀಸ್ ಠಾಣೆಯಲ್ಲಿ ಈ ವಿಷಯವನ್ನು ದಾಖಲಿಸಿದ್ದರು. ಅಲ್ಲಿ ಪ್ರಕರಣ ದಾಖಲಾಗಿದೆ. ಎಸ್ಟೋನಿಯಾದ ಎನ್‌ಕ್ರಿಪ್ಟ್ ಮಾಡಿದ ಇಮೇಲ್ ಸೇವಾ ಕಂಪನಿಯು 2024 ರಿಂದ ಇಮೇಲ್ ಸೇವೆ ಒದಗಿಸುತ್ತಿದೆ. ಇದು ಯಾವುದೇ ದೇಶದ ಪೊಲೀಸರಿಗೆ ನೇರವಾಗಿ ಮಾಹಿತಿ ನೀಡುವುದಿಲ್ಲ. ಎಸ್ಟೋನಿಯನ್ ನ್ಯಾಯಾಲಯದ ಆದೇಶದ ನಂತರವೇ ಮಾಹಿತಿ ನೀಡುತ್ತದೆ.

# ಆಂಧ್ರ ಪ್ರದೇಶ: ಶ್ರೀಶೈಲಂ ದೇವಸ್ಥಾನದ ಪ್ರಸಾದದಲ್ಲಿ ಜಿರಳೆ ಪತ್ತೆ; ಆರೋಪ ನಿರಾಕರಿಸಿದ ದೇಗುಲದ ಆಡಳಿತ ಮಂಡಳಿ

**ನವದೆಹಲಿ:** ಆಂಧ್ರಪ್ರದೇಶದ ಶ್ರೀಶೈಲಂ ದೇವಸ್ಥಾನದಲ್ಲಿ ಭಾನುವಾರ ನೀಡಿದ ಲಡ್ಡು 'ಪ್ರಸಾದ'ದಲ್ಲಿ ಜಿರಳೆ ಸಿಕ್ಕಿದೆ ಎಂದು ಭಕ್ತರೊಬ್ಬರು ಹೇಳಿಕೊಂಡಿದ್ದು, ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಸರಶ್ಚಂದ್ರ ಕೆ ಎಂಬುವವರು ಲಡ್ಡು ಮಧ್ಯದಲ್ಲಿ ಸತ್ತ ಕೀಟ ಇರುವುದನ್ನು ತೋರಿಸುವ ವಿಡಿಯೋವನ್ನು ಹಂಚಿಕೊಂಡಿದ್ದಾರೆ. ಜಿರಳೆ ಪತ್ತೆಯಾದ ಕೂಡಲೇ ಸರಶ್ಚಂದ್ರ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಗೆ ದೂರು ನೀಡಿದ್ದು, ನಿರ್ಲಕ್ಷ್ಯದಿಂದ ದೇವಸ್ಥಾನದ ಸಿಬ್ಬಂದಿ ಲಡ್ಡುಗಳನ್ನು ತಯಾರಿಸಿದ್ದಾರೆ ಎಂದಿದ್ದಾರೆ. 'ಜೂನ್ 29 ರಂದು, ನಾನು ಶ್ರೀಶೈಲಂ ದೇವಸ್ಥಾನಕ್ಕೆ ಭೇಟಿ ನೀಡಿದ್ದಾಗ, ಲಡ್ಡು 'ಪ್ರಸಾದ'ದಲ್ಲಿ ಜಿರಳೆ ಕಂಡುಬಂದಿದೆ. ದೇವಸ್ಥಾನದ ಸಿಬ್ಬಂದಿ 'ಪ್ರಸಾದ' ತಯಾರಿಸುವಾಗ ನಿರ್ಲಕ್ಷ್ಯ ವಹಿಸಿದ್ದಾರೆ. ದಯವಿಟ್ಟು ಗಮನಿಸಿ ಸಮಸ್ಯೆಯನ್ನು ಬಗೆಹರಿಸಿ' ಎಂದು ಅವರು ಹೇಳಿದ್ದಾರೆ. ಆದರೆ, ದೇವಸ್ಥಾನದ ಅಧಿಕಾರಿಯೊಬ್ಬರು ಸರಶ್ಚಂದ್ರ ಅವರ ಹೇಳಿಕೆಯನ್ನು ನಿರಾಕರಿಸಿದ್ದಾರೆ. ಶ್ರೀಶೈಲಂ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಶ್ರೀನಿವಾಸ ರಾವ್ ಅವರ ಪ್ರಕಾರ, ತಾವು ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ಕಾಪಾಡಿಕೊಂಡು ಲಡ್ಡುಗಳನ್ನು ತಯಾರಿಸುತ್ತೇವೆ. ಲಡ್ಡುಗಳನ್ನು ತಯಾರಿ ಕೇಂದ್ರದ ಸಿಬ್ಬಂದಿಯ ನಿರಂತರ ಮೇಲ್ವಿಚಾರಣೆಯಲ್ಲಿ ತಯಾರಿಸಲಾಗುತ್ತದೆ. ಅದರಲ್ಲಿ ಜಿರಳೆ ಕಂಡುಬರುವ ಸಾಧ್ಯತೆಯಿಲ್ಲ' ಎಂದು ಅವರು ಹೇಳಿದರು.

'ಪ್ರಸಾದ'ದ ಬಗ್ಗೆ ಭಕ್ತರು ಚಿಂತಿಸಬೇಡಿ ಎಂದು ರಾವ್ ಮನವಿ ಮಾಡಿದ್ದಾರೆ. ನಂತರ, ದೇವಾಲಯ ಆಡಳಿತವು ಮುನ್ನೆಚ್ಚರಿಕೆ ಕ್ರಮವಾಗಿ ಪ್ಯಾಕೇಜಿಂಗ್ ಮತ್ತು ಪ್ಯಾಕೇಜಿಂಗ್ ಮಾಡುವ ಪ್ರದೇಶಗಳನ್ನು ಒಳಗೊಂಡಂತೆ ವಿತರಣಾ ಪ್ರಕ್ರಿಯೆಯ ಪರಿಶೀಲನೆಯನ್ನು ಪ್ರಾರಂಭಿಸಿದೆ ಎಂದು ವರದಿಯಾಗಿದೆ. ಈ ಘಟನೆಯು ಧಾರ್ಮಿಕ ಸಂಸ್ಥೆಗಳಲ್ಲಿ, ವಿಶೇಷವಾಗಿ ಸಾವಿರಾರು ಭಕ್ತರು ಸೇವಿಸುವ ಪ್ರಸಾದ ತಯಾರಿಸುವ ಕಡೆಗಳಲ್ಲಿ, ಬಲವಾದ ಸ್ವಚ್ಛತಾ ಶಿಷ್ಟಾಚಾರಗಳನ್ನು ಪಾಲಿಸುವ ಅಗತ್ಯವನ್ನು ಒತ್ತಿಹೇಳಿದೆ.

# ಕ್ರಿಕೆಟ್ ವಿಚಾರಕ್ಕೆ ಜಗಳ: ಸರ್ಕಾರಿ ಶಾಲಾ ಶಿಕಕನಿಂದ ಪೊಲೀಸ್ ಕಾನ್ ಸ್ಟೆಬಲ್ ಗೆ ಗುಂಡಿಕ್ಕಿ ಹತ್ಯೆ!

**ಬಾಗ್‌ಪತ್:** ಉತ್ತರ ಪ್ರದೇಶ ಸರ್ಕಾರಿ ಶಾಸ ಶಿಕ್ಷಕ ಹಾಗೂ ಪೊಲೀಸ್ ಕಾನ್‌ಸ್ಟೆಬಲ್ ನಡುವೆ ಕ್ರಿಕೆಟ್ ಪಂದ್ಯದ ವಿಚಾರಕ್ಕೆ ಆರಂಭವಾದ ಜಗಳ ಕೊಲೆಯಲ್ಲಿ ಅಂತ್ಯಗೊಂಡಿರುವ ದಾರುಣ ಘಟನೆ ಬಾಗ್ ಪತ್ ನಲ್ಲಿ ನಡೆದಿದೆ. ಖೇಕ್ರಾ ಪೊಲೀಸ್ ಠಾಣೆ ವ್ಯಾಪ್ತಿಯ ಸುನ್ಹೇಡಾ ಗ್ರಾಮದಲ್ಲಿ ಈ ಘಟನೆ ನಡೆದಿದ್ದು, ಶಿಕ್ಷಕ, ಕಾನ್‌ಸ್ಟೆಬಲ್ ಗೆ ಗುಂಡಿಕ್ಕಿ ಹತ್ಯೆ ಮಾಡಿದ ನಂತರ ತಲೆಮರೆಸಿಕೊಂಡಿದ್ದಾರೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ. ರಜೆಯ ಮೇಲೆ ಮನೆಗೆ ಬಂದಿದ್ದ ಕಾನ್‌ಸ್ಟೆಬಲ್ ಅಜಯ್ ಕುಮಾರ್(32) ಅವರು, ಭಾನುವಾರ ರಾತ್ರಿ ಊಟದ ನಂತರ ತಮ್ಮ ಗ್ರಾಮದ ಹೊರಗೆ ನಡೆದುಕೊಂಡು ಹೋಗುತ್ತಿದ್ದಾಗ, ಸಹರಾನ್‌ಪುರದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿರುವ ಸ್ಥಳೀಯ ಮೋಹಿತ್ ಆರ್ಯ ಅವರನ್ನು ಭೇಟಿ ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮೊದಲು ಇಬ್ಬರ ನಡುವೆ ಮೊದಲು ಕ್ರಿಕೆಟ್ ಪಂದ್ಯದ ವಿಚಾರ ಮತ್ತು ನಂತರ ವಾಟ್ಸಾಪ್ ಚಾಟ್ ವಿಚಾರದಲ್ಲಿ ಇಬ್ಬರ ನಡುವೆ ವಾಗ್ವಾದ ನಡೆದಿದ್ದು, ಜಗಳ ವಿಕೋಪಕ್ಕೆ ತಿರುಗಿ, ಆರೋಪಿ ಶಿಕ್ಷಕ, ಕಾನ್‌ಸ್ಟೆಬಲ್ ಮೇಲೆ ಪಿಸ್ತೂಲಿನಿಂದ ಗುಂಡು ಹಾರಿಸಿದ್ದಾರೆ ಎನ್ನಲಾಗಿದೆ. ಕುಟುಂಬ ಸದಸ್ಯರು ಗಾಯಗೊಂಡಿದ್ದ ಅಜಯ್ ಕುಮಾರ್ ಅವರನ್ನು ತಕ್ಷಣವೇ ಚಿಕಿತ್ಸೆಗಾಗಿ ಸೋನಿಪತ್ ಆಸ್ಪತ್ರೆಗೆ ಕರೆದೊಯ್ದರು. ಆದರೆ ಅಲ್ಲಿ ವೈದ್ಯರು ಅವರು ಮೃತಪಟ್ಟಿದ್ದಾರೆ ಎಂದು ಘೋಷಿಸಿದರು. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎನ್.ಪಿ. ಸಿಂಗ್ ಅವರು ಮೃತ ಅಜಯ್ ಕುಮಾರ್ ಅವರು, ಸಹರಾನ್‌ಪುರ ಪೊಲೀಸ್ ಠಾಣೆಯಲ್ಲಿ ನಿಯೋಜಿಸಲಾಗಿದ್ದು, ರಜೆಯ ಮೇಲೆ ಗ್ರಾಮಕ್ಕೆ ಬಂದಿದ್ದರು ಎಂದು ಹೇಳಿದ್ದಾರೆ. ಶಿಕ್ಷಕ ವಿರುದ್ಧ ಕೊಲೆ ಪ್ರಕರಣ ದಾಖಲಿಸಲಾಗಿದ್ದು, ಪೊಲೀಸರು ತೀವ್ರ ಶೋಧ ನಡೆಸುತ್ತಿದ್ದಾರೆ ಎಂದು ಸಿಂಗ್ ತಿಳಿಸಿದ್ದಾರೆ.

# ಬಲವಂತ ಮತಾಂತರ; ಭಯೋತ್ಪಾದನೆಗೆ ಪ್ರಚೋದನೆ

**ಉತ್ತರ ಪ್ರದೇಶ:** ದಲಿತ ಬಾಲಿಕಿಯನ್ನು ಬಲವಂತವಾಗಿ ಮತಾಂತರ ಮಾಡಿ ಆಕೆಯನ್ನು ಭಯೋತ್ಪಾದನೆಗೆ ಒತ್ತಾಯಪೂರ್ವಕವಾಗಿ ನೇಮಕ ಮಾಡಿರುವ ಘಟನೆ ಉತ್ತರ ಪ್ರದೇಶದಲ್ಲಿ ನಡೆದಿದೆ.ಉತ್ತರ ಪ್ರದೇಶದ ತನ್ನ ಹಳ್ಳಿಯಿಂದ ಅಪ್ರಾಪ್ತ ವಯಸ್ಕ ದಲಿತ ಬಾಲಕಿಯನ್ನು ಕೇರಳಕ್ಕೆ ಕರೆದೊಯ್ದು ಭಯೋತ್ಪಾದಕ ಚಟುವಟಿಕೆಗಳಿಗೆ ನೇಮಕ ಮಾಡಿಕೊಳ್ಳುವ ಮುನ್ನ ಮತಾಂತರಗೊಳ್ಳುವಂತೆ ಒತ್ತಾಯಿಸಲಾಗಿದೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ. ಮೇ 8ರಂದು ಪ್ರಯಾಗ್‌ರಾಜ್ ಜಿಲ್ಲೆಯ ಫೂಲ್‌ಪುರ ಪ್ರದೇಶದ ತನ್ನ ಹಳ್ಳಿಯಿಂದ 15 ವರ್ಷದ ಬಾಲಕಿಯನ್ನು ಕರೆದೊಯ್ಯಲಾಗಿತ್ತು ಎನ್ನಲಾದ ಆಕೆ ಕೇರಳದಿಂದ ತಪ್ಪಿಸಿಕೊಂಡು ತನ್ನ ತಾಯಿಯನ್ನು ಸಂಪರ್ಕಿಸಿದಾಗ ಪಿತೂರಿ ಬಯಲಾಗಿದೆ. ಘಟನೆ ಸಂಬಂಧ ಇಬ್ಬರು ಜನರನ್ನು ಬಂಧಿಸಲಾಗಿದೆ. ಡಿಸಿಪಿ (ಗಂಗಾ ನಗರ) ಕುಲದೀಪ್ ಸಿಂಗ್ ಗುಣವತ್ ಅವರ ಪ್ರಕಾರ, ಬಾಲಕಿಯನ್ನು ಜಿಹಾದಿ ಚಟುವಟಿಕೆಗಳಿಗೆ ಸೇರಲು ಒತ್ತಾಯಿಸಲಾಗುತ್ತಿತ್ತು. ಈ ಜಾಲದಿಂದ ಆಕೆ ಹೇಗೋ ತಪ್ಪಿಸಿಕೊಂಡು ತ್ರಿಶೂರ್ ರೈಲ್ವೆ ನಿಲ್ದಾಣವನ್ನು ತಲುಪುವಲ್ಲಿ ಯಶಸ್ವಿಯಾಗಿದ್ದಾಳೆ. ಅಲ್ಲಿಂದ ಅವಳು ಸ್ಥಳೀಯ ಪೊಲೀಸರ ಸಹಾಯದಿಂದ ತನ್ನ ತಾಯಿಯನ್ನು ತಲುಪಿದ್ದಾಳೆ. ಸಂತ್ರಸ್ತೆಗೆ ದರ್ಕ್ಷಾ ಬಾನೋ ಎಂಬ 19 ವರ್ಷದ ಮಹಿಳೆ ಆಮಿಷವೊಡ್ಡಿದ್ದಾಳೆ ಎಂದು ಆರೋಪಿಸಲಾಗಿದೆ. ಅವರನ್ನು ಮೊಹಮ್ಮದ್ ಕೈಫ್ ಎಂಬ ವ್ಯಕ್ತಿಯೊಂದಿಗೆ ಬಂಧಿಸಲಾಗಿದೆ. ತಾಯಿಯನ್ನು ಸಂಪರ್ಕಿಸಿದ ನಂತರ, ಬಾಲಕಿಯನ್ನು ಪ್ರಯಾಗ್‌ರಾಜ್‌ಗೆ ಕರೆತರಲಾಯಿತು ಮತ್ತು ಪ್ರಸ್ತುತ ರಕ್ಷಣೆಗಾಗಿ ಒನ್ ಸ್ಟಾಪ್ ಸೆಂಟರ್‌ನಲ್ಲಿ ಇರಿಸಲಾಗಿದೆ.

# ದೇವಸ್ಥಾನದಲ್ಲೇ ನಮಾಜ್ ಮಾಡಿದ ಮುಸ್ಲಿಂ ವ್ಯಕ್ತಿ



**ಲಖನೌ:** ಉತ್ತರ ಪ್ರದೇಶದ ದೇವಸ್ಥಾನವೊಂದರಲ್ಲಿ ಮುಸ್ಲಿಂ ವ್ಯಕ್ತಿಯೊಬ್ಬರು ನಮಾಜ್ ಮಾಡಿದ್ದು, ವಿಡಿಯೊ ತಡವಾಗಿ ಬೆಳಕಿಗೆ ಬಂದು ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಜತೆಗೆ ದೇಶಾದ್ಯಂತ ಆಕ್ರೋಶ ಹುಟ್ಟುಹಾಕಿದೆ. ಈ ಘಟನೆ ಬದೌನ್ ಜಿಲ್ಲೆಯ ದತ್ತಗಂಜ್‌ನ ಪಾಪಡ್ ಗ್ರಾಮದಲ್ಲಿ ಕೆಲವು ದಿನಗಳ ಹಿಂದೆ ನಡೆದಿದೆ. ನಮಾಜ್ ಮಾಡಿದ ವ್ಯಕ್ತಿ ಸುಮಾರು 35 ವರ್ಷಗಳಿಂದ ಈ ದೇವಸ್ಥಾನದಲ್ಲಿ ಕೆಲಸ ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಸದ್ಯ ದೇವಸ್ಥಾನದಲ್ಲಿ ನಮಾಜ್ ಮಾಡಿದ 60 ವರ್ಷದ ಅಲಿ ಮೊಹಮ್ಮದ್‌ನನ್ನು ಬಂಧಿಸಲಾಗಿದೆ.

ಹಲವು ವರ್ಷಗಳಿಂದ ದೇವಸ್ಥಾನದ ಸ್ವಚ್ಛತೆಯ ಕೆಲಸದಲ್ಲಿ ತೊಡಗಿಸಿಕೊಂಡಿದ್ದ ಅಲಿ ಮೊಹಮ್ಮದ್ ತನ್ನ ಕೃತ್ಯಕ್ಕೆ ಇದೀಗ ಕ್ಷಮೆ ಕೋರಿದ್ದಾನೆ.

ದೇವಸ್ಥಾನವನ್ನು ಸ್ವಚ್ಛಗೊಳಿಸಿದ ಬಳಿಕ ಅಲ್ಲೇ ನಮಾಜ್ ಮಾಡಿದೆ. ಇದು ನನ್ನಿಂದಾದ ತಪ್ಪು. ಇದಕ್ಕಾಗಿ ಕ್ಷಮೆ ಕೋರುತ್ತೇನೆ ಎಂದು ಹೇಳಿದ್ದಾನೆ. ಈ ಹಿಂದೆಯೂ ಈ ರೀತಿ ಮಾಡಿದ್ದೀಯಾ ಎನ್ನುವ ಪ್ರಶ್ನೆಗೆ ಇಲ್ಲ ಎಂದು ಉತ್ತರಿಸಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ನಮಾಜ್ ಮಾಡುವ ಸಮಯದಲ್ಲಿ ನೀನು ಎಲ್ಲೇ ಇದ್ದರೂ ಪ್ರಾರ್ಥನೆ ಸಲ್ಲಿಸಬಹುದು ಎಂದು ಹಿರಿಯರು ತಿಳಿಸಿದ್ದರು. ಹೀಗಾಗಿ ದೇವಸ್ಥಾನದಲ್ಲೇ ನಮಾಜ್ ಮಾಡಿದೆ ಎಂದು ಹೇಳಿದ್ದಾನೆ.

# ಥಾಯ್ಲೆಂಡ್ ಪ್ರಧಾನಿ ಅಮಾನತು



**ಬ್ಯಾಂಕಾಕ್:** ಥಾಯ್ಲೆಂಡ್ ಪ್ರಧಾನಿ ಪೇಟಾಂಗ್ಟಾರ್ನ್ ಶಿನವತ್ರ ಕಾಂಬೋಡಿಯಾದೊಂದಿಗಿನ ರಾಜತಾಂತ್ರಿಕ ಬಿಕ್ಕಟ್ಟಿನ ವೇಳೆ ತೋರಿರುವ ವರ್ತನೆ ಕುರಿತು ತನಿಖೆಗೆ ಆದೇಶಿಸಿರುವ ಥಾಯ್ಲೆಂಡ್ ಸಾಂವಿಧಾನಿಕ ನ್ಯಾಯಾಲಯ, ಅವರನ್ನು ಪ್ರಧಾನಿ ಹುದ್ದೆಯಿಂದ ಅಮಾನತುಗೊಳಿಸಿದೆ.

''ಕಾಂಬೋಡಿಯಾದೊಂದಿಗಿನ ಗಡಿ ಬಿಕ್ಕಟ್ಟಿನ ವೇಳೆ ಪೇಟಾಂಗ್ಟಾರ್ನ್ ಶಿನವತ್ರ ಸಚಿವ ಸ್ಥಾನದ ನೈತಿಕತೆಯನ್ನು ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿ ಕನ್ಸರ್ವೇಟಿವ್ ಸೆನೆಟರ್ ಗಳ ಗುಂಪೊಂದು ದಾಖಲಿಸಿದ್ದ ದೂರಿನ ವಿಚಾರಣೆ ನಡೆಸಿದ ಸಾಂವಿಧಾನಿಕ ನ್ಯಾಯಾಲಯ, ಸಾಂವಿಧಾನಿಕ ನ್ಯಾಯಾಲಯ ಈ ಪ್ರಕರಣದ ಕುರಿತು ಅಂತಿಮ ತೀರ್ಪು ನೀಡುವವರೆಗೂ, ಜುಲೈ 1ರಿಂದ ಪ್ರತಿವಾದಿಯಾದ ಪೇಟಾಂಗ್ಟಾರ್ನ್ ಶಿನವತ್ರರನ್ನು ಪ್ರಧಾನಿ ಹುದ್ದೆಯ ಕರ್ತವ್ಯದಿಂದ ಅಮಾನತುಗೊಳಿಸಲಾಗಿದೆ'' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಥಾಯ್ಲೆಂಡ್ ಹಾಗೂ ಕಾಂಬೋಡಿಯಾ ನಡುವಿನ ದೀರ್ಘಕಾಲದ ಗಡಿ ವಿವಾದವು ಕಳೆದ ಮೇ ತಿಂಗಳಲ್ಲಿ ಅಂತರ್ ಗಡಿ ಸಂಘರ್ಷಕ್ಕೆ ತಿರುಗಿತ್ತು. ಈ ವೇಳೆ ಕಾಂಬೋಡಿಯಾದ ಓರ್ವ ಯೋಧ ಮೃತಪಟ್ಟಿದ್ದರು.

ಈ ಕುರಿತು ಚರ್ಚಿಸಲು ಕಾಂಬೋಡಿಯಾದ ರಾಜನೀತಿಜ್ಞ ಹುನ್ ಸೇನ್ ಗೆ ಕರೆ ಮಾಡಿದ್ದ ಪೇಟಾಂಗ್ಟಾರ್ನ್ ಶಿನವತ್ರ, ಅವರನ್ನು 'ಅಂಕಲ್' ಎಂದು ಸಂಬೋಧಿಸಿ, ಓರ್ವ ಸೇನಾ ಕಮಾಂಡರ್ ರನ್ನು ತಮ್ಮ ಶತ್ರು ಎಂದು ಹೇಳಿರುವುದು ಸೋರಿಕೆಯಾಗಿರುವ ದೂರವಾಣಿ ಕರೆಯಿಂದ ಬಯಲಾಗಿತ್ತು. ಇದು ಪೇಟಾಂಗ್ಟಾರ್ನ್ ಶಿನವತ್ರರಿಗೆ ತಿರುಗುಬಾಣವಾಗಿತ್ತು.

# ಭಾರತಕ್ಕೆ ಅಕ್ರಮ ಪ್ರವೇಶ ಮಾಡಿದ್ದ ಪಾಕ್ ನ ಹಿಂದೂ ದಂಪತಿ ಥಾರ್ ಮರುಭೂಮಿಯಲ್ಲಿ ನೀರು ಸಿಗದೆ ಸಾವು!



**ಜೈಸಲ್ಮೇರ್:** ಇತ್ತೀಚೆಗೆ ಭಾರತ-ಪಾಕಿಸ್ತಾನ ಗಡಿ ದಾಟಿದ ಪಾಕಿಸ್ತಾನಿ ದಂಪತಿಗಳಾದ ರವಿ ಕುಮಾರ್ (17) ಮತ್ತು ಶಾಂತಿ ಬಾಯಿ (15) ಬಾಯಾರಿಕೆ ಮತ್ತು ನಿರ್ಜಲೀಕರಣದಿಂದ ಸಾವನ್ನಪ್ಪಿದ್ದಾರೆ ಎಂದು ಜೈಸಲ್ಮೇರ್ ಪೊಲೀಸ್ ವರಿಷ್ಠಾಧಿಕಾರಿ ಸುಧೀರ್ ಚೌಧರಿ ತಿಳಿಸಿದ್ದಾರೆ. ಅವರ ಶವಗಳು ಥಾರ್ ಮರುಭೂಮಿಯಲ್ಲಿ ಪತ್ತೆಯಾಗಿವೆ. ದೃಶ್ಯದ ಫೋಟೋದಲ್ಲಿ ರವಿ ಅವರ ಮುಖದ ಮೇಲೆ ಖಾಲಿ ಜೆರಿಕ್ಯಾನ್ ಇರಿಸಲಾಗಿದ್ದು, ಇದು ಅವರ ಸಾವಿಗೆ ಮುನ್ನ ಅವರ ಸಂಕಟವನ್ನು ಸೂಚಿಸುತ್ತದೆ.

ರವಿ ಮತ್ತು ಶಾಂತಿ ನಾಲ್ಕು ತಿಂಗಳ ಹಿಂದೆ ಪಾಕಿಸ್ತಾನದ ಸಿಂಧ್ ಪ್ರಾಂತ್ಯದ ಘೋಟ್ಕಿ ಜಿಲ್ಲೆಯ ಮಿರ್ಪುರ್ ಮಥೆಲೊದಲ್ಲಿ ವಿವಾಹವಾಗಿದ್ದರು. ಅವರು ಸುರಕ್ಷಿತ ಮತ್ತು ಉತ್ತಮ ಜೀವನವನ್ನು ನಿರೀಕ್ಷಿಸಿ ಭಾರತಕ್ಕೆ ಬರಲು ನಿರ್ಧರಿಸಿದ್ದು ಇದಕ್ಕಾಗಿ ಅವರು ವೀಸಾಕ್ಕಾಗಿ ಅರ್ಜಿ ಸಲ್ಲಿಸಿದರು. ಆದರೆ ಭಾರತ ಮತ್ತು ಪಾಕಿಸ್ತಾನದ ನಡುವಿನ ಸಂಬಂಧಗಳು ಹದಗೆಟ್ಟ ಕಾರಣ, ಅವರ ವೀಸಾ ಅರ್ಜಿಗಳನ್ನು ತಿರಸ್ಕರಿಸಲಾಯಿತು. ಆದಾಗ್ಯೂ, ಭಾರತಕ್ಕೆ ಹೋಗಲಬೇಕು ಎಂದು ನಿರ್ಧರಿಸಿದ್ದ ಅವರು ಅಕ್ರಮವಾಗಿ ಗಡಿ ದಾಟಿ ಬಂದಿದ್ದರು.

ಪೋಷಕರ ವಿರೋಧದ ಹೊರತಾಗಿಯೂ ರವಿ ಮತ್ತು ಶಾಂತಿ ಒಂದು ವಾರದ ಹಿಂದೆ ಗಡಿ ದಾಟಿದರು. ಆದರೆ ಅವರು ಬಿಭಿಯಾ ಮರುಭೂಮಿಯಲ್ಲಿ ದಾರಿ ತಪ್ಪಿ ನೀರಿನ ಕೊರತೆಯಿಂದ ಸಾವನ್ನಪ್ಪಿದರು. ಪಾಕಿಸ್ತಾನದಿಂದ ತರಲಾದ ನೀರಿನ ಖಾಲಿ ಜೆರಿಕ್ಯಾನ್ ಅವರ ಬಳಿ ಪತ್ತೆಯಾಗಿದೆ. ಭಾನುವಾರ, ವೈದ್ಯಕೀಯ ಮಂಡಳಿಯು ಅವರ ಶವಗಳ ಮರಣೋತ್ತರ ಪರೀಕ್ಷೆ ನಡೆಸಿತು.

ಹಿಂದೂ ಪಾಕಿಸ್ತಾನಿ ನಿರಾಶ್ರಿತ ಒಕ್ಕೂಟ ಮತ್ತು ಗಡಿ ಜನರ ಸಂಘಟನೆಯ ಜಿಲ್ಲಾ ಸಂಯೋಜಕ ದಿಲೀಪ್ ಸಿಂಗ್ ಸೋಢಾ, ಭಾರತ ಸರ್ಕಾರ ಶವಗಳನ್ನು ಹಿಂದಿರುಗಿಸಿದರೆ, ಜೈಸಲ್ಮೇರ್‌ನಲ್ಲಿರುವ ಅವರ ಸಂಬಂಧಿಕರು ಅವುಗಳನ್ನು ಸ್ವೀಕರಿಸಲು ಸಿದ್ಧರಿದ್ದಾರೆ ಎಂದು ಹೇಳಿದರು. ಶವಗಳನ್ನು ಪಾಕಿಸ್ತಾನಕ್ಕೆ ಕಳುಹಿಸದಿದ್ದರೆ, ಸಂಬಂಧಿಕರು ಹಿಂದೂ ಪದ್ಧತಿಗಳ ಪ್ರಕಾರ ಅಂತ್ಯಕ್ರಿಯೆ ನಡೆಸಲು ಸಿದ್ಧರಿದ್ದಾರೆ.

ಶವಗಳೊಂದಿಗೆ ಪಾಕಿಸ್ತಾನಿ ರಾಷ್ಟ್ರೀಯ ಗುರುತಿನ ಚೀಟಿಗಳು ಪತ್ತೆಯಾಗಿವೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಹೇಳಿದ್ದಾರೆ. ಇದು ಭದ್ರತಾ ಕಳವಳವನ್ನು ಹುಟ್ಟುಹಾಕಿದೆ. ಈ ಘಟನೆಯು ಗಡಿಯಾಚೆಯಿಂದ ಒಳನುಸುಳುವಿಕೆ ಅಥವಾ ಇತರ ಅಪರಾಧ ಚಟುವಟಿಕೆಗಳನ್ನು ಸೂಚಿಸುತ್ತದೆ. ಪೊಲೀಸರು ಮತ್ತು ವಿವಿಧ ಭದ್ರತಾ ಸಂಸ್ಥೆಗಳು ಇದನ್ನು ಕೂಲಂಕಷವಾಗಿ ತನಿಖೆ ನಡೆಸುತ್ತಿವೆ.

# ಐ ಲವ್ ಯು ಎಂದು ಹೇಳುವುದು ಲೈಂಗಿಕ ಕಿರುಕುಳವಲ್ಲ : ಹೈಕೋರ್ಟ್



**ನವದೆಹಲಿ:** ಪೋಕ್ಸೊ ಪ್ರಕರಣದಡಿಯಲ್ಲಿ ವ್ಯಕ್ತಿಯೊಬ್ಬನ ಶಿಕ್ಷೆಯನ್ನ ರದ್ದುಗೊಳಿಸಿದ ಬಾಂಬೆ ಹೈಕೋರ್ಟ್‌ನ ನಾಗ್ಪುರ ಪೀಠ, 'ಐ ಲವ್ ಯು' ಎಂದು ಹೇಳುವುದು ಕೇವಲ ಭಾವನೆಯ ಅಭಿವ್ಯಕ್ತಿ ಮತ್ತು ಅದು ಸ್ವತಃ ''ಲೈಂಗಿಕ ಉದ್ದೇಶ''ಕ್ಕೆ ಸಮನಾಗುವುದಿಲ್ಲ ಎಂದು ಹೇಳಿದೆ.

ನ್ಯಾಯಾಧೀಶರಾದ ಊರ್ಮಿಳಾ ಜೋಶಿ-ಫಾಲ್ಕೆ ಅವರ ಪೀಠವು 2015ರಲ್ಲಿ ಹದಿಹರೆಯದ ಹುಡುಗಿಯೊಬ್ಬಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಹೊತ್ತಿರುವ 35 ವರ್ಷದ ವ್ಯಕ್ತಿಯನ್ನ ಖುಲಾಸೆಗೊಳಿಸಿತು.

ಪ್ರಕರಣದ ವಿಚಾರಣೆ ನಡೆಸುವಾಗ, ಯಾವುದೇ ಲೈಂಗಿಕ ಕ್ರಿಯೆಯು ಅನುಚಿತ ಸ್ಪರ್ಶ, ಬಲವಂತದ ಬಟ್ಟೆ ಕಳಚುವಿಕೆ, ಅಸಭ್ಯ ಸನ್ನೆಗಳು ಅಥವಾ ಮಹಿಳೆಯ ನಮ್ರತೆಯನ್ನ ಅವಮಾನಿಸುವ ಉದ್ದೇಶದಿಂದ ಮಾಡಿದ ಹೇಳಿಕೆಗಳನ್ನ ಒಳಗೊಂಡಿದೆ ಎಂದು ಪೀಠವು ತನ್ನ ಆದೇಶದಲ್ಲಿ ಹೇಳಿದೆ.

ಈ ಹಿಂದೆ, ನಾಗ್ಪುರದ ಸೆಷನ್ಸ್ ನ್ಯಾಯಾಲಯವು 2017ರಲ್ಲಿ ಭಾರತೀಯ ದಂಡ ಸಂಹಿತೆ ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆಯಡಿಯಲ್ಲಿ ಪುರುಷನನ್ನ ದೋಷಿ ಎಂದು ಘೋಷಿಸಿತು. ಪೀಠವು ಅವನಿಗೆ ಮೂರು ವರ್ಷಗಳ ಜೈಲು ಶಿಕ್ಷೆಯನ್ನು ಸಹ ವಿಧಿಸಿತ್ತು.

17 ವರ್ಷದ ಬಾಲಕಿ ಶಾಲೆಯಿಂದ ಮನೆಗೆ ಹೋಗುತ್ತಿದ್ದಾಗ ಆ ವ್ಯಕ್ತಿ ಮೇಲೆ ಹಲ್ಲೆ ನಡೆಸಿದ್ದಾನೆ ಎಂದು ಆರೋಪಿಸಲಾಗಿದೆ. ಆ ವ್ಯಕ್ತಿ ಆಕೆಯ ಕೈಗಳನ್ನು ಹಿಡಿದು ''ನಾನು ನಿನ್ನನ್ನು ಪ್ರೀತಿಸುತ್ತೇನೆ'' ಎಂದು ಹೇಳಿದ್ದಾನೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಹದಿಹರೆಯದ ಯುವತಿ ಮನೆಗೆ ಹೋಗಿ ತನ್ನ ತಂದೆಗೆ ತಿಳಿಸಿದಳು ಮತ್ತು ಎಫ್‌ಐಆರ್ ದಾಖಲಿಸಲಾಗಿದೆ.

Postal Registration No.KA/BGW-1823/2019-2021, Posted at Patrika Channel, RMS Bhavan, Bengaluru PSO, Mysore Road, Bengaluru- 560020, RNI No.KARKAN/2002/08054

# ಪಿ.ಸಿ ಶೇಖರ್ ನಿರ್ದೇಶನ ಮಹಾನ್ ಚಿತ್ರದಲ್ಲಿ ಮಿತ್ರ ವಿಶೇಷ ಪಾತ್ರ



ಕನ್ನಡದಲ್ಲಿ ಸಾಕಷ್ಟು ಸದಭಿರುಚಿಯ ಚಿತ್ರಗಳನ್ನು ನಿರ್ದೇಶಿಸಿರುವ ಪಿ.ಸಿ.ಶೇಖರ್ ನಿರ್ದೇಶನದ, ಪ್ರತಿಷ್ಠಿತ ಸಂಸ್ಥೆಯ ಸಹಯೋಗದೊಂದಿಗೆ ಆಕಾಶ್ ಪಿಕ್ಚರ್ಸ್ ಲಾಂಛನದಲ್ಲಿ ಪ್ರಕಾಶ್ ಬುದ್ದೂರು ಅವರು ನಿರ್ಮಿಸುತ್ತಿರುವ ಹಾಗೂ ತಮ್ಮ ಅಮೋಘ ಅಭಿನಯದ ಮೂಲಕ ಜನಪ್ರಿಯರಾಗಿರುವ ವಿಜಯ ರಾಘವೇಂದ್ರ, ನಾಯಕರಾಗಿ ನಟಿಸುತ್ತಿರುವ ಮಹಾನ್ ಚಿತ್ರದ ಪ್ರಮುಖಪಾತ್ರದಲ್ಲಿ ಹೆಸರಾಂತ ನಟ ಮಿತ್ರ ಅಭಿನಯಿಸುತ್ತಿದ್ದಾರೆ. ''ಮಹಾನ್'' ಚಿತ್ರದ ಪಾತ್ರದ ಕುರಿತು ಮಿತ್ರ ತಮ್ಮ ಮಾತುಗಳ ಮೂಲಕ ತಿಳಿಸಿದ್ದಾರೆ.

ನಾನು ''ರಾಗ'' ಚಿತ್ರದ ನಂತರ ನಿರ್ದೇಶಕ ಪಿ.ಸಿ.ಶೇಖರ್ ಅವರೊಟ್ಟಿಗೆ ಕೆಲಸ ಮಾಡುತ್ತಿದ್ದೇನೆ. ''ರಾಗ'' ಚಿತ್ರದ ನನ್ನ ಪಾತ್ರಕ್ಕೆ ಎಲ್ಲಾ ಕಡೆ ಮೆಚ್ಚುಗೆ ವ್ಯಕ್ತವಾಗಿತ್ತು. ಈಗ ''ಮಹಾನ್'' ಚಿತ್ರದಲ್ಲೂ ಪ್ರಮುಖ ಪಾತ್ರದಲ್ಲಿ ಅಭಿನಯಿಸುತ್ತಿದ್ದೇನೆ. ನಿರ್ದೇಶಕರು ಈ ಚಿತ್ರದ ಕಥೆ ಹೇಳಿದ ತಕ್ಷಣ ಇಷ್ಟವಾಗಿ ನಟಿಸಲು ಒಪ್ಪಿಕೊಂಡೆ. ನಿರ್ಮಾಪಕ ಪ್ರಕಾಶ್ ಬುದ್ದೂರು ಅವರು ಇಂತಹ ಉತ್ತಮ ಕಥಾಹಂದರ ಹೊಂದಿರುವ ಚಿತ್ರವನ್ನು ನಿರ್ಮಾಣ ಮಾಡುತ್ತಿರುವುದು ಹಾಗೂ ನಟ ವಿಜಯ ರಾಘವೇಂದ್ರ, ಬಹಳ ಅದ್ಭುತವಾದ ನಟ. ಅವರೊಂದಿಗೆ ನಟಿಸುತ್ತಿರುವಿದು ಬಹಳ ಖುಷಿಯಾಗಿದೆ. ಸಾಮಾಜಿಕ ಕಳಕಳಿಯುಳ್ಳ ಕಥಾಹಂದರ ಹೊಂದಿರುವ ಚಿತ್ರವನ್ನು ಪಿ.ಸಿ.ಶೇಖರ್ ನಿರ್ದೇಶಿಸುತ್ತಿದ್ದು, ಈ ಚಿತ್ರದಲ್ಲಿ ವಿಜಯ ರಾಘವೇಂದ್ರ ಅವರಿಗೆ ಹೇಳಿ ಮಾಡಿಸಿದ ಪಾತ್ರವಿದೆ. ನನ್ನ ಪಾತ್ರ ಕೂಡ ನಾಯಕನ ಪಾತ್ರದ ಜೊತೆಗೆ ಸಾಗುತ್ತದೆ. ನಮ್ಮಿಬ್ಬರ ಕಾಂಬಿನೇಶನ್ ಪ್ರೇಕ್ಷಕರಿಗೆ ಇಷ್ಟವಾಗುತ್ತದೆ ಎನ್ನುತ್ತಾರೆ ನಟ ಮಿತ್ರ.

ನನ್ನ ಹಾಗೂ ಮಿತ್ರ ಅವರ ಕಾಂಬಿನೇಶನ್ ನಲ್ಲಿ ಬಂದ ''ರಾಗ'' ಚಿತ್ರ ಇಂದು ಕೂಡ ಜನಪ್ರಿಯ. ಆನಂತರ ನನ್ನ ನಿರ್ದೇಶನದ ಚಿತ್ರಗಳಲ್ಲಿ ಮಿತ್ರ ಅವರು ನಟಿಸಿಲ್ಲ. ಏಕೆಂದರೆ, ಮಿತ್ರ ಅವರು ಸಣ್ಣ ಪುಟ್ಟ ಪಾತ್ರದಲ್ಲಿ ನನ್ನ ನಿರ್ದೇಶನದ ಚಿತ್ರದಲ್ಲಿ ಅಭಿನಯಿಸುವುದು ನನಗೆ ಇಷ್ಟವಿಲ್ಲ. ''ರಾಗ'' ಚಿತ್ರದ ಅಭಿನಯಕ್ಕಾಗಿ ಮಿತ್ರ ಅವರಿಗೆ ರಾಜ್ಯ ಪ್ರಶಸ್ತಿ ಬಂದಿತ್ತು. ಆ ಚಿತ್ರದಲ್ಲಿ ಅಂತಹ ಅದ್ಭುತ ನಟನೆ ನೀಡಿದ್ದ ಮಿತ್ರ ಅವರಿಗೆ ''ಮಹಾನ್'' ಚಿತ್ರದಲ್ಲೂ ಎಲ್ಲರ ನೆನಪಿನಲ್ಲುಳಿಯುವಂತ ಪಾತ್ರ ಇರುತ್ತದೆ. ಚಿತ್ರಕಥೆ ಬರೆಯುವಾಗ ಈ ಪಾತ್ರಕ್ಕೆ ಮಿತ್ರ ಅವರೆ ಸೂಕ್ತ ಎನಿಸಿತು. ಅವರಿಗೆ ಸರಿಯಾದ ಪಾತ್ರವಿದು. ಇಡೀ ಚಿತ್ರ ಪೂರ್ತಿ ನಾಯಕನ ಪಾತ್ರದ ಜೊತೆಗೆ ಸಾಗುವ ಪಾತ್ರ ಅವರದು. ಕುರುಕ್ಷೇತ್ರದಲ್ಲಿ ಅರ್ಜುನನ ಜೊತೆಗೆ ಶ್ರೀಕೃಷ್ಣ ಸದಾ ಇರುತ್ತಾನೆ. ಆ ಸ್ಫೂರ್ತಿಯಿಂದ ಈ ಎರಡು ಪಾತ್ರಗಳನ್ನು ಹೆಣೆಯಲಾಗಿದೆ. ''ಮಹಾನ್'' ಚಿತ್ರದ ಮಿತ್ರ ಅವರ ಪಾತ್ರ ಕೂಡ ಎಲ್ಲರ ಮನಸ್ಸಿಗೂ ಇಷ್ಟವಾಗುತ್ತದೆ ಎಂದು ನಿರ್ದೇಶಕ ಪಿ.ಸಿ.ಶೇಖರ್ ತಿಳಿಸಿದ್ದಾರೆ.

ತಮ್ಮ ಸಂಸ್ಥೆಯ ಮೊದಲ ನಿರ್ಮಾಣದ ಚಿತ್ರದಲ್ಲಿ ಮಿತ್ರ ಅವರಂತಹ ಅನುಭವಿ ನಟರು ಅಭಿನಯಿಸುತ್ತಿರುವುದಕ್ಕೆ ನಿರ್ಮಾಪಕ ಪ್ರಕಾಶ್ ಬುದ್ದೂರು ಸಂತಸ ವ್ಯಕ್ತಪಡಿಸಿದ್ದಾರೆ.

# ಪುನೀತ್ ಬಿಟ್ಟ ಆ ಚಿತ್ರ ಗಣೇಶ್‌ಗೆ ಸಿಕ್ತು ರಾತ್ರೋ ರಾತ್ರಿ ಸೂಪರ್ ಸ್ಟಾರ್ ಆದರು..



ಗೋಲ್ಡನ್ ಸ್ಟಾರ್ ಗಣೇಶ್ ಅವರು ಹಲವು ಸೂಪರ್ ಹಿಟ್ ಚಿತ್ರಗಳನ್ನು ನೀಡಿದ್ದಾರೆ. ಕಿರುತೆರೆಯಲ್ಲಿ ಗುರುತಿಸಿಕೊಂಡಿದ್ದ ಅವರು ಈಗ ಹಿರಿತೆರೆಯಲ್ಲಿ ಮಿಂಚುತ್ತಿದ್ದಾರೆ. ಗಣೇಶ್ ಅವರ ಬದುಕು ಬದಲಿಸಿದ್ದು 'ಮುಂಗಾರು ಮಳೆ' ಚಿತ್ರ. ಈ ಸಿನಿಮಾದಲ್ಲಿ ಪುನೀತ್ ರಾಜ್ ಕುಮಾರ್ ಅವರು ನಟಿಸಬೇಕಿತ್ತು. ಆದರೆ, ಈ ಚಿತ್ರವು ಗಣೇಶ್ ಅವರ ಕೈ ಸೇರಿತು ಮತ್ತು ಸೂಪರ್ ಹಿಟ್ ಆಯಿತು. ಆ ಬಗ್ಗೆ ಇಲ್ಲಿದೆ ವಿವರ.

ಯೋಗರಾಜ್ ಭಟ್ ಅವರು 'ಮುಂಗಾರು ಮಳೆ' ಚಿತ್ರವನ್ನು ಮಾಡಲು ನಿರ್ಧರಿಸಿದ್ದರು. ಈ ಸಿನಿಮಾ ಅಷ್ಟು ದೊಡ್ಡ ಹಿಟ್ ಆಗುತ್ತದೆ ಎಂದು ಅವರು ಕೂಡ ಅಂದುಕೊಂಡು ಇರಲಿಲ್ಲ. ಈ ಸಿನಿಮಾದಲ್ಲಿ ಪುನೀತ್ ರಾಜ್ ಕುಮಾರ್ ಅವರು ನಟಿಸಬೇಕಿತ್ತು. ಈ ಸಿನಿಮಾದ ಕಥೆಯನ್ನು ರಾಘಣ್ಣ ಮತ್ತು ಪುನೀತ್ ಕಥೆ ಕೂಡ ಕೇಳಿದ್ದರು. ಆದರೆ, ಪುನೀತ್ ಈ ಚಿತ್ರವನ್ನು ಮಾಡದಿರಲು ನಿರ್ಧರಿಸಿದರು.

'ನಾವು ಆರೆಂಟು ನಿರ್ಮಾಪಕರಿಗೆ ಹೇಳಿದ್ದೆವು. ಸಿನಿಮಾಗೆ ಏನು ಬೇಕೋ ಅದು ಇದೆ ಎಂದು ಅಪ್ಪು ಹಾಗೂ ರಾಘಣ್ಣ ಹೇಳಿದರು. ಈಗ ಪುನೀತ್ ಅವರ ಇಮೇಜ್ ಗೆ ತಕ್ಕಂತೆ ಸಿನಿಮಾ ಮಾಡಲು ಹೋಗಿ ಕಥೆಯನ್ನು ಗಬ್ಬೆಬಿಸಬೇಡಿ ಎಂದು ಅಪ್ಪು ಕೋರಿಕೊಂಡರು. ಹೊಸಬರನ್ನು ಹಾಕಿಕೊಂಡು ಸಿನಿಮಾ ಮಾಡಿ ಎಂದು ಸಜೇಶನ್ ಕೊಟ್ಟರು. ಅವರು ಕೊಟ್ಟಿದ್ದು ಅರ್ಥಪೂರ್ಣ ನಿರ್ದೇಶನ ಆಗಿತ್ತು' ಎಂದಿದ್ದಾರೆ ಅವರು.

ಪುನೀತ್ ರಾಜ್ ಕುಮಾರ್ ಅವರೇ ಮುಂಗಾರು ಮಳೆಯನ್ನು ಮಾಡಿದ್ದರೆ ಅವರ ಹೆಸರಿಗೆ ಮತ್ತೊಂದು ಯಶಸ್ಸು ಸೇರ್ಪಡೆ ಆಗಿರುತ್ತಿತ್ತು. ಆದರೆ, ಅವರು ಅದನ್ನು ಮಾಡಲಿಲ್ಲ. ಹೊಸಬರಿಗೆ ಬರಲು ಅವಕಾಶ ಮಾಡಿಕೊಟ್ಟರು. ಪುನೀತ್ ರಾಜ್ ಕುಮಾರ್ ಅವರು ಈ ಸಿನಿಮಾವನ್ನು ಬಿಡದೆ ಇದ್ದಿದ್ದರೆ ಅದು ಗಣೇಶ್ ಗೆ ಸಿಗುತ್ತಿರಲಿಲ್ಲವೇನೋ. ಇಂದು ಗಣೇಶ್ ಸೂಪರ್ ಹಿಟ್ ಆಗಲು ಅವರು ಕೂಡ ಒಂದು ಕಾರಣ ಆದರು.

ಗಣೇಶ್ ಅವರು ಸದ್ಯ ಹಲವು ಹಿಟ್ ಚಿತ್ರಗಳನ್ನು ನಡೆದಿದ್ದಾರೆ. ಕಳೆದ ವರ್ಷ ಬಂದ 'ಕೃಷ್ಣಂ ಪ್ರಣಯ ಸಖಿ' ಚಿತ್ರವು ಸೂಪರ್ ಹಿಟ್ ಆಯಿತು. ಈ ಚಿತ್ರ ಗಮನ ಸೆಳೆದಿತ್ತು. ಸಿನಿಮಾದ ಹಾಡುಗಳು ಹಿಟ್ ಆಯಿತು. ಈಗ 'ಪಿನಾಕ' ಹಾಗೂ 'ಯುವರ್ ಸಿನ್ಸಿಯರ್ಲಿ' ಚಿತ್ರದಲ್ಲಿ ತೊಡಗಿಕೊಂಡಿದ್ದಾರೆ.

# ದಾಖಲೆ ಬರೆದ ಬ್ಯಾಂಗಲ್ ಬಂಗಾರಿ




ಎಕ್ಕ ಸಿನಿಮಾದ ಬ್ಯಾಂಗಲ್ ಬಂಗಾರಿ ಹಾಡಿಗೆ ಭರ್ಜರಿ ರೆಸ್ಪಾನ್ಸ್ ಸಿಕ್ಕಿದೆ. ಈ ಗೀತೆ ಎಲ್ಲೆಡೆ ವೈರಲ್ ಆಗಿದ್ದು, ಅನೇಕ ಸೆಲೆಬ್ರಿಟಿಗಳು ಹಾಡಿಗೆ ಡ್ಯಾನ್ಸ್ ಮಾಡಿದ್ದಾರೆ. ನಾಯಕ ಯುವರಾಜ್ ಕುಮಾರ್ ಹಾಗೂ ನಾಯಕಿ ಸಂಜನಾ ಆನಂದ್ ಬ್ಯಾಂಗಲ್ ಬಂಗಾರಿ ಅಂತಾ ಕುಣಿದು ಕುಪ್ಪಳಿಸಿದ್ದರು.

ನಾಗಾರ್ಜುನ್ ಶರ್ಮಾ ಸಾಹಿತ್ಯ ಬರೆದ ಹಾಡಿಗೆ ಆಂತೋನಿ ದಾಸ್ ಕಂಠ ಕುಣಿಸಿದ್ದರು. ಚರಣ್ ರಾಜ್ ಸಂಗೀತ, ಯುವ-ಸಂಜನಾ ಕುಣಿದ ಬಂಗಾಲ್ ಬಂಗಾರಿ ಗೀತೆ ಸಖತ್ ಹಿಟ್ ಕಂಡಿದೆ. ಕೇವಲ 22 ದಿನಗಳಲ್ಲಿ ಬರೋಬ್ಬರಿ 10 ಮಿಲಿಯನ್ ವೀಕ್ಷಣೆ ಕಂಡಿರುವ ಹಾಡು, ಟಾಪ್ ಮ್ಯೂಸಿಕ್ ವಿಡಿಯೋ ಕೆಟಗರಿಯಲ್ಲಿ 29ನೇ ಸ್ಥಾನ ಪಡೆದಿದೆ. ಅತಿ ಕಡಿಮೆ ಸಮಯದಲ್ಲಿ ಬ್ಯಾಂಗಲ್ ಬಂಗಾರಿ ದಾಖಲೆ ಬರೆದಿದ್ದು, ಚಿತ್ರತಂಡದ ಖುಷಿಗೆ ಕಾರಣವಾಗಿದೆ.

ನಾಯಕಿ ಸಂಜನಾ ಆನಂದ್ ಇಲ್ಲಿ ಬ್ಯಾಂಗಲ್ ಬಂಗಾರಿ ಆಗಿದ್ದಾರೆ. ಯವರಾಜ್ ಕುಮಾರ್ ಲೈಫ್ ಅಲ್ಲಿ ಬರೋ ಈ ಬಂಗಾರಿಗೆ ಬ್ಯಾಂಗಲ್ ತೊಡಿಸಿದಾಗ ಶುರು ಆಗೋ ಹಾಡು ಇದಾಗಿದೆ. ಸಂಭ್ರಮಾಚರಣೆಯ ಕ್ಷಣದ ಈ ಗೀತೆಗೆ ಮುರಳಿ ಮಾಸ್ಟರ್ ಒಳ್ಳೆ ಸ್ಟೆಪ್‌ಗಳನ್ನೇ ಕಂಪೋಸ್ ಮಾಡಿದ್ದಾರೆ.

ಎಕ್ಕ ಚಿತ್ರಕ್ಕೆ ರೋಹಿತ್ ಪದಕಿ ನಿರ್ದೇಶನ ಮಾಡಿದ್ದಾರೆ. ಚರಣ್ ರಾಜ್ ಸಂಗೀತದ ಮೋಡಿ ಇಡೀ ಚಿತ್ರಕ್ಕಿದೆ. ಅಶ್ವಿನಿ ಪುನೀತ್ ರಾಜ್‌ಕುಮಾರ್, ಜಯಣ್ಣ, ಕಾರ್ತಿಕ್ ಗೌಡ ಒಟ್ಟಿಗೆ ಸೇರಿ ಈ ಚಿತ್ರವನ್ನ ನಿರ್ಮಿಸಿದ್ದಾರೆ. ಚಿತ್ರದಲ್ಲಿ ಡೆಡ್ಲಿ ಸೋಮ ಖ್ಯಾತಿಯ ನಟ ಆದಿತ್ಯ ನಟಿಸಿದ್ದಾರೆ. ಬಾಲಿವುಡ್‌ನ ಅತುಲ್ ಕುಲಕರ್ಣಿ ಕೂಡ ನಟಿಸಿದ್ದಾರೆ. ಇವರಲ್ಲದೇ ಈ ಚಿತ್ರದಲ್ಲಿ ಸಂಜನಾ ಆನಂದ್, ಸಂಪದಾ ಸೇರಿ ಇಬ್ಬರು ನಾಯಕಿಯರಿದ್ದಾರೆ. ಯುವರಾಜ್ ಕುಮಾರ್ ಎರಡನೇ ಸಿನಿಮಾ ಇದಾಗಿದೆ.

# ಉದಯಪುರದಲ್ಲಿ ಭರ್ಜರಿ ಡೆವಿಲ್ ಮೇಕಿಂಗ್!



ಚಾಲೆಂಜಿಂಗ್‌ಸ್ಟಾರ್ ದರ್ಶನ್ ಅಭಿನಯದ ಬಹು ನಿರೀಕ್ಷಿತ ಸಿನಿಮಾ ಡೆವಿಲ್ ಚಿತ್ರೀಕರಣ ಅದ್ದೂರಿಯಾಗಿ ನಡೆಯುತ್ತಿದೆ. ಮಾತಿನ ಭಾಗದ ಶೂಟಿಂಗ್ ಬಹುತೇಕ ಮುಗಿದಿದ್ದು, ಡ್ಯಾನ್ಸ್ ಹಾಗೂ ಫೈಟಿಂಗ್ ಸೀಕ್ವೆನ್ಸ್ ಮಾತ್ರ ಬಾಕಿ ಉಳಿದಿದೆ. ರೇಣುಕಾಸ್ವಾಮಿ ಕೊಲೆ ಕೇಸ್‌ನಲ್ಲಿ ದರ್ಶನ್ ಜೈಲು ಸೇರಿದ್ಮೇಲೆ ಅರ್ಧಕ್ಕೆ ನಿಂತಿದ್ದ ಸಿನಿಮಾದ ಶೂಟಿಂಗ್ ಮುಕ್ತಾಯ ಹಂತಕ್ಕೆ ಬಂದು ನಿಂತಿದೆ. ಇದೇ ಹೊತ್ತಿನಲ್ಲೇ ಡೆವಿಲ್ ಸಿನಿಮಾದ ಮೇಕಿಂಗ್ ವಿಡಿಯೋವೊಂದನ್ನ ಬಿಡುಗಡೆ ಮಾಡಿದೆ ಚಿತ್ರತಂಡ. ಈ ಮೊದಲು ಟೀಸರ್ ಹಾಗೂ ಹುಟ್ಟುಹಬ್ಬ ಗ್ಲಿಂಪ್ಸ್ ಬಿಡುಗಡೆ ಮಾಡಿದ್ದ ಡೆವಿಲ್ ಚಿತ್ರತಂಡ, ಉದಯಪುರದಲ್ಲಿ ಚಿತ್ರೀಕರಿಸಿದ ಸಾಹಸ ಸನ್ನಿವೇಶ ಸೇರಿದಂತೆ ಕೆಲ ದೃಶ್ಯಗಳನ್ನು ರಿವೀಲ್ ಮಾಡಿದೆ ಡೆವಿಲ್ ಚಿತ್ರತಂಡ.

ರಾಜಸ್ತಾನದ ಉದಯಪುರದಲ್ಲಿ ಚಿತ್ರೀಕರಣದ ವೇಳೆ ದರ್ಶನ್ ಪತ್ನಿ ವಿಜಯಲಕ್ಷ್ಮಿಗೆ ಕೂಡಾ ಭಾಗಿಯಾಗಿದ್ದರು. ಅಲ್ಲದೇ ಈ ಭಾಗದ ಚಿತ್ರೀಕರಣದಲ್ಲಿ ನಟ ಅಚ್ಯುತ್‌ಕುಮಾರ್, ಶರ್ಮಿಳಾ ಮಾಂಡ್ರೆ, ನಾಯಕಿ ರಚನಾ ರೈ ಕೂಡಾ ಭಾಗಿಯಾಗಿದ್ದಾರೆ. ಆ ದೃಶ್ಯವಿರುವ ವಿಡಿಯೋವನ್ನ ರಿಲೀಸ್ ಮಾಡಿದೆ ಡೆವಿ ಚಿತ್ರತಂಡ. ವಿಡಿಯೋ ನೋಡಿ ದರ್ಶನ್ ಫ್ಯಾನ್ಸ್ ಖುಷಿಯಿಂದ ಕುಣಿದಾಡಿದ್ದಾರೆ.

ಸಾಂಗ್ ಹಾಗೂ ಕೆಲ ಸಾಹಸ ದೃಶ್ಯಗಳ ಚಿತ್ರೀಕರಣಕ್ಕಾಗಿ ಚಿತ್ರತಂಡ ವಿದೇಶಕ್ಕೆ ಹೋಗಲು ಪ್ಲ್ಯಾನ್ ಕೂಡಾ ಮಾಡಿಕೊಂಡಿದೆ. ಅಲ್ಲದೇ ಕೋರ್ಟ್‌ನಿಂದ ದರ್ಶನ್ ಅನುಮತಿ ಪಡೆದುಕೊಂಡಿದ್ದು, ಸದ್ಯದಲ್ಲಿಯೇ ವಿದೇಶಕ್ಕೆ ಹಾರಲಿದೆ ಡೆವಿಲ್ ಟೀಂ. ದುಬೈ ಹಾಗೂ ಯುರೋಪ್‌ನ ಕೆಲ ಭಾಗದಲ್ಲಿ ಚಿತ್ರೀಕರಣ ಮಾಡಲು ಡೆವಿಲ್ ಚಿತ್ರತಂಡ ಯೋಜನೆ ಹಾಕಿಕೊಂಡಿದೆ.

# ಕೊಹ್ಲಿ ಹಾದಿ ಅನುಸರಿಸಿದ ಸಿರಾಜ್

## ದೊಡ್ಡ ರೆಸ್ಟೋರೆಂಟ್ ತೆರೆದ ಆಟೋ ಡ್ರೈವರ್ ಮಗ






ಭಾರತದ ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಕ್ರಿಕೆಟ್ ಮೈದಾನದ ಹೊರಗೆ ಹೊಸ ಇನ್ನಿಂಗ್ಸ್ ಆರಂಭಿಸಿದ್ದಾರೆ. ಅವರು ತಮ್ಮ ತವರು ಹೈದರಾಬಾದ್‌ನಲ್ಲಿ 'ಜೋಹರ್ಫಾ' ಎಂಬ ಹೆಸರಿನ ತಮ್ಮ ಮೊದಲ ರೆಸ್ಟೋರೆಂಟ್ ತೆರೆದಿದ್ದಾರೆ. ಒಂದೆಡೆ, ಇಂಗ್ಲೆಂಡ್ ವಿರುದ್ಧ ನಡೆಯುತ್ತಿರುವ ಟೆಸ್ಟ್ ಸರಣಿಯಲ್ಲಿ ಟೀಮ್ ಇಂಡಿಯಾ ಪರ ಬೌಲಿಂಗ್ ಮಾಡುವ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರೆ ಮತ್ತೊಂದೆಡೆ, ಸಿರಾಜ್ ಈಗ ಉದ್ಯಮಿಯೂ ಆಗಿದ್ದಾರೆ. ನನಗೆ ಗೌರವ ನೀಡಿದ ನಗರಕ್ಕೆ ಏನನ್ನಾದರೂ ಮರಳಿ ನೀಡಲು ಮುಂದಾಗಿದ್ದೇನೆ ಎಂದು ಸಿರಾಜ್ ಹೇಳಿದ್ದಾರೆ.

**ವಿವಿಧ ರೀತಿಯ ಬಗೆಬಗೆಯ ಆಹಾರ:** ಹೈದರಾಬಾದ್‌ನ ಹೃದಯಭಾಗದಲ್ಲಿರುವ ಜೋಹರ್ಫಾ ರೆಸ್ಟೋರೆಂಟ್, ಪ್ರಸಿದ್ಧ ಚೀನೀ ಭಕ್ಷ್ಯಗಳೊಂದಿಗೆ ಮೊಘಲಾಯಿ, ಪರ್ಷಿಯನ್ ಮತ್ತು ಅರೇಬಿಯನ್ ಆಹಾರವನ್ನು ಒದಗಿಸುತ್ತದೆ. ಈ ರೆಸ್ಟೋರೆಂಟ್ ತನ್ನ ಹೃದಯಕ್ಕೆ ತುಂಬಾ ಹತ್ತಿರವಾಗಿದೆ ಎಂದು ಸಿರಾಜ್ ಹೇಳಿದರು. ''ಜೋಹರ್ಫಾ ನನ್ನ ಹೃದಯಕ್ಕೆ ತುಂಬಾ ಹತ್ತಿರವಾಗಿದೆ. ಹೈದರಾಬಾದ್ ನನಗೆ ನನ್ನ ಗುರುತನ್ನು ನೀಡಿದೆ. ಈ ರೆಸ್ಟೋರೆಂಟ್ ಈ ನಗರಕ್ಕೆ ಏನನ್ನಾದರೂ ಮರಳಿ ನೀಡುವ ನನ್ನ ಮಾರ್ಗವಾಗಿದೆ. ಇಲ್ಲಿ ಜನರು ಒಟ್ಟಿಗೆ ಸೇರಬಹುದು, ಆಹಾರವನ್ನು ಸೇವಿಸಬಹುದು ಮತ್ತು ಮನೆಯಲ್ಲಿರುವಂತೆ ಅನುಭವ ಪಡೆಯಬಹುದು'' ಎಂದು ಸಿರಾಜ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಉತ್ತಮ ಅಡುಗೆಯವರ ತಂಡ:** ಈ ರೆಸ್ಟೋರೆಂಟ್ ಅನುಭವಿ ಅಡುಗೆಯವರ ತಂಡವನ್ನು ಹೊಂದಿದೆ. ಈ ಅಡುಗೆಯವರು ಸಾಂಪ್ರದಾಯಿಕ ರೀತಿಯಲ್ಲಿ ಅಡುಗೆ ಮಾಡುವಲ್ಲಿ ಪರಿಣಿತರು. ಅವರು ತಾಜಾ ಮತ್ತು ಉತ್ತಮ ಗುಣಮಟ್ಟದ ಪದಾರ್ಥಗಳನ್ನು ಬಳಸುತ್ತಾರೆ. ಈ ಹೆಜ್ಜೆಯೊಂದಿಗೆ, ಸಿರಾಜ್ ಸಚಿನ್ ತೆಂಡೂಲ್ಕರ್, ಸೌರವ್ ಗಂಗೂಲಿ ಮತ್ತು ವಿರಾಟ್ ಕೊಹ್ಲಿಯಂತಹ ಆಟಗಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದಾರೆ. ಇವರೆಲ್ಲರೂ ಈ ಹಿಂದೆ ಆಹಾರ ಮತ್ತು ಹೋಟೆಲ್ ಉದ್ಯಮದಲ್ಲಿ ಹೂಡಿಕೆ ಮಾಡಿದ್ದಾರೆ.

**ಎರಡನೇ ಟೆಸ್ಟ್‌ನಲ್ಲಿ ಸಿರಾಜ್ ಮೇಲೆ ಜವಾಬ್ದಾರಿ:** ಕ್ರಿಕೆಟ್ ಬಗ್ಗೆ ಹೇಳುವುದಾದರೆ, ಜಸ್ಪ್ರೀತ್ ಬುಮ್ರಾ ಇಂಗ್ಲೆಂಡ್ ವಿರುದ್ಧದ ಎರಡನೇ ಟೆಸ್ಟ್ ಪಂದ್ಯದಲ್ಲಿ ಆಡುವುದು ಅನುಮಾನ ಎನ್ನಲಾಗಿದೆ. ಬುಮ್ರಾ ಐದೂ ಟೆಸ್ಟ್ ಪಂದ್ಯಗಳಲ್ಲೂ ಆಡುವುದಿಲ್ಲ ಎಂದು ಮುಖ್ಯ ಕೋಚ್ ಗೌತಮ್ ಗಂಭೀರ್ ಈಗಾಗಲೇ ಹೇಳಿದ್ದರು. ಮೂರನೇ ಟೆಸ್ಟ್ ಪಂದ್ಯಕ್ಕೂ ಮುನ್ನ ಕೇವಲ ಮೂರು ದಿನಗಳ ವಿರಾಮವಿದೆ. ಆದ್ದರಿಂದ, ಎರಡನೇ ಟೆಸ್ಟ್ ಪಂದ್ಯವು ಬುಮ್ರಾಗೆ ವಿಶ್ರಾಂತಿ ನೀಡಲು ಸರಿಯಾದ ಅವಕಾಶವಾಗಿದೆ.

ಅಂತಹ ಪರಿಸ್ಥಿತಿಯಲ್ಲಿ, ಎಲ್ಲರ ಕಣ್ಣುಗಳು ಮೊಹಮ್ಮದ್ ಸಿರಾಜ್ ಮೇಲೆ ಇರುತ್ತವೆ. ಅವರು ತಂಡದ ಅತ್ಯಂತ ಹಿರಿಯ ವೇಗದ ಬೌಲರ್ ಆಗಿದ್ದಾರೆ. ಹೆಡಿಂಗ್ಲಿಯಲ್ಲಿ ನಡೆದ ಮೊದಲ ಟೆಸ್ಟ್ ಪಂದ್ಯದಲ್ಲಿ ಸಿರಾಜ್ ಪ್ರದರ್ಶನ ನಿರೀಕ್ಷೆಯಂತೆ ಇರಲಿಲ್ಲ. ಅವರು 41 ಓವರ್‌ಗಳಲ್ಲಿ ಕೇವಲ ಎರಡು ವಿಕೆಟ್‌ಗಳನ್ನು ಪಡೆದರು. ಈಗ ಬುಮ್ರಾ ಕೂಡ ಇಲ್ಲದ ಕಾರಣ ಟೀಮ್ ಇಂಡಿಯಾ ಮೊಹಮ್ಮದ್ ಸಿರಾಜ್ ಮೇಲೆ ಅವಲಂಬಿತವಾಗಿದ್ದು, ಎರಡನೇ ಟೆಸ್ಟ್‌ನಲ್ಲಿ ಕಮಾಲ್ ಮಾಡಬೇಕಾದ ಒತ್ತಡದಲ್ಲಿದ್ದಾರೆ.

# ಮಿಂಚಿದ ಜೆಮಿಮಾ, ಅಮನ್ಜೋತ್: ಭಾರತಕ್ಕೆ ಭರ್ಜರಿ ಜಯ



ಇಂಗ್ಲೆಂಡ್ ಮಹಿಳಾ ತಂಡದ ವಿರುದ್ಧದ 2ನೇ ಟಿ20 ಪಂದ್ಯದಲ್ಲಿ ಭಾರತ ಮಹಿಳಾ ತಂಡ ಭರ್ಜರಿ ಜಯ ಸಾಧಿಸಿದೆ. ಬ್ರಿಸ್ಟಲ್‌ನ ಕೌಂಟಿ ಗ್ರೌಂಡ್‌ನಲ್ಲಿ ನಡೆದ ಈ ಪಂದ್ಯದಲ್ಲಿ ಟಾಸ್ ಗೆದ್ದ ಇಂಗ್ಲೆಂಡ್ ಬೌಲಿಂಗ್ ಆಯ್ದುಕೊಂಡಿದ್ದರು. ಅದರಂತೆ ಮೊದಲು ಬ್ಯಾಟ್ ಮಾಡಿದ ಟೀಮ್ ಇಂಡಿಯಾ ಉತ್ತಮ ಆರಂಭ ಪಡೆದಿರಲಿಲ್ಲ. ಆರಂಭಿಕರಾಗಿ ಕಣಕ್ಕಿಳಿದ ಸ್ಮೃತಿ ಮಂಧಾನ (13) ಹಾಗೂ ಶಫಾಲಿ ವರ್ಮಾ (3) ಬೇಗನೆ ವಿಕೆಟ್ ಒಪ್ಪಿಸಿದ್ದರು. ಇನ್ನು ನಾಯಕಿ ಹರ್ಮನ್ ಪ್ರೀತ್ ಕೌರ್ 1 ರನ್ ಗಳಿಸಿ ಔಟಾದರು.

ಕೇವಲ 31 ರನ್ ಗಳಿಗೆ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ್ದ ಟೀಮ್ ಇಂಡಿಯಾಗೆ ಆಸರೆಯಾಗಿ ನಿಂತದ್ದು ಜೆಮಿಮಾ ರೊಡ್ರಿಗಸ್ ಹಾಗೂ ಅಮನ್ಜೋತ್ ಕೌರ್. 4ನೇ ವಿಕೆಟ್‌ಗೆ ಜೊತೆಗೂಡಿದ ಈ ಜೋಡಿ ಬರೋಬ್ಬರಿ 93 ರನ್‌ಗಳ ಜೊತೆಯಾಟವಾಡಿದರು.

ಇದರ ನಡುವೆ ಜೆಮಿಮಾ 41 ಎಸೆತಗಳಲ್ಲಿ 1 ಸಿಕ್ಸ್ ಹಾಗೂ 9 ಫೋರ್ ಗಳೊಂದಿಗೆ 63 ರನ್ ಬಾರಿಸಿದರೆ, ಅಮನ್ಜೋತ್ ಕೌರ್ 40 ಎಸೆತಗಳಲ್ಲಿ 9 ಫೋರ್ ಗಳೊಂದಿಗೆ ಅಜೇಯ 63 ರನ್ ಗಳಿಸಿದರು. ಈ ಮೂಲಕ ಟೀಮ್ ಇಂಡಿಯಾ 20 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 181 ರನ್ ಕಲೆಹಾಕಿತು.

182 ರನ್ ಗಳ ಗುರಿ ಬೆನ್ನತ್ತಿದ ಇಂಗ್ಲೆಂಡ್ ತಂಡವು 17 ರನ್ ಗಳಿಸುವಷ್ಟರಲ್ಲಿ 3 ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಕಣಕ್ಕಿಳಿದ ಟಾಮಿ ಬ್ಯೂಮಾಂಟ್ 54 ರನ್ ಗಳಿಸಿದರೆ, ಆಮಿ ಜೋನ್ಸ್ 32 ರನ್ ಬಾರಿಸಿದರು. ಇದಾಗ್ಯೂ ಉಳಿದ ಬ್ಯಾಟರ್‌ಗಳಿಂದ ನಿರೀಕ್ಷಿತ ಪ್ರದರ್ಶನ ಮೂಡಿಬಂದಿರಲಿಲ್ಲ. ಪರಿಣಾಮ ಇಂಗ್ಲೆಂಡ್ ತಂಡವು 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 157 ರನ್ ಗಳಿಸಲಷ್ಟೇ ಶಕ್ತರಾದರು. ಈ ಮೂಲಕ ಟೀಮ್ ಇಂಡಿಯಾ 24 ರನ್ ಗಳ ಭರ್ಜರಿ ಜಯ ಸಾಧಿಸಿದೆ.

## ಮುಂದಿನ ಸಿಎಂ ಡಿಕೆಶಿ: ಸಾಕಷ್ಟು ಸಂಖ್ಯಾ ಬಲವೂ ಇದೆ

# ಇಕ್ಬಾಲ್ ಹುಸೇನ್ ಬಾಂಬ್



**ಬೆಂಗಳೂರು:** ಸಿದ್ದು ಫುಲ್ ಟರ್ಮ್ ಸಿಎಂ ಅಸ್ತ್ರಕ್ಕೆ ಡಿಕೆಶಿ ನೆಕ್ಸ್ಟ್ ಸಿಎಂ ಬ್ರಹ್ಮಾಸ್ತ್ರ ಬಿಡುತ್ತಾರೆ. ಡಿಸಿಎಂ ಡಿಕೆಶಿಗೆ ಸಂಖ್ಯಾಬಲ ಜಾಸ್ತಿಯಿದೆ ಎಂದು ರಾಮನಗರ ಶಾಸಕ ಇಕ್ಬಾಲ್ ಹುಸೇನ್ ಬಾಂಬ್ ಸಿಡಿಸಿದ್ದಾರೆ.

ಹೌದು, ರಾಜ್ಯ ಕಾಂಗ್ರೆಸ್‌ನಲ್ಲಿ ನೀವು ಮಾತಾಡಿದರೆ ನಾವು ಮಾತನಾಡುತ್ತೇವೆ ಎಂಬ ಮುಯ್ಯಿಗೆ ಮುಯ್ಯಿ ಪಾಲಿಟಿಕ್ಸ್ ಶುರುವಾಗಿದೆ. ಸಿದ್ದು ಟೀಂ ಮೇಲೆ ಇಕ್ಬಾಲ್ ಹುಸೇನ್ ಬಲಾಬಲ ಬ್ರಹ್ಮಾಸ್ತ್ರ ಬಿಟ್ಟಿದ್ದಾರೆ. ಇತ್ತ ಸುರ್ಜೇವಾಲಾ ವಾರ್ನ್ ಮಾಡಿದ್ದು, ನೀವು ಕೈ ಹಿಡಿದು ನಿಂತಿದ್ದು ಸರಿ. ನಿಮ್ಮ ಆಪ್ತರ ರಿಪೇರಿ ಯಾವಾಗ ಎಂದು ಪ್ರಶ್ನಿಸಿದ್ದಾರೆ.

ಯಾರೇ ಕೂಗಾಡಲಿ, ಯಾರೇ ವಾರ್ನ್ ಮಾಡ್ಲಿ, ನಾವ್ ಏನ್ ಹೇಳ್ಬೇಕೋ ಹೇಳ್ತೀವಿ. ಇದು ಕಾಂಗ್ರೆಸ್ ಒಳಗಿನ ಎಸ್‌ಟೀಂ, ಡಿಟೀಂ, ಡಿಸಿಎಂ ಸಿಎಂ ಆಗ್ಬೇಕು, ಆಗುತ್ತಾರೆ ಎಂದು ಇಕ್ಬಾಲ್ ಹುಸೇನ್ ತುಪ್ಪ ಸುರಿಯುತ್ತಲೇ ಇದ್ದಾರೆ. ಸಿದ್ದರಾಮಯ್ಯ ಆಪ್ತ ಸಚಿವರು, ಶಾಸಕರು ಫುಲ್ ಟರ್ಮ್ ಸಿಎಂ ಅಸ್ತ್ರಕ್ಕೆ ಡಿಕೆಶಿ ನೆಕ್ಸ್ಟ್ ಸಿಎಂ ಬ್ರಹ್ಮಾಸ್ತ್ರ ಪ್ರಯೋಗ ಮಾಡಿದ್ದಾರೆ ಎಂದಿದ್ದಾರೆ.

ರಾಮನಗರದಲ್ಲಿ ಇಕ್ಬಾಲ್ ಹುಸೇನ್ ಮಾತನಾಡಿ, ಕ್ರಾಂತಿ ಹೇಳಿದವರೇ ಡೇಟ್ ಕೊಟ್ಟಿದ್ದಾರೆ, ಡಿಸಿಎಂ ಸಿಎಂ ಆಗುವ ಕಾಲ ಹತ್ತಿರ ಇದೆ. ಶಾಸಕರ ಸಂಖ್ಯಾಬಲವೂ ಇದೆ ಎಂದು ಬಾಂಬ್ ಹಾಕಿದ್ದಾರೆ.

ಇನ್ನೊಂದೆಡೆ ಸಿಎಂ ಆಪ್ತ ಶಾಸಕ ರಾಘವೇಂದ್ರ ಹಿಟ್ನಾಳ್ ಮಾತನಾಡಿ, ಸಿದ್ದರಾಮಯ್ಯ ಬದಲಾಗಲ್ಲ, ಫುಲ್ ಟರ್ಮ್ ಸಿಎಂ ಎಂದಿದ್ದಾರೆ. ಆದರೆ ಯಾರ ಸಹವಾಸವೂ ಬೇಡ, ಸಿದ್ದು, ಡಿಕೆಶಿ ನಮ್ಮ ಎರಡು ಕಣ್ಣು, ಹೈಕಮಾಂಡ್ ನಿರ್ಧಾರಕ್ಕೆ ಬದ್ಧ ಎಂದು ಶಾಸಕ ನಂಜೇಗೌಡ ಜಾಣತನದ ಹೇಳಿಕೆ ಕೊಟ್ಟಿದ್ದಾರೆ.

ಅಂದಹಾಗೆ ಸೋಮವಾರ ಸುರ್ಜೇವಾಲಾ ನೇತೃತ್ವದಲ್ಲಿ ಸಿಎಂ, ಡಿಸಿಎಂ ಸಭೆ ನಡೆಯಿತು. ಸಭೆಯಲ್ಲಿ ಸಿಎಂ, ಡಿಸಿಎಂ ಆಪ್ತರಿಗೆ ಬಿಸಿ ಮುಟ್ಟಿಸುವ ಸಂದೇಶ ಹೊರಬಿತ್ತು ಎನ್ನಲಾಗಿದೆ. ಮೈಸೂರು ಏರ್‌ಪೋರ್ಟ್‌ನಲ್ಲಿ ನಡೆದ ಘಟನೆಯ ವಿಡಿಯೋ ಬಗ್ಗೆ ಸುರ್ಜೇವಾಲಾ ಸಭೆಯಲ್ಲಿ ಪ್ರಸ್ತಾಪ ಆಗಿದೆ.

ಸಿದ್ದರಾಮಯ್ಯ ಡಿಕೆಶಿಯ ಕೈ ಎತ್ತಿ ಹಿಡಿದ ವಿಡಿಯೋ ಬಗ್ಗೆ ಪ್ರಸ್ತಾಪಿಸಿ, ನಾನು ವಿಡಿಯೋ ನೋಡಿದೆ, ಕೆಪಿಸಿಸಿ ಕಚೇರಿಯಲ್ಲಿ ತೋರಿಸಿದರು. ಒಳ್ಳೆಯ ಬೆಳವಣಿಗೆ. ನೀವಿಬ್ಬರು ಒಗ್ಗಟ್ಟು ಪ್ರದರ್ಶಿಸಿದ್ದು ಓಕೆ, ಆದರೆ ಕೆಲ ಮಿನಿಸ್ಟರ್ಸ್, ಶಾಸಕರು ಗೊಂದಲದ ಹೇಳಿಕೆಗಳು ಯಾಕೆ? ಎಂದು ಸುರ್ಜೇವಾಲಾ ಪ್ರಶ್ನಿಸಿದ್ರು ಎನ್ನಲಾಗಿದೆ. ಮೊದಲು ಅವರನ್ನ ಸರಿಮಾಡಬೇಕಿದೆ, ನೀವು ನಿಮ್ಮ ಆಪ್ತರನ್ನ ಎಂಟರ್ಟೈನ್ ಮಾಡ್ಬೇಡಿ. ಆಪ್ತರಿಗೆ ನೀವು ಬುದ್ಧಿ ಹೇಳಿ ಎಂದಿದ್ದಾರೆ. ನಾವು ವಾರ್ನ್ ಮಾಡುತ್ತೇವೆ, ನಾವು ಎಂಟರ್ಟೈನ್ ಮಾಡಲ್ಲ, ಮಾತಾಡ್ತೀವಿ ಎಂದು ಸಿಎಂ, ಡಿಸಿಎಂ ಭರವಸೆ ನೀಡಿದ್ದಾರೆ ಎನ್ನಲಾಗುತ್ತಿದೆ.

ಇನ್ನೂ ಸೆಪ್ಟೆಂಬರ್ ಕ್ರಾಂತಿ ಬಗ್ಗೆ ಮಾತನಾಡಿ ಕಾಂಗ್ರೆಸ್ ಒಳಗೆ ಕದನಕ್ಕೆ ಮುನ್ನುಡಿ ಬರೆದಿದ್ದ ರಾಜಣ್ಣ ಈಗ ಸೈಲೆಂಟ್ ಆಗಿದ್ದಾರೆ. ಇವತ್ತು ಏನನ್ನೂ ಮಾತನಾಡದೇ ಮೌನಕ್ಕೆ ಶರಣಾಗಿದ್ದಾರೆ. ಒಟ್ನಲ್ಲಿ ಡಿಕೆಶಿ ಆಪ್ತ ಶಾಸಕನಿಂದ ಮತ್ತೆ ಬಹಿರಂಗ ಹೇಳಿಕೆ ಹೊರಬಿದ್ದಿದ್ದು, ಯಾರೂ ಹೇಳಿದ್ರೂ ನಿಲ್ಲೋದಿಲ್ಲವಾ? ಸೆಪ್ಟೆಂಬರ್ ಕ್ರಾಂತಿಗೂ ಮುನ್ನವೇ ಬಲಾಬಲ ಆಟ ನಡೆಯಲು ಶುರುವಾಯ್ತಾ? ಎಂಬ ಪ್ರಶ್ನೆಗಳಿಗೆ ಕಾಲವೇ ಉತ್ತರಿಸಬೇಕಿದೆ.

# ಸಿದ್ದರಾಮಯ್ಯ ಲಾಟರಿ ಸಿಎಂ: ಸಮರ್ಥಿಸಿಕೊಂಡ ಬಿ.ಆರ್.ಪಾಟೀಲ್



**ಮಂಡ್ಯ:** ಸಿದ್ದರಾಮಯ್ಯ ಲಾಟರಿ ಹೊಡೆದು ಮುಖ್ಯಮಂತ್ರಿ ಆಗಿದ್ದಾರೆ ಎಂಬ ಹೇಳಿಕೆಯನ್ನು ಕಾಂಗ್ರೆಸ್ ಶಾಸಕ ಬಿಆರ್ ಪಾಟೀಲ್ ಸಮರ್ಥಿಸಿಕೊಂಡಿದ್ದಾರೆ.

ಕೆಆರ್ ಪೇಟೆಯಲ್ಲಿ ಮಾತನಾಡಿದ ಅವರು, ಜೆಡಿಎಸ್‌ನಿಂದ ಬಿಟ್ಟು ಬಂದ 8 ಶಾಸಕರಲ್ಲಿ ನಾನು ಒಬ್ಬ. ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಸೇರಿದ್ದೇವೆ. ಈ ಪೈಕಿ ಕೆಲವರು ಮಂತ್ರಿಗಳಾಗಿದ್ದಾರೆ. ಸಿದ್ದರಾಮಯ್ಯ ಲಕ್ಕಿ ಲಾಟರಿ ಹೊಡೆದು ಮುಖ್ಯಮಂತ್ರಿ ಆಗಿದ್ದಾರೆ ಎಂದರು.

ರಾಜ್ಯದಲ್ಲಿ ಅಪಸ್ವರ ಎದ್ದಿದ್ದಕ್ಕೆ ಸುರ್ಜೇವಾಲಾ ಬಂದಿದ್ದರು. ಶಾಸಕರ ನೋವು ಏನಿದೆ ಎಂದು ತಿಳಿದುಕೊಳ್ಳಲು ನನ್ನನ್ನು ಕರೆಸಿದ್ದರು. ನಾನು 45 ನಿಮಿಷ ಮಾತನಾಡಿ ಎಲ್ಲಾ ವಿವರ ನೀಡಿದ್ದೇನೆ. ನನ್ನ ಮಾತುಗಳನ್ನು ಗಂಭೀರವಾಗಿ ಪರಿಗಣಿಸುವುದಾಗಿ ಹೇಳಿದ್ದಾರೆ. ಮುಂದೆ ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವುದು ಅವರಿಗೆ ಬಿಟ್ಟದ್ದು ಎಂದರು.

ನಾನು ಸಿದ್ದರಾಮಯ್ಯ ರೈತ ಚಳುವಳಿ ಮೂಲಕ ಬಂದಿದ್ದೇವೆ. ನಂಜುಂಡಸ್ವಾಮಿ ಅವರು ಹುರಿದುಂಬಿಸಲಿಲ್ಲ ಎಂದರೆ ಸಿದ್ದರಾಮಯ್ಯ ರಾಜಕೀಯಕ್ಕೆ ಬರುತ್ತಿರಲಿಲ್ಲ. ಕೆಲವರಿಗೆ ಗಾಡ್ ಇದ್ದರೆ ಕೆಲವರಿಗೆ ಗಾಡ್‌ಫಾದರ್ ಇದ್ದಾರೆ. ನನಗೆ ಗಾಡ್ ಇಲ್ಲ, ಗಾಡ್‌ಫಾದರ್ ಇಲ್ಲ, ಸಿದ್ದಾಂತವೇ ನನ್ನ ಗಾಡ್‌ಫಾದರ್ ಎಂದು ವಂಗ್ಯವಾಡಿದರು.

ಸಿಎಂ ಬದಲಾವಣೆ ಬಗ್ಗೆ ಮಾತನಾಡುವ ಶಕ್ತಿ ನನಗೆ ಇಲ್ಲ. ಸಿಎಂ ಬದಲಾವಣೆ ಹೈಕಮಾಂಡ್‌ಗೆ ಬಿಟ್ಟ ವಿಚಾರ. ಡಿಕೆ ಶಿವಕುಮಾರ್ ಸಿಎಂ ಆಗುವುದು ನನಗೆ ಗೊತ್ತಿಲ್ಲ ಎಂದು ಹೇಳಿದರು.

ನಾಯಕತ್ವದ ವಿಚಾರದ ಬಗ್ಗೆ ಸುರ್ಜೇವಾಲಾ ಮಾತಾಡಿಲ್ಲ. ಸಿದ್ದರಾಮಯ್ಯ ಮೇಲೆ ಕೆಲ ವಿಚಾರ ಅದರಲ್ಲೂ ಅನುದಾನ ನೀಡುವ ವಿಚಾರದಲ್ಲಿ ನನಗೆ ಬೇಸರ ಇದೆ.ಇದನ್ನು ಹೈಕಮಾಂಡ್ ಬಳಿಯೂ ಹೇಳಿಕೊಂಡಿದ್ದೇವೆ ಎಂದರು.

Printed, Published & Owned by N.Venugopal Krishna, Printed at Dashapramathi Mudranalaya, No.45, 4th Cross, Srigandhadakaval, Bengaluru-560079.
Published at No.45, 4th Cross, Srigandhadakaval, Bengaluru-560079. Editor: N.Venugopal Krishna, Mobile No.+91 94835 89085,
email: sanjemugilu@gmail.com, RNI No.KARKAN/2002/08054